
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

23 ಜುಲೈ 2014 ಪುಟ 20 ರೂ. 15/-




ಕರಿಯ ಕಣ್‌ಬಿಟ್ಟ
ದಲಿತ ಬದುಕಿನ ಧ್ಯಾನ




ದುಡ್ಡೂ ಗೋತಾ ಮಾನಕ್ಕೂ ಲಾತಾ

ಕ್ಸಲ್ ಪುನರ್‌ವಸತಿ ಬಗ್ಗೆ ಒಂದು ಸಭೆ

ಕಾರವಾರ ಮರಳು ಮಾಫಿಯಾ







ಮಂಡ್ಯ ಅಂಬಿ ಸೈಟ್ ವಿವಾದ ದಕ್ಷ ಅಧಿಕಾರಿ ಎತ್ತಂಗಡಿ

ಚಿತ್ರದುರ್ಗ ಜಿ.ಪಂ. ಕದನ ಆಂಜನೇಯ



ವಿರುದ್ಧ




ಸುಧಾಕರ್

ಲಿಂಗಾಯತ ಧರ್ಮ ಏನುಂಟು? ಏನಿಲ್ಲ?



ತನ್ನ ವಿರುದ್ಧವೇ ವಾದಿಸಿಕೊಳ್ಳುವ ಮಧ್ಯಮವರ್ಗ

ಅಂಚಿನಿಂದ...



ಡಾ.ವಾಸು ಎಚ್.ವಿ.

ರೈಲ್ವೆ ಇಲಾಖೆಯಲ್ಲಿ ಖಾಸಗಿ ಹೂಡಿಕೆ ಹಾಗೂ ವಿದೇಶೀ ನೇರ ಹೂಡಿಕೆಗೆ ಅವಕಾಶ ಕೊಡುವ ಬಜೆಟ್‌ಅನ್ನು ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡರು ಮಂಡಿಸಿದ್ದಾರೆ. ಇದೇ ಹೊತ್ತಿನಲ್ಲಿ ನಡೆಯುತ್ತಿರುವ ರಾಜ್ಯ ವಿಧಾನ ಮಂಡಲದ ಅಧಿವೇಶನದಲ್ಲಿ ರಾಜ್ಯ ಆಹಾರ ಸಚಿವ ದಿನೇಶ್ ಗುಂಡೂರಾವ್ ಲಕ್ಷಾಂತರ 'ನಕಲಿ' ಪಡಿತರ ಚೀಟಿಗಳನ್ನು ಕಿತ್ತು ಹಾಕುವ ಸರ್ಕಾರದ ನಿರ್ಧಾರ ಪ್ರಕಟಿಸಿದ್ದಾರೆ. ದಿನೇಶ್ ಗುಂಡೂರಾವ್ ಮತ್ತು ಸಿದ್ದರಾಮಯ್ಯನವರ ಭಾವಚಿತ್ರ ಹೊತ್ತ 'ಅನ್ನಭಾಗ್ಯ' ಯೋಜನೆಯ ಜಾಹೀರಾತುಗಳು ಇಂದು ಎಲ್ಲೆಡೆ ರಾರಾಜಿಸಲಿವೆ. ಏಕೆಂದರೆ ಇಂದು 'ಅನ್ನಭಾಗ್ಯ' ಯೋಜನೆಗೆ ಒಂದು ವರ್ಷ ತುಂಬಲಿದೆ. ಕಳೆದ ಎರಡು ದಿನಗಳಿಂದ ಇದೇ ಅನ್ನಭಾಗ್ಯ ಯೋಜನೆಯಲ್ಲಿ ಹಮಾಲಿ (ಲೋಡಿಂಗ್ ಮತ್ತು ಅನ್‌ಲೋಡಿಂಗ್) ಕೆಲಸ ಮಾಡುವ ಕಾರ್ಮಿಕರು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಅತ್ಯಂತ ಶಾಂತಿಯುತವಾಗಿ ಅವರು ನಡೆಸಿದ ಪ್ರತಿಭಟನಾ ಮೆರವಣಿಗೆಯಿಂದ ಸ್ವಲ್ಪವೂ ಟ್ರಾಫಿಕ್ ವ್ಯತ್ಯಯವಾಗದಿದ್ದರೂ, ಎರಡು ಪತ್ರಿಕೆಗಳು ಎಂದಿನ ಟ್ರಾಫಿಕ್ ಜಾಮ್‌ನ ಚಿತ್ರವನ್ನೇ ತೆಗೆದು 'ಇದು ಪ್ರತಿಭಟನೆಗಳಿಂದ ಶೇಷಾದ್ರಿ ರಸ್ತೆಯಲ್ಲಾದ ಟ್ರಾಫಿಕ್ ಜಾಮ್' ಎಂದು ಪ್ರಕಟಿಸಿವೆ.

ಸಾಮಾಜಿಕ ತಾಣಗಳಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಬುಲೆಟ್ ರೈಲು ಓಡಿಸಲು ಖಾಸಗಿ ಹೂಡಿಕೆ ಹಾಗೂ ಸದಾನಂದ ಗೌಡರು ಬಜೆಟ್‌ಗೆ ಮುಂಚೆಯೇ ನಡೆಸಿದ ಐತಿಹಾಸಿಕ ಬೆಲೆ ಏರಿಕೆ (14.5% ಕಳೆದ 3 ದಶಕಗಳಲ್ಲಿ ಒಮ್ಮೆಯೂ ಆಗಿಲ್ಲ)ಯನ್ನು 'ಅತ್ಯಂತ ಅಗತ್ಯ ಮತ್ತು ಸೂಕ್ತ'ವೆಂದು ಸಮರ್ಥಿಸಲಾಗುತ್ತಿದೆ. ಇನ್ನು ಬಡವರಿಗೆ ಅಕ್ಕಿ ನೀಡುವ ಯೋಜನೆಗಳು ಹಾಗೂ ಟ್ರಾಫಿಕ್ ಜಾಮ್‌ನ ಕುರಿತು ಈ ವರ್ಗದ ಅಭಿಪ್ರಾಯವೇನಾಗಿರುತ್ತದೆ ಎಂಬುದು ಸರ್ವವಿದಿತ. ಹೆಚ್ಚಿನ ಪತ್ರಿಕೆ ಹಾಗೂ ಟಿವಿ ಚಾನೆಲ್‌ಗಳ ಸಂಪಾದಕೀಯಗಳು ಹಾಗೂ ಆಂಕರ್‌ಗಳೇ ಅಭಿಪ್ರಾಯ ರೂಪಿಸುವ ಪ್ಯಾನೆಲ್ ಚರ್ಚೆಗಳು ಸರ್ಕಾರದ ನೀತಿಗಳ ಪರವಾಗಿವೆ.

ಒಂದಕ್ಕೊಂದು ಸಂಬಂಧವಿರುವ ಆದರೆ ಮೇಲ್ನೋಟಕ್ಕೆ ಸಂಬಂಧ ಕಾಣದ ಮೇಲಿನೆಲ್ಲಾ ಸಂಗತಿಗಳು ಒಂದನ್ನು ಸ್ಪಷ್ಟಪಡಿಸುತ್ತಿದೆ. ಅದೇನೆಂದರೆ, ಈ ದೇಶದ ಆಳುವ ಸರ್ಕಾರಗಳು ಮಧ್ಯಮ ವರ್ಗದ ಹೆಗಲಿನ ಮೇಲೆ ಬಂದೂಕಿಟ್ಟು, ಅವರಿಗಿಂತ ಕೆಳಗಿನ ವರ್ಗಗಳ ಮೇಲೆ ಗುಂಡು ಚಲಾಯಿಸುತ್ತಿವೆ. ಆ ಗುಂಡುಗಳು ಚಿಮ್ಮಿಸುತ್ತಿರುವ ರಕ್ತದ ಥ್ರಿಲ್‌ನಲ್ಲಿ ಮುಳುಗಿರುವ ಮಧ್ಯಮವರ್ಗ ತನ್ನ ಹೆಗಲ ಮೇಲಿನ ಭಾರ ಹೆಚ್ಚಾಗುತ್ತಿರುವುದನ್ನು ಗಮನಿಸುತ್ತಿಲ್ಲ. ಕಾಂಗ್ರೆಸ್‌ನಲ್ಲಿರುವ 'ಎಡ' ಗುಂಪು ಅನ್ನಭಾಗ್ಯದ ರೀತಿಯ ಯೋಜನೆಗಳನ್ನು ಜಾರಿ ಮಾಡಲು ಒಂದಷ್ಟು ಪ್ರಯತ್ನ ಹಾಕುತ್ತಿರುವುದು ನಿಜವಾದರೂ, ಅಧಿಕಾರಶಾಹಿ ಅದಕ್ಕೆ ಹಾಕುತ್ತಿರುವ ಕಡಿವಾಣವು ಸಾರಾಂಶದಲ್ಲಿ ಕಾಂಗ್ರೆಸ್‌ಗೂ ಬಿಜೆಪಿಗೂ ಯಾವ ವ್ಯತ್ಯಾಸವೂ ಇಲ್ಲದಂತೆ ಮಾಡುತ್ತಿದೆ. ಅಧಿಕಾರಶಾಹಿಯ ಈ ಧೋರಣೆಗೆ ಕಡಿವಾಣ ಹಾಕಿ, ಜನಪರ ಯೋಜನೆಗಳನ್ನು ಜಾರಿ ಮಾಡುವಷ್ಟು 'ಎಡನೀತಿ' ಕಾಂಗ್ರೆಸ್‌ನ ಯಾವ ಧುರೀಣರಲ್ಲೂ ಇಲ್ಲವೆಂಬುದಕ್ಕೆ ಹೆಚ್ಚಿನ ಸಾಕ್ಷ್ಯಾಧಾರಗಳೇನೂ ಬೇಕಿಲ್ಲ. ಇಂತಹ ರಾಜಕೀಯ ನಾಯಕರು, ಮಾಧ್ಯಮಗಳು ಮತ್ತು ಅಧಿಕಾರಶಾಹಿ ಸೇರಿಕೊಂಡು ಬಂಡವಾಳಿಗರ ಪರವಾದ ಆರ್ಥಿಕ ನೀತಿಗೆ ಬೇಕಾದ ಅಭಿಪ್ರಾಯ ರೂಪಿಸುತ್ತಿದ್ದಾರೆ. ಅಭಿಪ್ರಾಯ ನಿರೂಪಣೆಯೆಂದರೆ ದೇಶದ ಸಮಸ್ತ ಜನರ ಸಮಷ್ಟಿ ಅಭಿಪ್ರಾಯದ ಅಭಿವ್ಯಕ್ತಿ ಎಂದೇನೂ ಭಾವಿಸಬೇಕಿಲ್ಲ. ಅದು ಮಧ್ಯಮ ವರ್ಗದ ಸರಾಸರಿ ಅಭಿಪ್ರಾಯವಷ್ಟೇ ಆಗಿರುತ್ತದೆ.

ಆದರೆ ವಾಸ್ತವವೇನೆಂದರೆ, ಈ ಪ್ರಕ್ರಿಯೆಯಲ್ಲಿ ಮಧ್ಯಮವರ್ಗವು ತನ್ನ ವಿರುದ್ಧ ತಾನೇ ವಾದಿಸಿಕೊಳ್ಳುತ್ತಿದೆ ಎಂಬುದನ್ನು ಮರೆಯುತ್ತಿದೆ. ಉದಾಹರಣೆಗೆ ಪಡಿತರ ವಿತರಕ ವ್ಯವಸ್ಥೆಯನ್ನೇ ತೆಗೆದುಕೊಳ್ಳಿ. ಬಡವರಿಗೆ ಯಾಕೆ ಅಕ್ಕಿಯನ್ನು ಉಚಿತವಾಗಿ ಅಥವಾ ಒಂದು ರೂ.ಗೆ ಒಂದು ಕೆ.ಜಿ. ಧಾನ್ಯದಂತೆ ಕೊಡಬಾರದು ಎಂಬುದಕ್ಕೆ ಮಧ್ಯಮ ವರ್ಗದ ವಾದಸರಣಿ ನಮಗೆ ಗೊತ್ತೇ ಇದೆ. 'ಅವರು ಸೋಮಾರಿಗಳಾಗುವುದು', 'ಉತ್ಪಾದಕತೆ ಕಡಿಮೆಯಾಗುತ್ತದೆ', 'ನಮ್ಮ ತೆರಿಗೆಯನ್ನು ತೆರಿಗೆ ನೀಡದವರಿಗೆ ಸುರಿಯಬಾರದು' ಇತ್ಯಾದಿ. ಅದರ ಜೊತೆಗೆ ಈಗ ಮೇಲೆ ಹೇಳಿದ ಕೂಟ (ಅಧಿಕಾರಶಾಹಿ, ಮಾಧ್ಯಮಗಳು ಮತ್ತು ರಾಜಕೀಯ ನಾಯಕರು) ಇನ್ನೊಂದು ವಾದವನ್ನು ಪ್ರಬಲವಾಗಿ ಮುಂದಿಡುತ್ತಿದೆ. ಆಹಾರ ವಿತರಣಾ ಸರಣಿಯಲ್ಲಿನ ಭ್ರಷ್ಟಾಚಾರದ ಕಾರಣದಿಂದ ಉಂಟಾಗುವ ಸೋರಿಕೆಯದ್ದು. ಇದು ಹೊಸ ವಾದವೇನೂ ಅಲ್ಲ. ಆದರೆ ತಮ್ಮದೇ ಕಾರಣಗಳಿಗಾಗಿ ಕೋಟಿಯಷ್ಟು ಬಿಪಿಎಲ್ ಕಾರ್ಡುಗಳನ್ನು ನೀಡಿದ ಸರ್ಕಾರವು ಇಂದು ಕಾರ್ಡುಗಳನ್ನು ಕಿತ್ತು ಹಾಕಲು ಹೊರಟಿದೆ ಮತ್ತು 'ಅನ್ನಭಾಗ್ಯ' ಯೋಜನೆಯನ್ನು ಉಳಿಸಿಕೊಂಡರೂ, ಹಿಂದಿಗಿಂತ ಹೆಚ್ಚು ಸರ್ಕಾರದ ಮೇಲೆ ಆರ್ಥಿಕ ಹೊರೆ ಬೀಳದಷ್ಟು ಪ್ರಮಾಣಕ್ಕೆ ಅದನ್ನು ದುರ್ಬಲಗೊಳಿಸಲು ತೀರ್ಮಾನಿಸಿದೆ. ಆ ಕಾರಣದಿಂದ, ಸೋರಿಕೆಯನ್ನು ತಡೆಗಟ್ಟುವ ಹೊಸ ಕ್ರಮಗಳಿಗೆ ಅದು ಮುಂದಾಗಿದೆ. ಹಾಗೂ ಅದಕ್ಕೆ ಬೇಕಾದ ಅಭಿಪ್ರಾಯ ಸೃಷ್ಟಿಯನ್ನೂ ಮಾಡಹೊರಟಿದೆ.



ಪಡಿತರ ವ್ಯವಸ್ಥೆಯಲ್ಲಿ ಸೋರಿಕೆ ಹೊಸದಲ್ಲ, ಆದರೆ ಸೋರಿಕೆಯನ್ನು ತಡೆಗಟ್ಟಲು ಯಶಸ್ವಿಯಾಗಿರುವ ಮಾದರಿಯನ್ನು ಕರ್ನಾಟಕ ಸರ್ಕಾರ ಒಪ್ಪಲು ಸಿದ್ಧವಿಲ್ಲ. ಕಳೆದ ಯುಪಿಎ ಸರ್ಕಾರದ ಆಹಾರ ಸಚಿವ ಕೆ.ವಿ.ಥಾಮಸ್ ಅವರ ಪ್ರಕಾರ ಒಟ್ಟಾರೆ ಪಡಿತರ ವ್ಯವಸ್ಥೆಯಲ್ಲಿ ಇರುವ ಸೋರಿಕೆಯ ಪ್ರಮಾಣ 20ರಿಂದ 30%. ಈ ಸೋರಿಕೆಯ ಕುರಿತು ಒಂದು ಮಹತ್ವದ ಅಂಶ, ಹಲವಾರು ಅಧ್ಯಯನಗಳಲ್ಲಿ ಬೆಳಕಿಗೆ ಬಂದಿದೆ. ಸರ್ಕಾರೀ ಅಂಕಿ-ಅಂಶಗಳು ಅದನ್ನು ಸಮರ್ಥಿಸುತ್ತವೆ. ಅದೇನೆಂದರೆ, ಹೆಚ್ಚೆಚ್ಚು ಜನರನ್ನು ಪಡಿತರ ವಿತರಕ ವ್ಯವಸ್ಥೆಯೊಳಗೆ ತಂದಷ್ಟೂ ಸೋರಿಕೆ ಕಡಿಮೆಯಾಗುತ್ತದೆ!

1999-2000ರಲ್ಲಿ ಪಡಿತರ ವಿತರಕ ವ್ಯವಸ್ಥೆಯಲ್ಲಿ ಇದ್ದ ಸೋರಿಕೆ 24%. ಅದು 2004-2005ರ ಹೊತ್ತಿಗೆ 54%ಗೆ ಏರಿತ್ತು. ಇದು ಬಹುತೇಕ ಸಾರ್ವತ್ರಿಕ ಪಡಿತರ ವಿತರಕ ವ್ಯವಸ್ಥೆ (Universal Public Distribution System-UPDS)ಯಾಗಿದ್ದುದನ್ನು, ಆಯ್ದ ಪಡಿತರ ವಿತರಕ ವ್ಯವಸ್ಥೆ (Targeted Public Distribution System-TPDS) ಮಾಡುವ ಸರ್ಕಾರದ ನೀತಿಗಳ ಕಾರಣಕ್ಕಾಗಿತ್ತು. ಅಂದರೆ ಎನ್‌ಡಿಎ ಸರ್ಕಾರವು 'ಪಡಿತರ ವಿತರಕ ವ್ಯವಸ್ಥೆ ಎಲ್ಲರಿಗೂ ಅಲ್ಲ' ಎಂಬ ನೀತಿಯನ್ನು ಜಾರಿಗೆ ತಂದಿತ್ತು ಮತ್ತು ರಾಜ್ಯ ಸರ್ಕಾರಗಳಿಗೂ ಕಾರ್ಡುಗಳ ಸಂಖ್ಯೆ ಕಡಿಮೆ ಮಾಡಲು ಹೇಳಿತ್ತು. ಆಗಲೇ ಬಿಪಿಎಲ್-ಎಪಿಎಲ್- ಅಂತ್ಯೋದಯ-ಅನ್ನಪೂರ್ಣ ಇತ್ಯಾದಿ ವಿಭಾಗಗಳು ಸೃಷ್ಟಿಯಾದದ್ದು. ಈ ನೀತಿಯನ್ನು ಸಂಯುಕ್ತ ರಂಗದ ಸರ್ಕಾರವೇ ಘೋಷಿಸಿತ್ತಾದರೂ, ಅದನ್ನು ಪಟ್ಟು ಹಿಡಿದು ಜಾರಿಗೊಳಿಸಿದ್ದು 2000-01ರಿಂದ, ಎನ್‌ಡಿಎ ಸರ್ಕಾರದ ಅವಧಿಯಲ್ಲಿ.



ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದನಂತರ ಈ ನೀತಿಯಲ್ಲಿ ಬದಲಾವಣೆ ಆರಂಭವಾಯಿತು. ಅದಕ್ಕೆ ಎರಡು ಕಾರಣಗಳಿದ್ದವು. ಒಂದು ಮೇಲೆ ಹೇಳಿದ ನೀತಿಯನ್ನು ಅನುಸರಿಸಿದ ಎನ್‌ಡಿಎ ಸರ್ಕಾರ ಮತ್ತು ಅದರ 'ಭಾರತ ಪ್ರಕಾಶಿಸುತ್ತಿದೆ' ಪ್ರಚಾರದ ವಿರುದ್ಧ ಜನರು ಮತ ಹಾಕಿದ್ದರು. ಎರಡನೆಯದಾಗಿ ಎಡಪಕ್ಷಗಳು ಅತ್ಯಂತ ಹೆಚ್ಚು ಸೀಟು ಪಡೆದು, ಯುಪಿಎ 1ಕ್ಕೆ ಬೆಂಬಲ ನೀಡಿದ್ದರು. ಈ ಹೊತ್ತಿನಲ್ಲಿ ಕೆಲವು ರಾಜ್ಯಗಳು ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ತಮ್ಮದಾಗಿಸಿಕೊಂಡವು. ಅವುಗಳ ಸಾಧನೆ ಗಮನಾರ್ಹ. ಭ್ರಷ್ಟ ರಾಜ್ಯವೆಂದು ಕುಖ್ಯಾತವಾಗಿರುವ ಬಿಹಾರದ್ದೇ ಉದಾಹರಣೆಯನ್ನು ನೋಡೋಣ. ಅಲ್ಲಿ 2009-10ರಲ್ಲಿ ಶೇ.65 ಸೋರಿಕೆ ಇತ್ತು. 2011-12ರ ಹೊತ್ತಿಗೆ ಅದು ಶೇ.12ಕ್ಕೆ ಇಳಿಯಿತು! ಈ ಅವಧಿಯಲ್ಲಿ ಆ ರಾಜ್ಯದಲ್ಲಿ ಪಡಿತರ ವಿತರಕ ವ್ಯವಸ್ಥೆಯ ಫಲಾನುಭವಿಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿತ್ತು ಮತ್ತು ಅದರ ಜೊತೆಗೆ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಮತ್ತು ತಂತ್ರಜ್ಞಾನದ ಸದುಪಯೋಗಮಾಡಿಕೊಳ್ಳಲು ಆರಂಭಿಸಿತ್ತು.

ಸೋರಿಕೆ ಅತ್ಯಂತ ಕಡಿಮೆ ಇರುವ ಇನ್ನೂ ಮೂರು ರಾಜ್ಯಗಳನ್ನು ನೋಡಿ. ಭೌಗೋಳಿಕತೆ, ಆರ್ಥಿಕ ಬೆಳವಣಿಗೆಯ ದರ ಸಂಪೂರ್ಣ ಭಿನ್ನವಾಗಿರುವ 3 ರಾಜ್ಯಗಳು: ಛತ್ತೀಸ್‌ಗಢ, ಒರಿಸ್ಸಾ ಮತ್ತು ತಮಿಳುನಾಡು. ಇಲ್ಲಿ ಸಾರ್ವತ್ರಿಕ ಪಡಿತರ ವಿತರಕ ವ್ಯವಸ್ಥೆ ಇದೆ. ಸಾರ್ವತ್ರಿಕ ಪಡಿತರ ವಿತರಕ ವ್ಯವಸ್ಥೆಯಲ್ಲಿ ಬೇರೆ ಬೇರೆ ಕಾರಣಗಳಿಂದ ಕಾರ್ಡು ವಂಚಿತರಾಗುವ ಬಡವರು ಮಾತ್ರವಲ್ಲದೇ ಮಧ್ಯಮ ವರ್ಗವೂ ಫಲಾನುಭವಿಯಾಗಿರುತ್ತದೆ ಎಂಬುದನ್ನು ಗಮನಿಸಬೇಕು. ಆದರೆ ಇದನ್ನು ಮಧ್ಯಮ ವರ್ಗವೇ ವಿರೋಧಿಸುತ್ತದೆ!

ಇದರ ಪರಿಣಾಮವಾಗಿ ಜನವಿರೋಧಿಯಾಗಿರುವ ಅಧಿಕಾರಶಾಹಿ ಮತ್ತು ಮಾಧ್ಯಮಗಳು (ಇವು ಹೆಚ್ಚೆಚ್ಚು ಮಧ್ಯಮ ವರ್ಗದ ಹಿನ್ನೆಲೆಯ ಸಿಬ್ಬಂದಿಯನ್ನೂ, ದೊಡ್ಡ ಬಂಡವಾಳಿಗರ ಮಾಲೀಕತ್ವವನ್ನೂ ಹೊಂದಿರುತ್ತವೆ) ಬಡವರ ಕಾರ್ಡುಗಳಿಗೆ ಕತ್ತರಿ ಹಾಕಲು ಶುರು ಮಾಡುತ್ತವೆ. ಕರ್ನಾಟಕದಲ್ಲೂ ದಕ್ಷ ಹಾಗೂ ಪ್ರಾಮಾಣಿಕ ಎಂದು ಹೆಸರು ಮಾಡಿರುವ ಐಎಎಸ್ ಅಧಿಕಾರಿ ಹರ್ಷ ಗುಪ್ತಾ ಆಹಾರ ಇಲಾಖೆಯ ಆಯುಕ್ತರಾದ ಮೇಲೆ ಅದನ್ನೇ ಮಾಡಲು ಶುರು ಮಾಡಿದ್ದಾರೆ. ಕಾಳಸಂತೆಕೋರರನ್ನು ಹಿಡಿಯುವುದು, ಸೋರಿಕೆಯನ್ನು ತಡೆಗಟ್ಟುವುದು, ದಕ್ಷತೆಯಿಂದ ನಿಭಾಯಿಸುವುದು ಒಳ್ಳೆಯ ಗುಣಗಳೇ. ಆದರೆ ಮಾನವೀಯತೆಯಿಲ್ಲದೇ ನಡೆಸುವ ಇಂತಹ ಕೆಲಸಗಳು ಪ್ರಜಾಪ್ರಭುತ್ವ ವಿರೋಧಿಯಾಗಿರುತ್ತದೆ. ಅದೇ ಇಲ್ಲೂ ಆಗುತ್ತಿದೆ.

ಸೋರಿಕೆಯನ್ನು ತಡೆಗಟ್ಟಲು ಅವರು ಮಾಡಿರುವ ಒಂದು ಉಪಾಯ, ಭಾರತೀಯ ಆಹಾರ ನಿಗಮದ ಗೋದಾಮುಗಳಿಗೂ, ಪಡಿತರ ವಿತರಕ ನ್ಯಾಯಬೆಲೆ ಅಂಗಡಿಗಳಿಗೂ ಮಧ್ಯೆ ಇದ್ದ ಒಂದು ಸ್ತರ (ತಾಲೂಕು ಮಟ್ಟದ ಟಿಎಪಿಸಿಎಂಎಸ್ ಮತ್ತು ಕೆಎಫ್‌ಸಿಎಸ್‌ಸಿ ಗೋದಾಮುಗಳು)ವನ್ನು ಕಿತ್ತು ಹಾಕುವುದು. ನೇರವಾಗಿ, ಎಫ್‌ಸಿಐ ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜು ಮಾಡುವುದು. ಆ ಮೂಲಕ ಸರ್ಕಾರದ ಒಂದಷ್ಟು ಹಣ ಉಳಿಯುತ್ತದೆ ಮಾತ್ರವಲ್ಲ, ಸೋರಿಕೆಯನ್ನೂ ತಡೆಗಟ್ಟಬಹುದು ಎಂಬುದು ಅವರ ಆಲೋಚನೆ. ಆದರೆ ಇವೇ ತಾಲೂಕು ಮಟ್ಟದ ಗೋದಾಮುಗಳಲ್ಲಿ ಕಳೆದ 30 ವರ್ಷಗಳಿಂದ 7,500ಕ್ಕೂ ಹೆಚ್ಚು ಹಮಾಲಿ ಕಾರ್ಮಿಕರು ಕೆಲಸ ಮಾಡಿದ್ದಾರೆ. ಅವರಿಗೆ ಹರ್ಷ ಗುಪ್ತಾ ಅವರ ಇಲಾಖೆ ಒಂದೇ ಒಂದು ಕಾರ್ಮಿಕ ಕಾನೂನಿನ ಸೌಲಭ್ಯವೂ ಇಲ್ಲದೇ ಜೀತ ಮಾಡಿಸಿಕೊಂಡಿತ್ತು ಎಂಬುದು ನೆನಪಿಗೆ ಬರುವುದೇ ಇಲ್ಲ. ಒಂದರ್ಥದಲ್ಲಿ ಕಾರ್ಮಿಕರನ್ನು ಕಿತ್ತು ಹಾಕಿ ಅವರ ಜೀತ ವಿ... ಮಾಡಿಸಲು ಆಹಾರ ಇಲಾಖೆ ಹೊರಟಿದೆ. ಅ... ಉದ್ಯೋಗವೂ ಇಲ್ಲದೇ ಹಸಿವಿನಿಂದ ಸತ್ತು ವಿ... ಪಡೆದುಕೊಳ್ಳುವುದು.

ಆದರೆ ಈ ಒಂದು ಕ್ರಮಕ್ಕೆ ಕೆಲವು ವಲಯಗ... ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಏಕೆಂದರೆ, ಇದು 'ಸೋ... ತಡೆಗಟ್ಟುವ ಕ್ರಮ', 'ಭ್ರಷ್ಟಾಚಾರವನ್ನು ತಡೆಯಬಾ... ಪಡಿತರ ವಿತರಕ ವ್ಯವಸ್ಥೆಯಲ್ಲಿನ ಸೋರಿಕೆಯ ಕ... ಅಧ್ಯಯನ ಮಾಡಿರುವ ಮಿಹಿಕಾ ಚಟರ್ಜಿ ... ಸಂಶೋಧಕರು ತಮ್ಮ ಸಂಶೋಧನಾ ಲೇಖನದ ಕೊ... ಸಾಲಿನಲ್ಲಿ ಹೀಗೆ ಹೇಳುತ್ತಾರೆ: 'ಸೋರಿಕೆ ತಡೆ... ಬೇಕಾದ ಪರ್ಯಾಯ ಕ್ರಮಗಳನ್ನು ಶೋಧಿಸಲು ... ಪಡಿತರ ವಿತರಕ ವ್ಯವಸ್ಥೆಯನ್ನು ವಂ... ಕಟ್ಟುನಿಟ್ಟುಗೊಳಿಸುವುದನ್ನು ನಾನು ಬೇಡವೆನ್ನು... ಬಡತನ ನಿವಾರಣೆಗೆ ಬೇಕಾದ ಇತರ ರಾಚನಿಕ ಕ್ರಮ... ತೆಗೆದುಕೊಳ್ಳಬೇಕೇ ಹೊರತು, ಕೇವಲ ... ಸಬ್ಸಿಡಿಗಳಲ್ಲೇ ಜನರನ್ನು ಶಾಶ್ವತವಾಗಿ ಮುಳುಗಿಸಬೇಕೆ... ನಾನು ಹೇಳುವುದಿಲ್ಲ. ಆದರೆ ಪಡಿತರ ವಿ... ವ್ಯವಸ್ಥೆಯೊಂದು ಸರಿಪಡಿಸಲಾಗದಷ್ಟು ಕೆಟ್ಟು ಹೋ... ವ್ಯವಸ್ಥೆಯೆಂದು ಆರೋಪಿಸಿ, ಜನವಿರೋಧಿ ಕ್ರಮ... ಮುಂದಾಗಲು ನೀವು ಬಳಸುತ್ತಿರುವ ವಾದಸರ... ಅತೀ ಸರಳೀಕೃತ ವಾದವಾಗಿದೆ. ಇದು ನಿ... ಮಾಹಿತಿಯನ್ನು ನೀಡಿ ಸರಿಯಾದ ಸಾರ್ವ... ಅಭಿಪ್ರಾಯವನ್ನು ಮೂಡಿಸದೇ ತಪ್ಪು ಮಾಹಿತಿ... ನೀಡುವುದರ ಮೂಲಕ ದಿಕ್ಕುತಪ್ಪಿಸುವ ಕೆಲಸ ... ಏಕೆಂದರೆ, ಪಡಿತರ ವಿತರಕ ವ್ಯವಸ್ಥೆಯ ಜಾಲ... ಇನ್ನೂ ಹೆಚ್ಚು ಫಲಾನುಭವಿಗಳನ್ನು ಒಳಗೊಳ್ಳ... ಸೋರಿಕೆಯನ್ನು ತಡೆಗಟ್ಟಲು ಇರುವ ಒಂದು ಪ್ರ... ಅಗತ್ಯವಾಗಿದೆ'.

ತಿರುಚಿದ ವಾದಸರಣಿ, ಮೇಲ್ನೋಟಕ್ಕೆ ಸರಿ... ತೋರುವ ಆದರೆ ಒಳಗೆ ಪೊಳ್ಳಾಗಿ... ಅಂಶಗಳನ್ನಿಟ್ಟುಕೊಂಡು ಮಧ್ಯಮವರ್ಗವನ್ನು ನಂಬಿ... ಸುಲಭವಾಗಿದೆ. ಹಾಗಾಗಿ ಮಧ್ಯಮವರ್ಗ... ಬಳಸಿಕೊಂಡು, ಬಡವರ ವಿರೋಧಿ ಕ್ರಮ... ಸಾಧಿಸುವುದು ಹಾಲಿ ಬಳಕೆಯಲ್ಲಿರುವ ಒಂದು ಪ್ರ... ವಿಧಾನವಾಗಿದೆ. ಇಲ್ಲಿ ತೋರಲಾಗಿರುವ ಉದಾಹರ... ಬಲಿಪಶುಗಳು ಹಮಾಲರಂತಹ ದುಡಿಯುವ ... ಬಿಪಿಎಲ್ ಕಾರ್ಡು ಅತ್ಯಗತ್ಯವಾಗಿರುವ ಬ... ಬಲಿಪಶುಗಳಾಗುತ್ತಾರೆ ಮಾತ್ರವಲ್ಲ, ತಾನೂ ಪಡಿ... ಪಡೆಯುವ ಅವಕಾಶವನ್ನೂ ಮಧ್ಯಮ ವ... ಕಳೆದುಕೊಳ್ಳುತ್ತದೆ.

ರೈಲ್ವೇ ವಿಚಾರಕ್ಕೆ ಬರುವುದಾದರೆ, ಬುಲೆಟ್ ... ಆಸೆ ತೋರಿಸಿ ಖಾಸಗಿ ವಲಯಕ್ಕೆ ... ಮಾಡಿಕೊಡುತ್ತಿರುವ ಸದಾನಂದ ಗೌಡರು ನಂತರ ... ಖಾಸಗಿ ವಲಯದ ಕಾರಣಕ್ಕೆ ಸರ್ಕಾರೀ ರೈಲ್ವೆ ... ಮುಚ್ಚಬೇಕಾಗುತ್ತದೆ ಅಥವಾ ದುಬಾರಿಗೊಳಿಸಬೇಕಾ... ಆಗ ಮಧ್ಯಮವರ್ಗವೂ ನಿಧಾನಕ್ಕೆ ಸ್ಲೀಪರ್ ಬೋಗಿ... ಜನರಲ್ ಬೋಗಿಗೆ ಸ್ಥಳಾಂತರಗೊಳ್ಳಬೇಕಾಗುತ್ತದೆ. ... ವೆಚ್ಚದಲ್ಲಿ ಅಥವಾ ಟಿಕೆಟ್ಟೇ ಇಲ್ಲದೇ ಜನರಲ್ ಬೋ... ಪ್ರಯಾಣಿಸುವ, ಅಲ್ಲಿ ತುಂಬಾ ಜನಸಂದಣಿ ... ಕೆಲವೊಮ್ಮೆ ಸ್ಲೀಪರ್ ಬೋಗಿಗೂ ನುಗ್ಗುವ ಸಾಮಾ... ಬಯ್ದುಕೊಳ್ಳುವ ಮಧ್ಯಮವರ್ಗಕ್ಕೆ ಆಗ ಇದ... ಗೊತ್ತಾಗುತ್ತದೆ. ಅಲ್ಲಿಯವರೆಗೆ ಇವರು ಸರ್ಕಾರದ ... ಪರ ದನಿಯೆತ್ತುತ್ತಲೇ ಇರುತ್ತಾರೆ. ಏಕೆಂದರೆ ಈ ... ಫ್ಯಾಸಿಸಂನಲ್ಲಿ ಬಡವರ ವಿರುದ್ಧ ಮಧ್ಯಮವರ್ಗ... ಎತ್ತಿಕಟ್ಟುವುದೂ ಸೇರಿಕೊಂಡಿರುತ್ತದೆ.

ಚೋರ ಗುರು ಮೋದಿ, ಚಂಡಾಲ ಶಿಷ್ಯ ಷಾ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಲಿಸ್ಟಟ ಕ್ರಿಮಿನಲ್ ಆದ ಅಮಿತ್ ಷಾ ...ಯಾತನನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸುವ ಮೂಲಕ ...ಘ ಪರಿವಾರ ಇಡೀ ಬಿಜೆಪಿ ಪಕ್ಷವನ್ನೇ ನರಹಂತಕ ...ರೇಂದ್ರ ಮೋದಿಯ ಕೈಗಳಿಗೆ ಧಾರೆ ಎರೆದಿದೆ. ...ದರೆ ಈ ಪ್ರಕ್ರಿಯೆಯಿಂದಾಗಿ ಈಗ ಮೋದಿ ...ಾನಿಯೂ 'ಹೌದು, ಬಿಜೆಪಿಯ ಅನಭಿಷಕ್ತ ...ರೆಯೂ ಆದಂತಾಗಿದೆ. ಹೀಗೆ ಸರ್ಕಾರ ಮತ್ತು ... ಎರಡೂ ಮೋದಿಯಂತಹ ಸರ್ವಾಧಿಕಾರಿ ...ವೃತ್ತಿಯ ವ್ಯಕ್ತಿಯ ಕಪಿಮುಷ್ಟಿಗೆ ಹೋಗಿರುವುದು ...ಷ್ಟಟ ಮತ್ತು ಪ್ರಾಮಾಣಿಕ ಚೆಡ್ಡಿಗಳಲ್ಲೂ ಭೀತಿ ...ಟ್ಟಿಸಿದೆ.

ಈ ಅಮಿತ್ ಷಾ ಅಂತಿಂತಹ ವ್ಯಕ್ತಿಯಲ್ಲ. ...ೋದಿಯ ಪಕ್ಕಾ ಬೆಂಬಲಿಗನೂ, ಕಟ್ಟಾ ಶಿಷ್ಯನೂ ... ಷಾ ತನ್ನ ಗುರುವಿನಂತೆ ಚಾಣಾಕ್ಷ; ಸ್ವಂತ ...ಭಕ್ಕಾಗಿ ಎಂತಹ ಕೃತ್ಯಕ್ಕೂ ಹೇಸದವನು; ...ಂತ್ರಗಳನ್ನು ಹೆಣೆಯುವುದರಲ್ಲಿ ಎತ್ತಿದ ಕೈ ...ಸಿಕೊಂಡಿರುವವನು; ತನ್ನ ವೈರಿಗಳನ್ನು ಸೈಲೆಂಟಾಗಿ ...ರ್ನಾಮ ಮಾಡಬಲ್ಲವನು; ಕಾನೂನುಗಳನ್ನು ...ರ್ಲಕ್ಷಿಸುವವನು. ಮೋದಿಯಂತೆ ಷಾ ಕೂಡ ಕೊಲೆ ...ಾಡಿರುವ ಆರೋಪ ಎದುರಿಸುತ್ತಿರುವವನು. ...ತಹ ವ್ಯಕ್ತಿಯನ್ನು ಭಾರತೀಯ ಜನತಾ ಪಕ್ಷದ ...ಧ್ಯಕ್ಷನ ಸ್ಥಾನದಲ್ಲಿ ಆರೆಸ್ಸೆಸ್ ಕೂಡಿಸುತ್ತದೆಂದರೆ ...ವರ ಹಿಂದೆ ದೊಡ್ಡ ದುರಾಲೋಚನೆ ಇದ್ದೇ ಇದೆ.

'ಅಭಿವೃದ್ಧಿ' ಎಂಬ ಲೇಬಲ್ ಅಡಿ ಮೋದಿ ...ರಚಿದ ಮಂಕುಬೂದಿ ಮತ್ತು ತಲಮಟ್ಟದಿಂದ ...ವಿಧ ಪಕ್ಷಗಳ ನಾಯಕರ ಮಟ್ಟದವರೆಗೂ ಷಾ ...ೂಪಿಸಿದ ತಂತ್ರದಿಂದಾಗಿಯೇ ಎರಡು ತಿಂಗಳ ಹಿಂದೆ ...ಜೆಪಿ ಸ್ವಂತ ಶಕ್ತಿಯ ಮೇಲೆ ...ಧಿಕಾರಕ್ಕೇರುವಂತಾಯಿತು. ಆಗ 'ನಮೋ, ನಮೋ' ...ನ್ನುತ್ತಾ ಬಿಜೆಪಿ ಮೋದಿಯನ್ನು ಪ್ರಧಾನಿ ...ದ್ದುಗೆಯಲ್ಲಿ ಕೂರಿಸಿತ್ತು, ಈಗ ಆತನ 'ಚೆಡ್ಡಿ ...ಬೋಸ್' ಷಾನನ್ನೂ ಬಿಜೆಪಿಯ ನಾಯಕನನ್ನಾಗಿಸಿದೆ. ...ೋರ ಗುರು, ಚಂಡಾಲ ಶಿಷ್ಯ' ಎಂಬ ಗಾದೆ ...ಾತಿಗೆ ಹೇಳಿಮಾಡಿಸಿದಂತಿರುವ ಮೋದಿ-ಷಾ ...ೋಡಿ ಭಾರತದ ಪ್ರಜಾತಂತ್ರ ವ್ಯವಸ್ಥೆಗೇ ಕೊಡಲಿ ...ಟು ಕೊಟ್ಟರೆ ಯಾರೂ ಅಚ್ಚರಿ ಪಡಬೇಕಿಲ್ಲ. ಕಳೆದ ...ನ್ನೆರಡು ವರ್ಷಗಳಿಂದ ಮೋದಿ ಮತ್ತು ಷಾ ...ಜರಾತಿನಲ್ಲಿ ಎಸಗಿರುವ ಅಕ್ರಮಗಳನ್ನು ...ವಲೋಕಿಸಿದರೆ ಇವರೆಷ್ಟು ಅಪಾಯಕಾರಿ ಎಂಬುದು ...ರ್ಥವಾಗುತ್ತದೆ.

ಮೋದಿ ಮತ್ತು ಷಾ ನಡುವಿನ ದೋಸ್ತಿ ಮೂರು ...ಶಕಗಳದ್ದು. 80ರ ದಶಕದಲ್ಲಿ ಇವರಿಬ್ಬರೂ ಆರೆಸ್ಸೆಸ್ ...ೇರಿದರು. ಬಡತನದ ಹಿನ್ನೆಲೆಯಿಂದ ಬಂದ ಮೋದಿ ...ರೆಸ್ಸೆಸ್ ಪ್ರಚಾರಕನಾಗಿ ಬೆಳೆದರೆ ಶ್ರೀಮಂತ ...ಟುಂಬದಿಂದ ಬಂದ ಷಾ ಸಾಮಾನ್ಯ ಆರೆಸ್ಸೆಸ್ ...ಾರ್ಯಕರ್ತನಾಗಿದ್ದ. ಆರೆಸ್ಸೆಸ್‌ನ ಕೋಮುವಾದಿ ...ದ್ಧಾಂತವನ್ನೇ ಮೈಗೂಡಿಸಿಕೊಂಡು ಬೆಳೆದ ...ವರಿಬ್ಬರು ಚೆಡ್ಡಿಗಳ ಕುತಂತ್ರಗಳನ್ನೂ ಕರಗತ ...ಮಾಡಿಕೊಂಡವರು.

1995ರಲ್ಲಿ ಕುತಂತ್ರ ಒಂದನ್ನು ಹೆಣೆದು ...ುಜರಾತ್‌ನಲ್ಲಿ ಅಧಿಕಾರದಲ್ಲಿದ್ದ ಬಿಜೆಪಿಯ ...ೇಶುಭಾಯ್ ಪಟೇಲರ ಸರ್ಕಾರವನ್ನೇ ಪತನ ...ಮಾಡುವ ಮಟ್ಟಕ್ಕೆ ಮೋದಿ ಹೋಗಿದ್ದರಿಂದ ಆತನನ್ನು ...ರೆಸ್ಸೆಸ್ ದೆಹಲಿಗೆ ಗಡೀಪಾರು ಮಾಡಿತ್ತು. ಈ ...ಕ್ಷೆಯಿಂದಲೂ ಲಾಭ ಪಡೆದ ಮೋದಿ ದೆಹಲಿಯಲ್ಲಿ ...ಬಿಜೆಪಿಯ ಹಿರಿಯ ನಾಯಕರ ಸ್ನೇಹ ಬೆಳೆಸಿಕೊಂಡ; ...ನಗಾಗದವರ ವಿರುದ್ಧ ಅವರೆಲ್ಲರ ಕಿವಿ ...ಚ್ಚಲಾರಂಭಿಸಿದ್ದ. ಗುಜರಾತ್‌ನ ಆಗುಹೋಗುಗಳಲ್ಲಿ ...ೈಹಾಕಬೇಡ ಎಂದು ಆರೆಸ್ಸೆಸ್ ನಾಯಕರು ಹುಕುಂ ...ಮಾಡಿದ್ದರೂ ಗುಜರಾತ್‌ನಲ್ಲಿ ಏನಾಗುತ್ತಿದೆ, ಯಾರು ...ನು ಮಾಡುತ್ತಿದ್ದಾರೆ ಎಂಬೆಲ್ಲ ಮಾಹಿತಿಗಳನ್ನು ಷಾ ...ಮೂಲಕ ಪಡೆಯುತ್ತಿದ್ದ. ಗುಜರಾತ್ ಬಿಜೆಪಿಯ ...ನಾಯಕರು ಷಾನನ್ನು 'ಮೋದಿಯ ಏಜೆಂಟ್' ಎಂದೇ ...ಪರಿಗಣಿಸುತ್ತಿದ್ದರಲ್ಲದೆ, ಆ ಕಾರಣಕ್ಕೇ ಆತನಿಗೆ ಯಾವ ...ಸ್ಥಾನಮಾನವನ್ನು ಕೊಡದೆ ಮೂಲೆಗುಂಪು ಮಾಡಿದ್ದರು.


2001ರಲ್ಲಿ ಗುಜರಾತ್‌ನ ಸ್ಥಳೀಯ ಸಂಸ್ಥೆಗಳ ...ಚುನಾವಣೆಗಳಲ್ಲಿ ಬಿಜೆಪಿ ಮಣ್ಣು ಮುಕ್ಕಿತ್ತು, ಅದು ...ಹೀಗೇ ಮುಂದುವರೆದರೆ ಆ ರಾಜ್ಯದಲ್ಲಿ ಬಿಜೆಪಿ ...ಅಧಿಕಾರ ಕಳೆದುಕೊಳ್ಳುವ ಅಪಾಯ ಎದುರಾಗಿತ್ತು, ...ಆಗ ತನ್ನನ್ನು ಮುಖ್ಯಮಂತ್ರಿ ಮಾಡಿದರೆ ತಾನು 2002ರಲ್ಲಿ ನಡೆಯಲಿದ್ದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸುತ್ತೇನೆ ಎಂದು ಮೋದಿ ದೆಹಲಿಯಲ್ಲಿದ್ದ ಆರೆಸ್ಸೆಸ್ ಮತ್ತು ಬಿಜೆಪಿ ನಾಯಕರ ಮುಂದೆ ಗೋಗರೆಯಲಾರಂಭಿಸಿದ. ಅಷ್ಟೊತ್ತಿಗೆ ಗುಜರಾತ್ ಬಿಜೆಪಿಯಲ್ಲಿ ವಿವಿಧ ಬಣಗಳ ನಡುವೆ ಕಿತ್ತಾಟ ನಡೆಯುತ್ತಿದ್ದರಿಂದ ಯಾವ ಬಣಕ್ಕೂ ಸೇರದಿದ್ದ ಮೋದಿಯೇ ಸರಿ ಎಂದು ಆರೆಸ್ಸೆಸ್ ಮತ್ತು ಬಿಜೆಪಿ ನಾಯಕರಿಗೆ ಅನಿಸಿದ್ದರಿಂದ ಆತನನ್ನೇ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಲು ನಿರ್ಧರಿಸಿದರು. ಅಲ್ಲಿಯತನಕ ಒಂದೇ ಒಂದು ಚುನಾವಣೆಯನ್ನೂ ಎದುರಿಸದಿದ್ದ, ಕೇವಲ ಆರೆಸ್ಸೆಸ್ ಪ್ರಚಾರಕನಾಗಿದ್ದ ಮೋದಿ ಮುಖ್ಯಮಂತ್ರಿ ಸ್ಥಾನಕ್ಕೆ ಏರಿದ್ದು ಇಂತಹ ಕುತಂತ್ರಗಳಿಂದ ಮತ್ತು ಇತರರ ವಿರುದ್ಧ ಚಾಡಿ ಹೇಳುವ ಚಾಳಿಯಿಂದ!

ಮೋದಿ ಮುಖ್ಯಮಂತ್ರಿ ಆಗಿದ್ದು ಷಾನ ಬದುಕನ್ನೇ ಬದಲಾಯಿಸಿತು. ಮೋದಿಯ ಸಂಪುಟದಲ್ಲಿ ಅತಿ ಚಿಕ್ಕವಯಸ್ಸಿನ ಮಂತ್ರಿ ಆದ ಷಾಗೆ ಆತನ ಗುರು ಕೊಟ್ಟಿದ್ದು ಬರೋಬ್ಬರಿ 12 ಖಾತೆಗಳನ್ನು. 'ಮೋದಿಯ ಕಣ್ಣು ಮತ್ತು ಕಿವಿ' ಎಂದೇ ಕುಖ್ಯಾತಿ ಪಡೆದ ಷಾ ಅಧಿಕಾರದ ಅಮಲಿನಲ್ಲಿ ಎಸಗಿದ್ದು ಒಂದೆರಡು ಅಪರಾಧಗಳನ್ನಲ್ಲ.

ತಮ್ಮಿಬ್ಬರ ಅಧಿಕಾರಕ್ಕೆ ಸವಾಲು ಎಸಗುವವರನ್ನು ಒಬ್ಬೊಬ್ಬರಾಗಿ ಅಪ್ರಸ್ತುತಗೊಳಿಸಲಾರಂಭಿಸಿದರು. ಈ ಹಿಂದೆ ಮಂತ್ರಿಯಾಗಿದ್ದ ತಮ್ಮ ಸಮಕಾಲೀನ ಗೋವರ್ಧನ್ ಜಡಾಫಿಯಾನನ್ನು ಪಕ್ಷದಲ್ಲೇ ಮೂಲೆಗುಂಪು ಮಾಡಿದರು. 2002ರ ಕೋಮು ಗಲಭೆಯನ್ನು ವಿರೋಧಿಸಿದ್ದ ಹರೇನ್ ಪಾಂಡ್ಯ ನಿಗೂಢವಾಗಿ ಕೊಲೆಯಾದರು. ಮೋದಿಗೂ ಮುನ್ನ ಗುಜರಾತ್‌ನ ಮುಖ್ಯಮಂತ್ರಿಗಳಾಗಿದ್ದ ಶಂಕರ್ ಸಿಂಗ್ ವಘೇಲ, ಕೇಶುಭಾಯ್ ಪಟೇಲ್ ಮತ್ತು ಸುರೇಶ್ ಮೆಹ್ತಾಗೆ ಅದೆಂತಹ ಕಿರುಕುಳ ಕೊಟ್ಟರೆಂದರೆ ಅವರೆಲ್ಲಾ ಬಿಜೆಪಿಯನ್ನೇ ತೊರೆದರು. ಮೊದಲಿನಿಂದಲೂ ಮೋದಿಯನ್ನು ತೀವ್ರವಾಗಿ ವಿರೋಧಿಸಿದ್ದ ಸಂಜಯ್ ಜೋಷಿ ಎಂಬ ಪ್ರಚಾರಕನನ್ನು ದೆಹಲಿಗೆ ಗಡೀಪಾರು ಮಾಡುವಂತೆ ಆರೆಸ್ಸೆಸ್ ಮೇಲೆ ಒತ್ತಡ ತಂದರು.

ಇದೆಲ್ಲ ಸಂಘಪರಿವಾರದ ಆಂತರಿಕ ಜಗಳಗಳಿಗೆ ಸಂಬಂಧಿಸಿದವು. ಆದರೆ ಮೋದಿ-ಷಾ ಎಂಬ ಕಿರಾತಕ ಜೋಡಿ ಅಲ್ಲಿಗೇ ಸುಮ್ಮನಾಗಲಿಲ್ಲ. ಇಶ್ರತ್ ಜಹಾನ್ ಮತ್ತು ಇತರೆ ಮೂವರನ್ನು 2004ರಲ್ಲಿ ಗುಜರಾತ್ ಪೊಲೀಸರು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದರು. ಈ ಕೊಲೆಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದ ವಂಜಾರ ಎಂಬ ಹಿರಿಯ ಪೊಲೀಸ್ ಅಧಿಕಾರಿ - ಈಗ ಈತ ಜೈಲಿನಲ್ಲಿದ್ದು ವಿಚಾರಣೆ ಎದುರಿಸುತ್ತಿದ್ದಾನೆ- ಇಶ್ರತ್ ಜಹಾನ್ ಮತ್ತು ಆಕೆಯೊಂದಿಗಿದ್ದ ಮೂವರು ಪುರುಷರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಲೆ ಮಾಡಬೇಕೆಂದು 'ಬಿಳಿಗಡ್ಡ' ಮತ್ತು 'ಕರಿ ಗಡ್ಡ' (ಬಿಳಿ ಗಡ್ಡ ಎಂದರೆ ಮೋದಿ, ಕರಿ ಗಡ್ಡ ಎಂದರೆ ಷಾ) ಆದೇಶಿಸಿದ್ದರು ಎಂದು ಹೇಳಿದ್ದಾನೆ. ಮಾತ್ರವಲ್ಲ, ಇಶ್ರತ್ ಜಹಾನ್ ಕೊಲೆಯಾದ ದಿನ ವಂಜಾರ ಮೊಬೈಲ್‌ಗೆ ಷಾ ಹಲವಾರು ಬಾರಿ ಫೋನ್ ಮಾಡಿದ್ದನಲ್ಲದೆ ಕೊಲೆಯಾದ ಹತ್ತೊಂದು ನಿಮಿಷಗಳ ನಂತರವೂ ಮತ್ತೆ ಫೋನ್ ಮಾಡಿದ್ದು ದಾಖಲಾಗಿದೆ. ಇಷ್ಟಾದರೂ ಆಗ ಮೋದಿ ಗೃಹ ಇಲಾಖೆಯನ್ನು ತನ್ನೊಂದಿಗೆ ಇಟ್ಟುಕೊಂಡಿದ್ದನಲ್ಲದೆ ಸ್ವತಃ ಷಾ ಗೃಹ ಇಲಾಖೆಗೆ ರಾಜ್ಯ ಮಂತ್ರಿ ಆಗಿದ್ದರಿಂದ ಅವರಿಬ್ಬರ ವಿರುದ್ಧ ಒಂದೇ ಒಂದು ದೂರೂ ಕೂಡ ದಾಖಲಾಗಿಲ್ಲ.

2005ರಲ್ಲಿ ನಡೆದ ಶೋರಾಬುದ್ದೀನ್, ಆತನ ಪತ್ನಿ ಕೌಸರ್ ಬಿ ಹಾಗು ಪೊಲೀಸ್ ಮಾಹಿತಿದಾರ ಪ್ರಜಾಪತಿ ಎಂಬುವವರ ನಕಲಿ ಎನ್‌ಕೌಂಟರ್ ಕೊಲೆಯಲ್ಲೂ ಷಾನ ಪಾತ್ರವಿತ್ತು. ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ನ್ಯಾಯಾಲಯಕ್ಕೆ ಸಲ್ಲಿರುವ ಚಾರ್ಜ್‌ಶೀಟಿನಲ್ಲಿ ಕೌಸರ್‌ಬಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತಲ್ಲದೆ, ಆಕೆಯನ್ನು ಕೊಂದ ನಂತರ ಅವಳ ಶವವನ್ನು ಸುಟ್ಟು ನದಿಗೆ ಎಸೆಯಲಾಗಿತ್ತು ಎಂದು ದಾಖಲಿಸಲಾಗಿದೆ. ಷಾ ಇದನ್ನು 'ನನ್ನ ವಿರುದ್ಧ ಕಾಂಗ್ರೆಸ್ ಹೂಡಿರುವ ಷಡ್ಯಂತರ' ಎಂದು ವಾದಿಸುತ್ತಾನೆ. ಆದರೆ ಈ ನಕಲಿ ಎನ್‌ಕೌಂಟರ್ ಪ್ರಕರಣವನ್ನು ತನಿಖೆ ಮಾಡುತ್ತಿರುವುದು ಸುಪ್ರೀಮ್ ಕೋರ್ಟ್ ನೇಮಿಸಿರುವ ಸಿಬಿಐ ತಂಡ ಎಂಬುದನ್ನು ಮರೆಯಬಾರದು. ಇದೇ ತಂಡ ಸುಪ್ರೀಮ್ ಕೋರ್ಟಿನ ನ್ಯಾ. ಪಿ. ಸದಾಶಿವ ಮತ್ತು ನ್ಯಾ. ಬಿ.ಎಸ್. ಚೌಹಾಣ್ ಅವರ ಜಂಟಿ ಪೀಠದ ಮುಂದೆ ಸಲ್ಲಿಸಿದ ವರದಿಯ ಪ್ರಕಾರ ಷಾ ಓರ್ವ 'ಹಾರ್ಡ್ ಕೋರ್ ಕ್ರಿಮಿನಲ್' ಆಗಿದ್ದು ಆತ ಭ್ರಷ್ಟ ಅಧಿಕಾರಿಗಳ ನೆರವಿನೊಂದಿಗೆ ಭೂಗತಲೋಕದ ಗ್ಯಾಂಗ್‌ಗಳೊಂದಿಗೆ ನಿಕಟಸಂಪರ್ಕ ಇಟ್ಟುಕೊಂಡಿದ್ದು ದೊಡ್ಡ ಮೊತ್ತದ ಹಫ್ತಾ ವಸೂಲಿ ಜಾಲವನ್ನು ನಡೆಸುತ್ತಿದ್ದಾನೆ.



ಸುಪ್ರೀಂಕೋರ್ಟ್‌ನ ನಿಗಾ ಅಡಿ ನಡೆದ ತನಿಖೆಯಿಂದಾಗಿ ಷಾನನ್ನು ಜೈಲಿಗೆ ಹಾಕಲಾಗಿತ್ತು. ಇದೇ ಶೊರಾಬುದ್ದೀನ್ ಮತ್ತು ಇತರರ ಎನ್‌ಕೌಂಟರ್‌ಗೆ ಸಂಬಂಧಿಸಿದಂತೆ ವಂಜಾರ ಮತ್ತು ಇತರೆ ಹಿರಿಯ ಪೊಲೀಸ್ ಅಧಿಕಾರಿಗಳನ್ನೂ ಜೈಲಿಗೆ ದೂಡಲಾಗಿತ್ತು, ಇವತ್ತಿಗೂ ಅವರೆಲ್ಲ ಜೈಲಿನಲ್ಲಿದ್ದಾರೆ. ಆದರೆ ತನ್ನ ಶಿಷ್ಯನ ನೆರವಿಗೆ ಬಂದ ಮೋದಿ ರಾಮ್ ಜೆಠ್‌ಮಲಾನಿ ತರಹದ ಪಳಗಿದ ವಕೀಲನ ನೆರವು ಪಡೆದು ಷಾ ಜಾಮೀನಿನ ಮೇಲೆ ಎರಡೇ ತಿಂಗಳಲ್ಲಿ ಜೈಲಿನಿಂದ ಹೊರಗೆ ಬರುವಂತೆ ನೋಡಿಕೊಂಡಿದ್ದಾನೆ. ಆದರೆ ಷಾ ಗುಜರಾತ್‌ನಲ್ಲಿ ಎಂತಹ ಪ್ರಭಾವ ಹೊಂದಿದ್ದಾನೆಂದು ಅರ್ಥಮಾಡಿಕೊಂಡಿರುವ ಸುಪ್ರೀಂಕೋರ್ಟ್ ಆತ ಗುಜರಾತ್‌ಗೆ ಕಾಲಿಡಕೂಡದೆಂದು ಆದೇಶಿಸಿದೆ (ಚುನಾವಣೆ ಸಮಯದಲ್ಲಿ ಅದಕ್ಕೆ ಬ್ರೇಕ್ ಸಿಕ್ಕಿತ್ತು ಎಂಬುದು ಬೇರೆ ಸಂಗತಿ.)

ಅಂದಹಾಗೆ ಇತ್ತೀಚೆಗೆ ಗೋಪಾಲ್ ಸುಬ್ರಮಣ್ಯಂ ಎಂಬುವವರು ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾಗದಂತೆ ಮೋದಿ ಅಡ್ಡಗಾಲು ಹಾಕಿದ್ದು ಯಾಕೆ ಗೊತ್ತೇ? ಷಾ ಆರೋಪಿಯಾಗಿ, ಜೈಲಿನ ಕಂಬಿಯನ್ನೂ ಎಣಿಸಿ ಬಂದಿರುವ ಶೊರಾಬುದ್ದೀನ್ ಕೊಲೆ ಕೇಸಿನಲ್ಲಿ 'ಅಮಿಕಸ್ ಕ್ಯೂರಿ' ಆಗಿದ್ದವರು ಇದೇ ಗೋಪಾಲ್ ಸುಬ್ರಮಣ್ಯಂ ಎಂಬ ಕಾರಣಕ್ಕೆ. ಮಾತ್ರವಲ್ಲ, ರಾಣಾ ಅಯುಬ್ ಎಂಬುವವರು ಬರೆದಿರುವ ಲೇಖನದ ಪ್ರಕಾರ ಇದೇ ಎನ್‌ಕೌಂಟರ್ ಅನ್ನು ತನಿಖೆ ಮಾಡಿದ್ದ ಮಾಜಿ ಸಿಬಿಐ ಪೊಲೀಸ್ ಅಧಿಕಾರಿಗಳಿಗೂ ಈಗ ಮೋದಿ-ಷಾ ಜೋಡಿ ಕಿರುಕುಳ ನೀಡುತ್ತಿದೆ. ಉದಾಹರಣೆಗೆ ನಾಗಾಲ್ಯಾಂಡ್ ರಾಜ್ಯದ ರಾಜ್ಯಪಾಲರಾಗಿದ್ದ ಮತ್ತು ಶೊರಾಬುದ್ದೀನ್ ಕೊಲೆ ಪ್ರಕರಣವನ್ನು ತನಿಖೆ ಮಾಡಿದ್ದ ಮಾಜಿ ಸಿಬಿಐ ನಿರ್ದೇಶಕ ಅಶ್ವಿನ್ ಕುಮಾರ್ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಪ್ರಧಾನಿ ಮೋದಿ ನೋಡಿಕೊಂಡಿದ್ದಾನೆ. ಹಾಗೆಯೇ ಎ.ಪಿ.ಸಿಂಗ್ ಎಂಬ ಮತ್ತೋರ್ವ ಸಿಬಿಐನ ಮಾಜಿ ಪೊಲೀಸ್ ಅಧಿಕಾರಿಯೂ ಈಗ ಯುಪಿಎಸ್‌ಸಿ ಸದಸ್ಯರಾಗಿದ್ದು ಆ ಸ್ಥಾನಕ್ಕೆ ಕೂಡಲೇ ರಾಜೀನಾಮೆ ಕೊಡಬೇಕೆಂದು ಮೋದಿ ಒತ್ತಡ ಹೇರುತ್ತಿದ್ದಾನೆ.

'ಬ್ರಹ್ಮಚಾರಿ' ಮೋದಿ 2009ರಲ್ಲಿ ಮಾನಸಿ ಎಂಬ ಯುವತಿಯ ಮೋಹಕ್ಕೆ ಬಿದ್ದು ಆಕೆ ಇತರೆ ಪುರುಷರನ್ನು ಭೇಟಿ ಆಗದಂತೆ ನೋಡಿಕೊಳ್ಳಲು ಹವಣಿಸುತ್ತಿದ್ದ. ಆಗ ಮೋದಿ ಆ ಯುವತಿಯ ಮೇಲೆ ನಿಗಾ ಇಡುವ ಜವಾಬ್ದಾರಿಯನ್ನು ಇದೇ ಷಾಗೆ ವಹಿಸಿದ್ದ. ಆ ಅಮಾಯಕ ಯುವತಿಯ ಚಲನವಲನಗಳ ಮೇಲೆ ನಿಗಾ ಇಟ್ಟು ಪ್ರತಿ ಗಂಟೆ ತನಗೆ ವರದಿ ಕೊಡುವಂತೆ ಭಯೋತ್ಪಾದಕ ನಿಗ್ರಹ ದಳವನ್ನೇ ಅಕ್ರಮವಾಗಿ ನಿಯೋಜಿಸಿದ್ದ ಈ ಷಾ ಎಂಬ ಮಹಾಶಯ.

ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ಏರುವ ಒಂದೆರಡು ದಿನಗಳ ಹಿಂದೆಯೂ ಮೋದಿ-ಷಾ ಜೋಡಿ ಇನ್ನೊಂದು ಕರಾಮತ್ತನ್ನು ಎಸಗಿದೆ. ಶೊರಾಬುದ್ದೀನ್ ಕೊಲೆ ಕೇಸಿಗೆ ಸಂಬಂಧಿಸಿದಂತೆ ಸಿಬಿಐನ ವಿಶೇಷ ನ್ಯಾಯಾಲಯದಲ್ಲಿ ಜೆ.ಟಿ.ಉತ್ಪತ್ ಎಂಬುವವರು ನ್ಯಾಯಾಧೀಶರಾಗಿದ್ದರು. ಕಳೆದ ಹಲವಾರು ಬಾರಿ ನ್ಯಾಯಾಲಯದ ಮುಂದೆ ಷಾ ಹಾಜರಾಗಿರಲಿಲ್ಲ. ಇದನ್ನು ಕಂಡು ರೇಗಿದ ನ್ಯಾ.ಉತ್ಪತ್ ಅವರು ಕಳೆದ ಜೂನ್ 20ರಂದು "ಹೀಗೆ ಸರಿಯಾದ ಕಾರಣ ನೀಡದೆ ಕೋರ್ಟ್ ಮುಂದೆ ಹಾಜರಾಗದೆ ಇರುವುದು ಸರಿಯಲ್ಲ" ಎಂದು ಗುಡುಗಿದ್ದರು. ಪರಿಣಾಮವಾಗಿ ಷಾ ಆ ವಿಶೇಷ ನ್ಯಾಯಾಲಯದ ಮುಂದೆ ಹಾಜರಾಗಲಿಲ್ಲ; ಬದಲಾಗಿ ನ್ಯಾ. ಉತ್ಪತ್ ಅವರೇ ಪುಣೆಗೆ ಎತ್ತಂಗಡಿಯಾದರು! ಇದರ ಹಿಂದೆ ಷಾ ಗುರು ಮೋದಿಯ ಕೈವಾಡ ಇರುವ ಬಗ್ಗೆ ಯಾರಿಗೂ ಅನುಮಾನಗಳು ಬೇಡ!! ಯಾಕೆಂದರೆ ಈ ಹಿಂದೆಯೂ ಮೋದಿ-ಷಾ ಜೋಡಿ ತಮಗೆ ಆಗದ ಅಧಿಕಾರಿಗಳನ್ನು, ನ್ಯಾಯಾಧೀಶರನ್ನು ಗುಜರಾತ್‌ನಲ್ಲಿ ಎತ್ತಂಗಡಿ ಮಾಡಿದ ಹಲವಾರು ಉದಾಹರಣೆಗಳಿವೆ.

ನರಹಂತಕ ಮೋದಿ ಇವತ್ತು ಪ್ರಧಾನಿ. ನಕಲಿ ಎನ್‌ಕೌಂಟರ್ ವೀರನಾದ ಷಾ ಬಿಜೆಪಿಯ ಅಧ್ಯಕ್ಷ. ಇದು ಮೋದಿಯ 'ಸ್ವಚ್ಛ ಪಾರದರ್ಶಕ' ಆಡಳಿತದ ಒಂದು ವೈಖರಿ; ಆರೆಸ್ಸೆಸ್‌ನ ದೇಶದ್ರೋಹತನಕ್ಕೆ ಒಂದು ಉದಾಹರಣೆ; ಬಿಜೆಪಿಯ ನಿರ್ಲಜ್ಜತನಕ್ಕೆ ಹಿಡಿದ ಕನ್ನಡಿ.

ಭಾರತಮಾತೆಯನ್ನು ಚೋರರು, ಚಂಡಾಲರು ಮತ್ತು ಕೋಮುಪಿಶಾಚುಗಳಿಂದ ರಕ್ಷಿಸುವವರು ಯಾರು?

ರಂಜನೆ | ಬೋಧನೆ | ಪ್ರಬೋಧನೆ ಲಂಕೇಶ್

ನಕ್ಸಲ್ ಪುನರ್ವಸತಿ ಕುರಿತು ಒಂದು ಉನ್ನತ ಮಟ್ಟದ ಸಭೆ



ನಕ್ಸಲ್ ಚಳವಳಿಯನ್ನು ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯಲ್ಲ, ಬದಲಿಗೆ ಪ್ರಜಾತಂತ್ರದ ಅಸಮರ್ಪಕ ಜಾರಿಯಿಂದಾಗಿ ಹುಟ್ಟಿಕೊಂಡ ಸಾಮಾಜಿಕ-ರಾಜಕೀಯ ಹೋರಾಟ. ಆದ್ದರಿಂದ 'ಎನ್‌ಕೌಂಟರ್' ಮಾರ್ಗವನ್ನು ಬಿಟ್ಟುಕೊಟ್ಟು ಮಾತುಕತೆಗೆ ಮುಂದಾಗಬೇಕೆಂದು 'ಶಾಂತಿಗಾಗಿ ನಾಗರಿಕರ ವೇದಿಕೆ' ಕಳೆದ ಒಂದು ದಶಕದಿಂದಲೂ ನಕ್ಸಲರನ್ನು ಮತ್ತು ಸರ್ಕಾರಗಳನ್ನು ಒತ್ತಾಯಿಸುತ್ತ ಬಂದಿದೆ. ಧರ್ಮಸಿಂಗ್ ಸರ್ಕಾರ ಈ ಬಗ್ಗೆ ಒಲವು ತೋರಿಸಿದ್ದರಿಂದ ವೇದಿಕೆ ಆಗಿನ ಸರ್ಕಾರಕ್ಕೆ ನಕ್ಸಲೀಯರೊಡನೆ ಮಾತುಕತೆ ನಡೆಸಲು ಬೇಡಿಕೆ ಸಲ್ಲಿಸಿತ್ತು. ಆದರೆ ಹೋದಲ್ಲೆಲ್ಲಾ ಈ ಕುರಿತು ಹೇಳಿಕೆ ನೀಡುತ್ತಿದ್ದ ಧರ್ಮಸಿಂಗ್ ಅವರ ಸರ್ಕಾರವೇ ಇನ್ನೊಂದು ಕಡೆ ಎನ್‌ಕೌಂಟರ್ ನಡೆಸಿ ನಕ್ಸಲ್ ಮುಖಂಡ ಸಾಕೇತ್ ರಾಜನ್‌ರನ್ನು ಕೊಂದು ಹಾಕಿತು. ಇದರಿಂದ ಮಾತುಕತೆ ಪ್ರಸ್ತಾಪಕ್ಕೂ ಹಿನ್ನಡೆಯಾಯಿತು.

ಆದರೆ ಈ ಮಧ್ಯೆ ಕೇಂದ್ರ ಸರ್ಕಾರ ನಕ್ಸಲೀಯರನ್ನು ಮುಖ್ಯವಾಹಿನಿಗೆ ಕರೆತರುವ ಬಗ್ಗೆ ಮಾತನಾಡತೊಡಗಿತು. ಇದರ ಭಾಗವಾಗಿ ಅದು 'ಶರಣಾಗತಿ'ಯ ಒಂದು ಪ್ಯಾಕೇಜನ್ನು ಕೂಡ ಮುಂದಿಟ್ಟಿತು. ಅಲ್ಲಲ್ಲಿ ಶಸ್ತ್ರಾಸ್ತ್ರವನ್ನು ತ್ಯಜಿಸಿ ಸರ್ಕಾರದ ಮುಂದೆ ಶರಣಾದ ಮಾವೋವಾದಿಗಳ ಬಗ್ಗೆ ವರದಿಗಳು ಬರತೊಡಗಿದವು. 2010ರಲ್ಲಿ ನಡೆದ ಮುಖ್ಯಮಂತ್ರಿಗಳ ಸಭೆಯಲ್ಲಿ ಆಗಿನ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪನವರೂ ಸಹ ನಕ್ಸಲೀಯರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ಹೇಳಿಕೆಯೊಂದನ್ನು ನೀಡಿದರು. ಆದರೆ, ಈ ವಿಷಯ ಹೇಳಿಕೆಯ ಮಟ್ಟದಲ್ಲೇ ಉಳಿದುಬಿಟ್ಟಿತೇ ವಿನಃ ಮುಂದುವರೆಯಲಿಲ್ಲ. ಸರ್ಕಾರಕ್ಕೆ ಈ ಕುರಿತು ಯಾವುದೇ ಗಂಭೀರ ಕಾಳಜಿ ಇಲ್ಲವೆಂದು ಅನಿಸಿದ್ದಕ್ಕೋ ಏನೋ, ಈ ಪ್ರಸ್ತಾಪಕ್ಕೆ ನಕ್ಸಲೀಯರ ಕಡೆಯಿಂದಲೂ ಯಾವುದೇ ಪ್ರತಿಕ್ರಿಯೆ ಬರಲಿಲ್ಲ.

ಈಗಿನ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಮಾನ್ಯ ಗೃಹ ಮಂತ್ರಿಗಳು ಈ ವಿಷಯದ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆಯೊಂದನ್ನು ನೀಡಿದ ನಂತರ ನಕ್ಸಲೀಯರ ವಿಚಾರಕ್ಕೆ ಮತ್ತೆ ಚಾಲ್ತಿ ದೊರೆಯಿತು. ಮಾನ್ಯ ಮುಖ್ಯಮಂತ್ರಿಗಳು ಕೂಡ ಇದನ್ನು ಬೆಂಬಲಿಸಿ ಮಾತನಾಡಿದರು. ಇದಕ್ಕೆ ಸ್ಪಂದಿಸಿದ ಶಾಂತಿಗಾಗಿ ನಾಗರಿಕರ ವೇದಿಕೆ ಮೊದಲಿಗೆ ಈ ವಿಷಯ ಕುರಿತಂತೆ ಹಿರಿಯರಾದ ಶ್ರೀಯುತ ಎಚ್.ಎಸ್.ದೊರೆಸ್ವಾಮಿ, ಎ.ಕೆ. ಸುಬ್ಬಯ್ಯ, ದೇವನೂರು ಮಹದೇವ, ಬರಗೂರು ರಾಮಚಂದ್ರಪ್ಪ, ಇಂದೂಧರ ಹೊನ್ನಾಪುರ ಮುಂತಾದವರನ್ನು ಸಂಪರ್ಕಿಸಿ ಮಾತುಕತೆ ನಡೆಸಿತು. ನಂತರ ಮುಖ್ಯಮಂತ್ರಿ ಮತ್ತು ಗೃಹಮಂತ್ರಿಗಳನ್ನೂ ಭೇಟಿಮಾಡಿ ನಕ್ಸಲೀಯರು ಮುಖ್ಯವಾಹಿನಿ ಸಮಾಜದೆಡೆ ಬರುವುದಾದರೆ, ಅದಕ್ಕೆ ಸರ್ಕಾರ ಮುಂದಾಗಬೇಕೆಂದು ಕಳೆದ ಆಗಸ್ಟ್‌ನಲ್ಲಿ ಮನವಿ ಮಾಡಿತು. ಹಾಗೆಯೇ, ಸರ್ಕಾರದ ಈ ಉಪಕ್ರಮಕ್ಕೆ ಸ್ಪಂದಿಸಬೇಕೆಂದು ನಕ್ಸಲೀಯರಿಗೂ ಪತ್ರಿಕೆಗಳ ಮೂಲಕ ಸಂದೇಶ ನೀಡಿತು.

ಈ ಮಧ್ಯೆ ಸುಮಾರು 2006ರ ಮಧ್ಯ ಭಾಗದಲ್ಲಿ ಕರ್ನಾಟಕದ ಮಾವೋವಾದಿ ಪಕ್ಷದಲ್ಲೇ ಶಸ್ತ್ರಾಸ್ತ್ರ ಹೋರಾಟದ ಮಾರ್ಗ ಮತ್ತು ಇನ್ನು ಕೆಲವು ಸೈದ್ಧಾಂತಿಕ ಕಾರಣಗಳಿಗಾಗಿ ಕಾರ್ಯಕರ್ತರಲ್ಲಿ ಭಿನ್ನಾಭಿಪ್ರಾಯ ಮೂಡಿಬಂತು. ನಕ್ಸಲೀಯರು ತುಳಿಯುವ ಹಿಂಸೆಯ ಮಾರ್ಗದ ಬಗ್ಗೆ ಶಾಂತಿಗಾಗಿ ನಾಗರಿಕರ ವೇದಿಕೆಯನ್ನು ಒಳಗೊಂಡಂತೆ ದೇಶದ ಅನೇಕ ಮಾನವ ಹಕ್ಕುಗಳ ಗುಂಪುಗಳಿಗೆ ಕೂಡ ಒಪ್ಪಿಗೆ ಇರಲಿಲ್ಲ; ಈಗಲೂ ಇಲ್ಲ. ನಕ್ಸಲೀಯರ ಹಿಂಸೆಯನ್ನು ಖಂಡಿಸುವಂತೆಯೇ, ಮಾನವ ಹಕ್ಕು ಸಂಘಟನೆಗಳು ಸರ್ಕಾರದ ಎನ್‌ಕೌಂಟರ್ ಸಂಸ್ಕೃತಿಯನ್ನೂ ವಿರೋಧಿಸುತ್ತಾ ಬಂದಿವೆ. ಆದರೆ, ಮಾವೋವಾದಿ ಪಕ್ಷದಲ್ಲೇ ಶಸ್ತ್ರಾಸ್ತ್ರ ಮಾರ್ಗದ ಬಗ್ಗೆ ಮತ್ತು ಪ್ರಸ್ತುತ ಭಾರತೀಯ ಸಮಾಜದ ಸಂರಚನೆಯ ಬಗ್ಗೆ ಮಾವೋವಾದಿ ಸಂಘಟನೆ ತಳೆದಿರುವ ಬಿಗಿ ನಿಲುವನ್ನು ಪ್ರಶ್ನಿಸಿ ಪಕ್ಷದ ಒಂದು ಭಾಗವೇ ಹೊರಬಂದದ್ದು ಒಂದು ನೂತನ ಬೆಳವಣಿಗೆ. ಹೀಗೆ ಪಕ್ಷದ ಪ್ರಮುಖ ಮುಖಂಡರು ಮಾವೋವಾದಿ ಪಕ್ಷದಿಂದ ಹೊರಬಂದು, ತಮ್ಮದೇ ಆದ ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷವನ್ನು ರಚಿಸಿಕೊಂಡರು. ಈ ಪಕ್ಷ ಭೂಗತ ಶಸ್ತ್ರಾಸ್ತ್ರ ಹೋರಾಟದ ಮಾರ್ಗವನ್ನು ಬಿಟ್ಟುಕೊಟ್ಟು, ಪ್ರಜಾತಾಂತ್ರಿಕ ಹೋರಾಟವನ್ನು ಮುಂದುವರೆಸುವ ಧ್ಯೇಯವನ್ನು ಹೊಂದಿರುವಂಥದ್ದು. ಆದರೂ ತಮ್ಮ ಮೇಲಿನ ಕೇಸುಗಳಿಂದಾಗಿ ಈ ಪಕ್ಷದ ನಾಯಕರು ಭೂಗತರಾಗಿಯೇ ಇದ್ದಾರೆ.

ಶಾಂತಿಗಾಗಿ ನಾಗರಿಕರ ವೇದಿಕೆ ಸರ್ಕಾರದ ಆಹ್ವಾನದ ಸಂದೇಶವನ್ನು ಪಕ್ಷದ ಎರಡೂ ಬಣಗಳಿಗೆ ರವಾನಿಸಿತ್ತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು ಹೊರಬಂದಿರುವ ಪಕ್ಷದ ಮುಖಂಡರಾಗಿರುವ ಸಿರಿಮನೆ ನಾಗರಾಜ ಮತ್ತು ನೂರ್ ಜುಲ್ಫೀಕರ್ ಅಲಿಯಾಸ್ ಶ್ರೀಧರ್ ಅವರು. ಭೂಗತ ಹೋರಾಟದಿಂದ ಹೊರಬಂದಿರುವ ತಾವು ಶಾಂತಿಯುತ ಸಾಮಾಜಿಕ/ರಾಜಕೀಯ ಹೋರಾಟದಲ್ಲಿ ತೊಡಗಿಕೊಳ್ಳುವುದಾಗಿಯೂ, ಅದಕ್ಕೆ ಅನುವಾಗುವಂತೆ ತಮ್ಮ ಮೇಲಿನ ಕೇಸುಗಳನ್ನು ಸರ್ಕಾರ ವಾಪಸು ತೆಗೆದುಕೊಳ್ಳಬೇಕೆಂದೂ ಅವರು ಹೇಳಿದರು. ಇದನ್ನು ವೇದಿಕೆ ಸರ್ಕಾರದ ಗಮನಕ್ಕೆ ತಂದು, ಈ ಮುಖಂಡರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದರ ಮೂಲಕ, ನಕ್ಸಲೀಯರನ್ನು ಮುಖ್ಯವಾಹಿನಿಗೆ ತರುವ ತಮ್ಮ ನಿಲುವನ್ನು ಕಾರ್ಯಗತಗೊಳಿಸಬೇಕೆಂದು ಮನವಿ ಮಾಡಿತು. ಇದಕ್ಕೆ ಸರ್ಕಾರದ ವಿವಿಧ ಇಲಾಖೆಗಳು, ಅದರಲ್ಲೂ ಪೊಲೀಸು ಮತ್ತು ನ್ಯಾಯ ಇಲಾಖೆಗಳ ಅಭಿಪ್ರಾಯ ಮತ್ತು ಒಪ್ಪಿಗೆಗಳು ಬೇಕಾಗುತ್ತದೆಯಾದ್ದರಿಂದ, ಇವರೆಲ್ಲರನ್ನೂ ಒಳಗೊಂಡ ಒಂದು ಸಭೆಯನ್ನು ಕರೆಯಬೇಕೆನ್ನುವುದು ವೇದಿಕೆಯ ಬೇಡಿಕೆಯಾಗಿತ್ತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದೇ ಜುಲೈ 9ರಂದು ಸಂಬಂಧಪಟ್ಟ ಇಲಾಖೆಯ ಮುಖಂಡರುಗಳ ಸಭೆಯನ್ನು ಕರೆದಿದ್ದರು: ಮಾನ್ಯ ಗೃಹಮಂತ್ರಿಗಳೂ ಇದ್ದ ಈ ಸಭೆಗೆ ವೇದಿಕೆಯ ಸದಸ್ಯರನ್ನೂ ಆಹ್ವಾನಿಸಲಾಗಿತ್ತು, ವೇದಿಕೆಯ ಪರವಾಗಿ ಎ.ಕೆ.ಸುಬ್ಬಯ್ಯ ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಇಂದೂಧರ ಹೊನ್ನಾಪುರ, ಗೌರಿ ಲಂಕೇಶ್, ನಗರಿ ಬಾಬಯ್ಯ, ಪಾರ್ವತೀಶ, ವಿ.ಎಸ್.ಶ್ರೀಧರ ಮತ್ತು ಶಿವಸುಂದರ್ ಅವರು ಹಾಜರಿದ್ದರು. ಈ ಉನ್ನತ ಮಟ್ಟದ ಸಭೆಗೆ ಪೊಲೀಸು ಇಲಾಖೆ ಸಾಕಷ್ಟು ತಯಾರಿ ನಡೆಸಿಕೊಂಡೇ ಬಂದಿದ್ದು, ಈ ವಿಷಯದ ಬಗ್ಗೆ ಸರ್ಕಾರಕ್ಕಿರುವ ಗಂಭೀರ ನಿಲುವಿಗೆ ಸಾಕ್ಷಿಯಾಗಿತ್ತು.

ಈ ಸಭೆಯಲ್ಲಿ ಮುಖ್ಯವಾಹಿನಿಗೆ ಬರಲು ಸಿದ್ಧರಾಗಿರುವ ಶ್ರೀ ಸಿರಿಮನೆ ನಾಗರಾಜ ಮತ್ತು ನೂರ್ ಜುಲ್ಫಿಕರ್ ಅವರು ಈಗಾಗಲೇ ಸಶಸ್ತ್ರ ಹೋರಾಟದ ಮಾರ್ಗವನ್ನು ಬಿಟ್ಟುಕೊಟ್ಟಿರುವುದರಿಂದ ಅವರ ಮೇಲಿನ ಕೇಸುಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಮತ್ತೊಮ್ಮೆ ವೇದಿಕೆ ಮನವಿ ಮಾಡಿತು. ಕೇಂದ್ರ ಸರ್ಕಾರದ ಪುನರ್ವಸತಿ ಪ್ಯಾಕೇಜಿನ ಪ್ರಕಾರ ಶರಣಾಗತಿ ಬಯಸಿಬರುವ ನಕ್ಸಲೀಯರಿಗೆ, ಪಕ್ಷದಲ್ಲಿದ್ದ ಅವರ ರ್‍ಯಾಂಕಿನ ಮೇರೆಗೆ 1 ಲಕ್ಷದಿಂದ 2.5 ಲಕ್ಷದವರೆಗೂ ಆರ್ಥಿಕ ನೆರವು, ಅವರಿಗೆ ಉದ್ಯೋಗ ಭರವಸೆ, ಅವರುಗಳು ಒಪ್ಪಿಸುವ ಶಸ್ತ್ರಾಸ್ತ್ರಗಳಿಗೆ ಅನ್ವಯವಾಗುವ ಹಾಗೆ ಹಣ ಇತ್ಯಾದಿ ಭರವಸೆಗಳಿವೆ. ಆದರೆ ಸಿರಿಮನೆ ಮತ್ತು ನೂರ್ ಅವರು ಯಾವುದೇ ಪ್ಯಾಕೇಜನ್ನು ಕೇಳುತ್ತಿಲ್ಲವಾಗಿ, ಕೇಸ್‌ಗಳನ್ನು ವಾಪಸ್ ಪಡೆಯುವ ಅವರ ಬೇಡಿಕೆಗಳನ್ನು ಈಡೇರಿಸಬೇಕೆನ್ನುವುದು ವೇದಿಕೆಯ ನಿಲುವು. ಹಿಂದೆ ಬಿಜೆಪಿ ಸರ್ಕಾರ ಸಂಘಪರಿವಾರದವರ ಮೇಲಿದ್ದ ಅನೇಕ ಕ್ರಿಮಿನಲ್ ಕೇಸುಗಳನ್ನು ಹಿಂದೆಗೆದುಕೊಂಡಿರುವ ಉದಾಹರಣೆ ಇರುವುದರಿಂದ, ಈ ಕ್ರಮಕ್ಕೆ ಕಾನೂನಿನ ಅಡೆತಡೆ ಇರಲು ಸಾಧ್ಯವಿಲ್ಲ ಎನ್ನುವುದು ವೇದಿಕೆಯ ವಾದ. ಆದರೆ, ಕೆಲವು ಕೇಸುಗಳಲ್ಲಿ ಕೇಂದ್ರ ಸರ್ಕಾರದ ಪರವಾನಗಿ ಬೇಕಾಗಿರುವುದರಿಂದ ರಾಜ್ಯ ಸರ್ಕಾರವೇ ಇದರ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಆಗದು ಎಂಬುದು ಪೊಲೀಸು ಇಲಾಖೆಯ ವಾದ. ಹೀಗಾಗಿ ತನ್ನ ವ್ಯಾಪ್ತಿಗೆ ಬರುವ ಅಷ್ಟೇನೂ ಗಂಭೀರವಲ್ಲದ ಕೇಸುಗಳ ಬಗ್ಗೆ ರಾಜ್ಯ ಸರ್ಕಾರವೇ ತೀರ್ಮಾನ ತೆಗೆದುಕೊಳ್ಳುವುದು ಮತ್ತು ಇನ್ನಿತರ ಕೇಸುಗಳನ್ನು ನ್ಯಾಯಾಲಯದಲ್ಲೇ ಇತ್ಯರ್ಥ ಮಾಡಿಕೊಳ್ಳ ಬಹುದೆಂಬ ಸಲಹೆ ಮೂಡಿಬಂತು. ಇದರಿಂದಾಗಿ ಮುಖ್ಯವಾಹಿನಿಗೆ ಬರಲು ಇಚ್ಛಿಸುವ ಹೋರಾಟಗಾರರಿಗೆ ಕೆಲವು ಖಚಿತ ಸೂಚನೆಗಳನ್ನು ಸರ್ಕಾರ ಮುಂದಿಟ್ಟ ಹಾಗಾಗಿದೆ. ಇದು ಬುಧವಾರದ ಸಭೆಯಲ್ಲಿ ಸರ್ಕಾರದ ನಿಲುವಿನಲ್ಲಿ ಕಂಡುಬಂದ ಪ್ರಮುಖ ಬೆಳವಣಿಗೆ. ಇದು ಸ್ವಾಗತಾರ್ಹ.

ಆದರೆ ಕೇಂದ್ರ ಸರ್ಕಾರದ ಪುನರ್ವಸತಿ ಪ್ಯಾಕೇಜಿನಲ್ಲಿರುವ ಕೆಲವು ಮುಖ್ಯವಾದ ವಿಷಯಗಳ ಬಗ್ ಇಲ್ಲಿ ಪ್ರಸ್ತಾಪಿಸುವುದು ಅಗತ್ಯ. ಇಡೀ ಪ್ಯಾಕೇಜು ಇರುವುದು ನೇರವಾಗಿ ಶಸ್ತ್ರಾಸ್ತ್ರ ಹೋರಾಟವನ್ನು ಬಿಟ್ಟುಕೊಟ್ಟು ಸರ್ಕಾರಕ್ ಶರಣಾಗುವ ನಕ್ಸಲೀಯರ ಬಗ್ಗೆ. ಇಂಥವರ ಪಟ್ಟಿಯನ್ನೂ ಕೂಡ ಸರ್ಕಾರ ತನ್ನ ಅಂತರ್ಜಾಲದಲ್ಲಿ ಪ್ರಕಟಿಸಿದೆ. ಆದರ ಸಿರಿಮನೆ ಮತ್ತು ನೂರ್ ಅವರು ಈಗಾಗಲೇ ಸೈದ್ಧಾಂತಿಕ ಕಾರಣಗಳಿಗಾಗಿ ಪಕ್ಷವನ್ನು ತೊರೆದಿರುವಂಥವರು. ಶರಣಾಗು ವುದಕ್ಕೆ ಅವರ ಬಳಿ ಶಸ್ತ್ರಾಸ್ತ್ರಗಳೇ ಇಲ್ಲ, ಜತೆಗೆ ಅವರು ಪ್ರಜಾಸತ್ತಾತ್ಮಕ ಹೋರಾಟವನ್ನು ಶಾಂತಿಯುತವಾಗಿ ನಡೆಸಿಕೊಂಡು ಹೋಗುವ ಹೊಸ ಪಕ್ಷವನ್ನು ಕಟ್ಟಿಕೊಂಡಿ ದ್ದಾರೆ. ಹೀಗಾಗಿ ಸಂಪೂರ್ಣವಾಗಿ ಕೇಂದ್ರದ 'ಶರಣಾಗತಿ ಪ್ಯಾಕೇಜು' ಇವರಿಗೆ ಅನ್ವಯವಾಗಬೇಕೇಕೆ ಎನ್ನುವ ಪ್ರಶ್ ಎದುರಾಗುತ್ತದೆ.

ಅಲ್ಲದೆ ಕೇಂದ್ರದ ಈ ಪ್ಯಾಕೇಜಿನಲ್ಲಿ ಶರಣಾಗತರ ವರ್ತನೆ ಹೇಗಿರಬೇಕು ಎನ್ನುವ ಬಗ್ಗೆ ಕೆಲವು ಸೂಚನೆಗಳು ಇವೆ. ಇದು ಯಾವುದೇ ಹೋರಾಟಗಾರರ ಘನತೆಗೆ ಸ್ವೀಕೃತವಾದಂಥವುಗಳಲ್ಲ. ಮುಖ್ಯವಾಹಿನಿಗೆ ಬರಲು ಇಚ್ಛಿಸುವವರ ಮಾನವ ಹಕ್ಕುಗಳಿಗೆ ಭಂಗತರುವ ನಿಬಂಧನೆಗಳನ್ನು ಒಪ್ಪಿಕೊಳ್ಳುವಂತೆ ಮಾಡುವುದು, ಇಡೀ ಪ್ಯಾಕೇಜಿನ ಉದ್ದೇಶವನ್ನೇ ನಿರರ್ಥಕಗೊಳಿಸುವಂತಿದೆ. ಇದರಿಂದ ಹೋರಾಟಗಾರರು ಸರ್ಕಾರದ ಉದ್ದೇಶವನ್ನು ಸಂಶಯದಿಂದ ನೋಡುವಂತಾಗುತ್ತದೆ. ನಕ್ಸಲೀಯ ಹಿಂಸೆಯನ್ನು ತಡೆಗಟ್ಟುವುದಕ್ಕೆ ತೆಗೆದುಕೊಂಡಿರುವ ಉಪಕ್ರಮ ನಿಜಕ್ಕೂ ಸಾರ್ಥಕವಾಗಬೇಕಾದರೆ, ಸರ್ಕಾರಗಳು ಈ ಪ್ಯಾಕೇಜಿನ ಕರಾರುಗಳನ್ನು ಇನ್ನೊಮ್ಮೆ ಪುನರ್‌ವಿಮರ್ಶೆಗೆ ಒಳಪಡಿಸುವುದು ಒಳಿತು.

ಇಷ್ಟಾದರೂ, ಕರ್ನಾಟಕ ಸರ್ಕಾರ ಈ ವಿಷಯದಲ್ಲಿ ಗಂಭೀರವಾಗಿ ಆಲೋಚಿಸಿರುವುದು ಮತ್ತು ನಕ್ಸಲೀಯರ ಪುನರ್ವಸತಿಗೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವತ ಮಹತ್ತರವಾದ ಹೆಜ್ಜೆಯನ್ನಿಟ್ಟಿರುವುದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆ ಎಂದೇ ನಾವು ಭಾವಿಸುತ್ತೇವೆ. ಇದಕ್ಕೆ ಬೇಕಾದ ವಾತಾವರಣವನ್ನು ನಿರ್ಮಿಸಲು ತೀವ್ರ ಆಸಕ್ತಿಯನ್ನು ತೋರಿರುವ ಸನ್ಮಾನ್ಯ ಸಿದ್ದರಾಮಯ್ಯ ಮತ್ತು ಜಾರ್ಜ್ ಇವರಿಬ್ಬರನ್ನೂ ವೇದಿಕೆ ಅಹಿಂಸಾಪರ ಕರ್ನಾಟಕದ ಜನತೆಯ ಪರವಾಗಿ ಅಭಿನಂದಿಸುತ್ತದೆ. ಸರ್ಕಾರದ ಈ ನಿಲುವನ್ನು ಹಾಲಿ ಮತ್ತು ಮಾಜಿ ನಕ್ಸಲೀಯರಿಬ್ಬರೂ ಕೂಡ ಸ್ವಾಗತಿಸುತ್ತಾರೆ ಎಂದು ವೇದಿಕೆ ನಂಬುತ್ತದೆ ಮತ್ತು ಮಾತುಕತೆಗೆ ಮುಂದೆ ಬರಬೇಕೆಂದು ಮನವಿ ಮಾಡುತ್ತದೆ.

ಈ ಕ್ರಮಗಳಿಂದಾಗಿ ಇನ್ನು ಮುಂದೆ ನಕ್ಸಲೀಯ ಹಿಂಸೆ ಮತ್ತು ಎನಕೌಂಟರ್ ಸಾವುಗಳೆರಡಕ್ಕೂ ಇತಿಶ್ರೀ ಹಾಡಬಹುದಾದರೆ, ಪ್ರಜಾತಂತ್ರದ ಹೋರಾಟಗಳು ಇನ್ನಷ್ ಅರ್ಥಪೂರ್ಣವಾಗಬಹುದು.

● ಶಾಂತಿಗಾಗಿ ನಾಗರಿಕರ ವೇದಿಕೆ


ಕರಾವಳಿಯಲ್ಲಿ ಬ್ರಾಹ್ಮಣೀಕರಣದ ಹುನ್ನಾರ

ಒಂದು ಪತ್ರ

ಕಳೆದ ವಾರದ ಸಂಚಿಕೆಯಲ್ಲಿ ಶಶಿ ಪುತ್ತೂರು ಇವರು ಬರೆದಿರುವಂತೆ ಕೊಲ್ಲೂರಿನ ನಿತ್ಯಾನಂದ ಮಠದ ಸಮಾಧಿಯ ವಿವಾದವು ಕರಾವಳಿಯ ಬ್ರಾಹ್ಮಣೀಕರಣದ ಹುನ್ನಾರಿನ ಒಂದು ಭಾಗವಾಗಿದೆ ನಿಜ. ಅಲ್ಲಿ ಶೂದ್ರ - ಶೂದ್ರರೊಳಗೆ ಹೊಡೆದಾಡಿಸಿ ವೈದಿಕರು ತಮ್ಮ ಕುತಂತ್ರ ಫಲಿಸುವಂತೆ ಮಾಡುತ್ತಿದ್ದಾರೆ. ಅಡ್ಯಂತಾಯ ಎಂಬ ಕೊಲ್ಲೂರು ದೇವಸ್ಥಾನದ ಶೂದ್ರ ಆಡಳಿತಾಧಿಕಾರಿಯನ್ನು ಛೂಬಿಟ್ಟು ಶೂದ್ರ ನಿತ್ಯಾನಂದ ಮಠದವರ ವಿರುದ್ಧ ವೈದಿಕರು ಸಂಚು ರೂಪಿಸಿದ್ದಾರೆ.

ಇದೇ ಪ್ರಕಾರ ಕಟೀಲು ದುರ್ಗಾ ದೇವಾಲಯದಲ್ಲೂ ಅರ್ಚಕರು ಶೂದ್ರ ಗ್ರಾಮಸ್ಥರನ್ನು ದೂರವಿಡಲು ನಿಯಮಗಳ ಗೊಂದಲ ಸೃಷ್ಟಿಸಿದ್ದಾರೆ. ಪ್ರತಿವರ್ಷ ಸ್ಥಳೀಯ ರೈತರು ಉತ್ತಮ ಮಳೆ ಬೆಳೆಗಾಗಿ ಜೂನ್ ತಿಂಗಳಲ್ಲಿ ದುರ್ಗಾದೇವಿಗೆ ಸಿಯಾಳ ಅಭಿಷೇಕ ಮಾಡುವ ಕಥೆ ಶತಮಾನಗಳಿಂದ ನಡೆದುಕೊಂಡು ಬಂದಿದ್ದನ್ನು ಈ ವರ್ಷ ಬದಲಿಸುವ ಹುನ್ನಾರ ನಡೆದಿದೆ.

ಉಡುಪಿಯ ಅಂಬಲಪಾಡಿಯಲ್ಲಿ ಮೂಲದೇವರಾದ ಮಹಾಕಾಳಿಯನ್ನು ಎರಡನೇ ದರ್ಜೆಗೆ ಇಳಿಸಿ ವೈಷ್ಣವರ ಜನಾರ್ದನ ದೇವರನ್ನು ಮುಖ್ಯ ದೈವವನ್ನಾಗಿ ಮಾಡುವಲ್ಲಿ ವೈದಿಕರು ಸಫಲರಾದರೂ ಇದೇ ಪ್ರಕಾರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಇನ್ನೂರು ವರ್ಷಗಳ ಹಿಂದೆ ಅಲ್ಲಿಯ ವೈಷ್ಣವ ಮಠದವರು ಮೂಲದೇವರಾದ ಸುಬ್ರಹ್ಮಣ್ಯನನ್ನು ಎರಡನೆಯ ದರ್ಜೆಗೆ ಇಳಿಸಿ ತಮ್ಮ ಉಗ್ರನರಸಿಂಹನನ್ನು ಮುಖ್ಯ ದೇವರನ್ನಾಗಿ ಸ್ಥಾಪಿಸುವ ಹುನ್ನಾರು ಮಾಡಿದ್ದರು, ಆದರೆ ಅದು ಬ್ರಿಟಿಷ್ ಅಧಿಕಾರಿಗಳಿಂದ ವಿಫಲವಾಯಿತು. ಅದರೂ ವೈಷ್ಣವರು ಇನ್ನೊಂದು ಕಟ್ಟುಕಥೆ ಕಟ್ಟಿ ತಮ್ಮ ವಾಸುಕಿ ಹಾಗೂ ಆದಿಶೇಷನನ್ನು ಸುಬ್ರಹ್ಮಣ್ಯನೊಟ್ಟಿಗೆ ಜೋಡಿಸುವಲ್ಲಿ ಸಫಲರಾದರು. ಜತೆಗೆ ನಾಗ ಪಂಚಮಿಗೆ ಎದುರಾಗಿ ಗರುಡ ಪಂಚಮಿ ಎಂಬ ಹಬ್ಬವನ್ನು ಶೂದ್ರರ ಮೇಲೆ ಹೇರಲು ಪ್ರಯತ್ನಿಸಿದ್ದರು.




ಉಡುಪಿ ಜಿಲ್ಲೆಯಲ್ಲಿ ಉಪ್ಪಿನಕುದ್ರು ಎಂಬ ಸ್ಥಳದಲ್ಲಿ ವಾಸುದೇವ ಮಂದಿರ ಎಂಬುದೊಂದಿದೆ. ಅಲ್ಲಿರುವ ಯೋಗ ಮುದ್ರೆಯಲ್ಲಿರುವ ಮೂರ್ತಿ ಮೂಲತಃ ಗೌತಮ ಬುದ್ಧನದು. ಆದರೆ ವೈಷ್ಣವರು ಒಂದು ಬೌದ್ಧ ದೇವಾಲಯವನ್ನು ವಶಪಡಿಸಿಕೊಂಡು ಅದಕ್ಕೆ ವಾಸುದೇವ ಮಂದಿರ ಎಂದು ಹೆಸರಿಟ್ಟು ತಮ್ಮದಾಗಿಸಿಕೊಂಡರು. ಕೃಷ್ಣ - ವಿಷ್ಣು ಯೋಗ ಮುದ್ರೆಯ ಭಂಗಿಯಲ್ಲಿರುವ ಮೂರ್ತಿ ಭಾರತದಲ್ಲಿ ಎಲ್ಲಿಯೂ ಇಲ್ಲ, ಹಾಗಾದರೆ ಉಡುಪಿ ಜಿಲ್ಲೆಯಲ್ಲಿ ಹೇಗೆ ಬಂತು?

ಶಶಿ ಪುತ್ತೂರು ಬರೆದಿರುವಂತೆ ಪರಶುರಾಮ ಸೃಷ್ಟಿ ಎಂಬ ಕಥೆಯು ಅಡಗೋಲಜ್ಜಿ ಕಥೆ. ಅದಕ್ಕೆ ಯಾವುದೇ ಐತಿಹಾಸಿಕ ಆಧಾರಗಳಿಲ್ಲ. ಈ ಕಥೆ ಕೇವಲ ದಕ್ಷಿಣ ಕೇರಳದಲ್ಲಿ ಒಂದು ಜಾನಪದ ಕತೆಯಾಗಿ ಮೊದಲು ಪ್ರಚಲಿತವಿತ್ತು, ಅದನ್ನು ಸುಮಾರು ಇನ್ನೂರು ವರ್ಷಗಳ ಹಿಂದೆ ತುಳು ವೈದಿಕರು ನಮ್ಮ ಕರಾವಳಿಯಲ್ಲಿ ಪ್ರಚುರಗೊಳಿಸಿ ಶೂದ್ರರನ್ನು ಮೋಡಿ ಮಾಡಿದರು. ನಾಲ್ಕು ಸಾವಿರ ವರ್ಷಗಳ ಹಿಂದೆ ಈ ಕರಾವಳಿಯ ಭೂಮಿಯನ್ನು ಪರಶುರಾಮನಿಂದ ದಾನ ಪಡೆಯಲು ಆಗ ಇಲ್ಲಿ ಬ್ರಾಹ್ಮಣರೇ ಇರಲಿಲ್ಲವಲ್ಲಾ! ತಾನು ವಿಪರೀತ ದ್ವೇಷಿಸುತ್ತಿದ್ದ ಕ್ಷತ್ರಿಯರಿಗೆ ಈ ಭೂಮಿಯನ್ನು ಪರಶುರಾಮ ಎಂದೂ ದಾನ ಕೊಟ್ಟಿರಲಾರ. ಹಾಗಾದರೆ ಈಗ ಇಲ್ಲಿರುವ ಭೂಮಿಯ ಒಡೆಯರಲ್ಲಿ ಹೆಚ್ಚಿನವರು ವಿವಿಧ ಕ್ಷತ್ರಿಯ ಜಾತಿಗೆ ಸೇರಿದವರೇ ಆಗಿರುವುದು ಹೇಗೆಂದು ಇಂದಿನ ಪರಶುರಾಮನ ಶಿಷ್ಯರಿಗೇ ಗೊತ್ತಿಲ್ಲ, ಇನ್ನೂರು ವರ್ಷಗಳ ಹಿಂದೆ ಸತ್ಯನಾರಾಯಣ ವ್ರತ ಎಂಬ ಕಾಲ್ಪನಿಕ ಕಥೆಯು ವೈಶ್ಯ ವ್ಯಾಪಾರಿಗಳ ಮನೆಯಲ್ಲಿ ಹುಟ್ಟಿಕೊಂಡಂತೆ ಪರಶುರಾಮ ಸೃಷ್ಟಿ ಎಂಬ ಕಾಲ್ಪನಿಕ ಕಥೆಯೂ ಇನ್ನೂರು ವರ್ಷಗಳ ಹಿಂದೆ ವೈದಿಕರ ಮನೆಯಲ್ಲಿ ಹುಟ್ಟಿಕೊಂಡಿತು ಅಷ್ಟೇ.

ಭೂ-ವಿಜ್ಞಾನಿಗಳಿಗೆ ಇಲ್ಲಿ ಸಿಕ್ಕಿರುವ ಜೂರಾಸಿಕ್ ಯುಗದ ಜೀವಿಗಳ ಕಲ್ಲಾಗಿರುವ ಪಳೆಯುಳಿಕೆಯು ಈ ಕರಾವಳಿ ಪ್ರದೇಶದ ಭೂಮಿ ನಾಲ್ಕು ಕೋಟಿ ವರ್ಷಗಳ ಹಿಂದೆಯೇ ಇತ್ತು ಎಂಬುದನ್ನು ಸಾಬೀತು ಮಾಡುತ್ತದೆ. ಆಗ ಪರಶುರಾಮ ಎಂಬ ಮಾನವ ಬಿಡಿ ಯಾವ ಸಸ್ತನಿಗಳೂ ಇರಲಿಲ್ಲ. ಆಗ ಕೇವಲ ಶೀತ ರಕ್ತದ ಡೈನೋಸಾರಿನಂತಹ ಸರೀಸೃಪಗಳು ಮಾತ್ರವಿದ್ದವು.


-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಕಾರವಾರ: ದೋಷಪಾಂಡೆ ದರ್ಬಾರಿನಲ್ಲಿ ಮರಳು ಮಾಫಿಯಾ!!



ಉತ್ತರ ಕನ್ನಡದ ಜಿಲ್ಲಾ ಕೇಂದ್ರ ಕಾರವಾರಕ್ಕೆ ಮೊದಲಿನ ಒನಪು-ವೈಯ್ಯಾರವಿಲ್ಲ. ಅರಬ್ಬೀ ಸಮುದ್ರ-ಕಾಳಿ ನದಿಯ ಈ ಸಂಗಮ ಒಂಥರಾ ಕಾಸ್ಮಾಪಾಲಿಟನ್ ನಗರದಂತಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ. ಒಂದರ ಹಿಂದೊಂದರಂತೆ ವಕ್ಕರಿಸಿದ ಸರ್ಕಾರದ ಬೃಹತ್ ಯೋಜನೆಗಳು ಈ ಚೆಂದದ ಕಡಲತಡಿಯ ಚಹರೆಯನ್ನೇ ಬದಲಿಸಿಬಿಟ್ಟಿದೆ. ಯದ್ವಾತದ್ವಾ ಹಣ ಹರಿದಂತೆಲ್ಲ ಥರಾವರಿ ಮಾಫಿಯಾಗಳೂ ಕಾರವಾರದಲ್ಲಿ ತಲೆಯೆತ್ತಿದೆ. ಬಂದರು ಮೋಖಾ ದಂಧೆಯಿಂದ ಚಿತ್ತಲೋದ್ಯಮದವರೆಗೆ, ಭೂಗತ ಪಾದಾಗಿರಿಯಿಂದ ಭೂಗಳ್ಳರ ಭಾನ್ಗಡಿ ತನಕದ ತರತರದ ದೋ ನಂಬರಿಗಳನ್ನು ಪೋಷಿಸಿದ್ದು ಶಾಸಕನಾಗಿದ್ದ ವಸಂತ ಅಸ್ನೋಟಿಕರ್, ಮಂತ್ರಿಯಾಗಿದ್ದ ಆತನ ಪುತ್ರರತ್ನ ಆನಂದ ಅಸ್ನೋಟಿಕರ್ ಮತ್ತು ಈಗ ಎಮ್ಮೆಲ್ಲೆ ಆಗಿರುವ ಜೈಲುವಾಸಿ ಗಣಿ ಚೋರ ಸತೀಶ್ ಸೈಲ್‌ಗಳು. ಈ ಅಡ್ಡಕಸುಬಿಗಳಿಗೆ ಅಭಯ ಕೊಟ್ಟು ಕಾಪಾಡುತ್ತಿರುವುದು ಜಿಲ್ಲೆಯ ಪಾಲಿಟಿಕಲ್ ಡಾನ್ ಮಂತ್ರಿ ಆರ್.ವಿ. ದೇಶಪಾಂಡೆ ಯಾನೆ ದೋಷಪಾಂಡೆ ಸಾಹೇಬರು!!

ಕಾರವಾರವನ್ನೀಗ ಮರಳು ಮಾಫಿಯಾ ದೊರೆಗಳು ಚಂಗೆಡಿಸುತ್ತಿದ್ದಾರೆ. 29 ಮರಳೋದ್ಯಮಿಗಳು ಮಾಡುತ್ತಿರುವ ಲೂಟಿ-ಲಫಡಾ ಒಂದೆರಡಲ್ಲ. ಅಂತರ್ ರಾಜ್ಯ ಮರಳು ಸಾಗಾಟಕ್ಕೆ ಹಿಂದಿನ ಬಿಜೆಪಿ ಸರ್ಕಾರ ಇದ್ದಾಗಲೇ ನಿಷೇಧ ಜಾರಿಗೊಳಿಸಲಾಗಿತ್ತು. ಆದರೂ ಈ ನಿರ್ಬಂಧ ಧಿಕ್ಕರಿಸಿ ಅಂದು ಮಂತ್ರಿಯಾಗಿದ್ದ ಆನಂದ್ ಅಸ್ನೋಟಿಕರ್ ಗ್ಯಾಂಗ್ ಹಗಲಿರುಳೂ ಪಕ್ಕದ ಗೋವಾ ರಾಜ್ಯಕ್ಕೆ ಮರಳು ಸಾಗಿಸುತ್ತಲೇ ಇತ್ತು. ಅಷ್ಟೇ ಅಲ್ಲ, ಆನಂದನ ಖಾಸಾ ಶಿಷ್ಯ ಶ್ರವಣ ಶಿರೋಡ್ಕರ್ ಎಂಬ ಅವ್ಯವಹಾರಿ 'ಬಾಸ್'ನ ಮರಳನ್ನು ಹಡಗೇರಿಸಿ ಮಾಲ್ದೀವ್ಸ್‌ಗೆ ರಫ್ತು ಮಾಡಲು ಅಣಿಯಾಗಿದ್ದ. ಆದರೆ ಆನಂದನ ಶತ್ರುವಾಗಿದ್ದ ಅಂದಿನ ಜಿಲ್ಲಾ ಮಂತ್ರಿ ಕಾಗೇರಿ ಮಾಣಿ ಇದಕ್ಕೆ ತಡೆ ಹಾಕಿದ್ದ. ಈ ದ್ವೇಷಾಸೂಯೆ ಎಲ್ಲಿಗೆ ಹೋಗಿತ್ತೆಂದರೆ ಕಾರವಾರದ ಕಾಳಿ ನದಿಯಲ್ಲಿ ಉಸುಕುಗಾರಿಕೆಯೇ ನಿಂತು ಹೋಗುವಂತಾಗಿತ್ತು.




ಈ ಅಧಿಕಾರಸ್ಥರ ಗುದ್ದಾಟದಿಂದ ಉಸುಕುಗಾರಿಕೆಯನ್ನೇ ನಂಬಿ ಬದುಕಿದ್ದ ಒಂದಿಷ್ಟು ಕುಟುಂಬಗಳು ಬೀದಿಪಾಲಾಗುವಂತಾಯ್ತು. ಹೀಗಾಗಿ ಮರಳು ಉದ್ಯಮ ಶುರು ಮಾಡುವಂತೆ ಕೂಗೆದ್ದಿತು. ಆ ನಂತರ ಶಾಸಕನಾದ ಸೈಲ್ ತನ್ನ ನಿಷ್ಠಾವಂತರ ಮಾಡಿದ ಬಹುತೇಕ ಮರಳು ಮಾಫಿಯಾ ಕಿಂಗ್‌ಗಳು ಕಾಳಿ ನದಿಯಲ್ಲಿ ಉಸುಕು ತೆಗೆಯಲು ಅನುಮತಿ ಸರ್ಕಾರದಿಂದ ತರಲು ತಿಪ್ಪರಲಾಗ ಹಾಕಿದರು. ಗಣಿ ಉದ್ಯಮಿಗಳೆಂದರೆ 'ಕನಿಕರ'ದಿಂದ ಪರಿಗಣಿಸುವ ಸೈಲ್ ತನ್ನವರಿಗಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕಸರತ್ತು ನಡೆಸಿದ್ದೇ ನಡೆಸಿದ್ದು. ಆದರೆ ಕಾನೂನು ನಿಷ್ಠ ಅಧಿಕಾರಿಯಾಗಿದ್ದ ಕಾರವಾರ ಗಣಿ ಇಲಾಖೆಯ ಉಪ ನಿರ್ದೇಶಕ ಹೆಗಡೆ ಶಾಸಕ ಸೈಲ್‌ನ ಹಿಕಮತ್ತುಗಳಿಗೆ ಸೊಪ್ಪು ಹಾಕಲಿಲ್ಲ. ಸೈಲ್ ಆ ಅಧಿಕಾರಿಗೂ ಸಾರ್ವಜನಿಕವಾಗಿ ಬೈದು ಪೋಕಳಿಕ್ ಆಗಿದ್ದ. ಹೆಗಡೆ ಈ ಸೈಲ್-ದೇಶಪಾಂಡೆ ಕಾಟ ತಾಳಲಾಗದೆ ಸ್ವಯಂನಿವೃತ್ತಿ ಪಡೆದು ಮನೆಗೆ ಹೋದರು!!

ಆದರೆ ಕಾಳಿ ನದಿಯಲ್ಲಿ ಮರಳುಗಾರಿಕೆ ಮಾತ್ರ ಶುರುವಾಗಲೇ ಇಲ್ಲ. ಅಷ್ಟರಲ್ಲಾಗಲೇ ಶಾಸಕ ಸೈಲ್ ಸಿಬಿಐ ಬಲೆಗೆ ಬಿದ್ದು ಪರಪ್ಪನ ಅಗ್ರಹಾರದ ಬಂದೀಖಾನೆ ಸೇರಿದ್ದ. ಜಿಲ್ಲಾ ಮಂತ್ರಿಯೂ ಈ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಯಾವಾಗ ಪಾರ್ಲಿಮೆಂಟ್ ಎಲೆಕ್ಷನ್ ಹತ್ತಿರ ಬಂತೋ ಆಗ ಮತ್ತೊಂದು ಸುತ್ತಿನ 'ಹೋರಾಟ'ಕ್ಕೆ ಮರಳು ಮಾಫಿಯಾ ದೊರೆ ದಿಗಂಬರ ಶೇಟ್ ದಂಡು ಶುರು ಹಚ್ಚಿಕೊಂಡಿತು. ಬಡ ಮರಳು ಕಾರ್ಮಿಕರಿಗೆ ತೊಂದರೆಯಾಗುತ್ತದೆಂದು ಮಂತ್ರಿ ದೇಶಪಾಂಡೆ ಮುಂದೆ ಅಹವಾಲು ಮಂಡಿಸಿದರು. ಮಗನನ್ನು ಎಂಪಿಗಿರಿಗೆ ನಿಲ್ಲಿಸುವ ಇರಾದೆಯಲ್ಲಿದ್ದ ದೇಶಪಾಂಡೆ ವೋಟ್‌ಬ್ಯಾಂಕ್ ಲೆಕ್ಕಾಚಾರ ಕುಣಿದಾಡತೊಡಗಿತು. ಮರಳು ಉದ್ಯಮಿಗಳ ಕಾಸು-ಕಾರ್ಮಿಕರ ಓಟು ತನ್ನ ಕುಮಾರ ಕಂಠೀರವನಿಗೆ ಅನುಕೂಲ ಮಾಡಬಹುದೆಂದು ದೇಶಪಾಂಡೆ ಮರಳುಗಾರಿಕೆಗೆ ಅನುಮತಿ ಕೊಡಿಸಲು ಮುಂದಾದರು.

ಇದ್ದಕ್ಕಿದ್ದಂತೆಯೇ ಕಾರವಾರದ ಗಣಿ-ಭೂವಿಜ್ಞಾನ ಇಲಾಖೆಯ ಉಪ-ನಿರ್ದೇಶಕರ ಕಚೇರಿಯಿಂದ ಒಂದು ಖೋಟಾ ಪ್ರಸ್ತಾವನೆ ಬೆಂಗಳೂರಿನ ಗಣಿ ಇಲಾಖೆಯ ಕಚೇರಿಗೆ ಹೋಯ್ತು. ಈ ಪ್ರಸ್ತಾವನೆ ಹೇಗಿತ್ತೆಂದರೆ, ಅಂತರ್ ರಾಜ್ಯ ಮರಳು ಸಾಗಾಟಕ್ಕೆ ಸರ್ಕಾರ ವಿಧಿಸಿದ್ದ ನಿಷೇಧವನ್ನೇ 'ಕಾನೂನು ಬದ್ಧವಾಗಿ' ಉಲ್ಲಂಘಿಸಿ ಮರಳು ಮಾಫಿಯಾಕ್ಕೆ ಗೋವಾಕ್ಕೆ ಮರಳು ಸಾಗಿಸಲು ಅನುಕೂಲ ಮಾಡಿಕೊಡುವಂತಿತ್ತು!! ಕಾರವಾರ ತಾಲ್ಲೂಕಿನಲ್ಲಿ ಲಭ್ಯವಿರುವ 'ಕಪ್ಪು' ಮರಳನ್ನು ಸ್ಥಳೀಯವಾಗಿ ಹೆಚ್ಚು ಬಳಸುವುದಿಲ್ಲ. ಹೀಗಾಗಿ ಕಾಳಿ ನದಿಯ ಈ ಮರಳಿಗೆ ಬೇಡಿಕೆಯಿಲ್ಲ. ಜಿಲ್ಲೆಯ ಉಳಿದ ತಾಲ್ಲೂಕುಗಳಲ್ಲೂ ಮರಳಿನ ನಿಕ್ಷೇಪ ಇರುವುದರಿಂದ ಕಪ್ಪು ಮರಳಿಗೆ ಜಿಲ್ಲೆಯಲ್ಲಿ ಮಾರ್ಕೆಟ್ ಇಲ್ಲ. ಪಕ್ಕದ ಗೋವಾ ರಾಜ್ಯದಲ್ಲಿ ಈ 'ಕಪ್ಪು' ಮರಳಿಗೆ ಬೇಡಿಕೆಯಿರುವುದರಿಂದ ಅಲ್ಲಿಗೆ ಸಾಗಿಸಲು ಕೋರಿಕೆಯಿದೆ. ಇದು ಪ್ರಸ್ತಾವನೆಯಲ್ಲಿರುವ ಹಸಿ-ಹಸೀ ಸುಳ್ಳಿನ ಕಂತೆ.

ಈ ಪ್ರಸ್ತಾವನೆಗೆ ಪೂರಕವಾಗಿ ಪ್ರಯೋಗಾಲಯಕ್ಕೂ ಒಂದಿಷ್ಟು ಮರಳು ಕಳಿಸಲಾಗಿತ್ತು. ಆದರೆ ಅದು ಕಾಳಿ ನದಿ ಮರಳಲ್ಲ. ಬದಲಿಗೆ ಸಮುದ್ರ ದಡದಲ್ಲಿರುವ ಕಪ್ಪು ಮಣ್ಣು-ಕೆಸರು ಮಿಶ್ರಿತ ಸಿಲಿಕಾ ಸ್ಯಾಂಡ್ ಆಗಿತ್ತು! ಪ್ರಯೋಗಾಲಯದ ವರದಿಯೂ 'ಕಪ್ಪು' ಮರಳೆಂದು ದೃಢೀಕರಿಸುವಂಥ ಹಿಕಮತ್ತು ದೋಷಪಾಂಡೆಯ ಸಹಕಾರದಿಂದಲೇ ನಡೆದಿದೆ. ಕಾರವಾರದ ಕಾಳಿನದಿಯಲ್ಲಿ ಸಿಗುವುದು 'ಬಿಳಿ ಬಣ್ಣದ ಸಾದಾ ಮರಳು'. ಇದನ್ನೇ ಕಪ್ಪು ಮರಳೆಂದು ದಾಖಲೆ ತಯಾರಿಸಿ ಗೋವಾಕ್ಕೆ ಸಾಗಾಣಿಕೆ ಮಾಡುವ ಅನುಮತಿ ಗಣಿ ಇಲಾಖೆ ಕೊಡುವಂಥ 'ಜಾದೂ' ದೇಶಪಾಂಡೆಜೀ ಯಶಸ್ವಿಯಾಗಿ ಸಾಧಿಸಿದ್ದರು. ರಾಜ್ಯ ಸರ್ಕಾರ ದಿನಾಂಕ 22.01.2014ರಂದು ಒಂದು ಆದೇಶ (ಸಿಐ 21 ಎಂಎಂಎನ್ (1) 2014) ಹೊರಡಿಸಿ ಕಾರವಾರ ಕಾಳಿ ನದಿಯ 'ಕಪ್ಪು' ಮರಳು ಗೋವಾಕ್ಕೆ ಸಾಗಿಸಲು ಪರವಾನಗಿ ನೀಡಿತು. ಈ ಆದೇಶದಲ್ಲಿ ಮೂರು ಷರತ್ತು ಹಾಕಲಾಗಿತ್ತು. ಕಪ್ಪು ಮರಳಿನ ಅವಶ್ಯಕತೆ ಉತ್ತರ ಕನ್ನಡಕ್ಕಿದ್ದರೆ ಅದನ್ನು ಮೊದಲು ಪೂರೈಸಬೇಕು. ಅಕ್ಕಪಕ್ಕದ ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಉಡುಪಿ ಮತ್ತು ಶಿವಮೊಗ್ಗದ ಕಪ್ಪು ಮರಳಿನ ಬೇಡಿಕೆಯೂ ಪೂರೈಸಬೇಕು. ಈ ಎರಡು ಷರತ್ತು ಅನುಸರಿಸಿದ ನಂತರ ಹೆಚ್ಚುವರಿ ಮರಳನ್ನು ಮಾತ್ರ ಗೋವಾ ರಾಜ್ಯಕ್ಕೆ ಸಾಗಿಸಬಹುದೆಂದು ನಿರ್ಬಂಧ ಹಾಕಲಾಗಿತ್ತು.

ಕಾರವಾರ ಗಣಿ ಇಲಾಖೆಯಿಂದ ಗೋವಾಕ್ಕೆ ಕಪ್ಪು ಮರಳು ಸಾಗಾಣಿಕೆಗೆ ಅನುಮತಿ ಬಯಸಿ ಬೆಂಗಳೂರು ನಿರ್ದೇಶಕರ ಕಚೇರಿಗೆ ಹೋಗಿರುವ ಪ್ರಸ್ತಾವನೆಯಲ್ಲೇ ಕಾರವಾರ ಮತ್ತು ಉತ್ತರ ಕನ್ನಡದ ಉಳಿದ ತಾಲ್ಲೂಕುಗಳಲ್ಲಿ ಈ ಮರಳಿಗೆ ಬೇಡಿಕೆಯಿಲ್ಲ ಎಂದು ಹೇಳಲಾಗುತ್ತಿಲ್ಲವಾ? ಹಾಗಿರುವಾಗ ಈ ದೋಖಾ ಪ್ರಸ್ತಾವನೆಗೆ ಅನುಮತಿ ಸಿಕ್ಕಿರುವಾಗ ಕಪ್ಪು ಮರಳು ಕಳಿಸುವುದಾದರೂ ಎಲ್ಲಿಗೆ? ದೊಡ್ಡ ಮೊತ್ತದ ರೇಟು ಸಿಗುವ ಗೋವಾಕ್ಕೆ ತಾನೆ! ಆದರೆ ಇಲ್ಲೊಂದು ಹರಾಮಿತನ ಅಡಗಿದೆ. ಗೋವಾದಲ್ಲಿ ಬೇಡಿಕೆಯಿರುವುದು ಬಿಳಿ ಬಣ್ಣದ ಸಾದಾ ಮರಳಿಗೇ ಹೊರತು ಕಪ್ಪು ಮರಳಿಗಲ್ಲ. ಹಾಗೆಯೇ ಕಾರವಾರದ ಕಾಳಿ ನದಿಯಲ್ಲಿರುವುದು ಅತ್ಯುತ್ತಮ ದರ್ಜೆಯ ಬಿಳಿ ಮರಳು ಮಾತ್ರ. ಅಂದರೆ ಬೆಲೆ ಬಾಳುವ ಬಿಳಿ ಮರಳನ್ನೇ ಕಳಪೆ ಕಪ್ಪು ಮರಳೆಂದು ದಾಖಲೆ ಸೃಷ್ಟಿಸಿ ಗೋವಾಕ್ಕೆ ಕಳಿಸಿ ಲೂಟಿ ಮಾಡುವ ಹುನ್ನಾರವಿದು. ಇದು ಮಂತ್ರಿ ದೇಶಪಾಂಡೆಯ ದಯೆಯಿಂದ ಸಾಧ್ಯವೂ ಆಗಿದೆ.



ಕಳೆದ ಫೆಬ್ರುವರಿಯಲ್ಲಿ 29 ಮಂದಿಗೆ ಕಾಳಿ ನದಿಯಿಂದ ಮರಳು ಎತ್ತಿ ಸಾಗಿಸಲು ಗಣಿ-ಭೂ ವಿಜ್ಞಾನ ಇಲಾಖೆ ಅನುಮತಿ ನೀಡಿತು. ಇವರೆಲ್ಲ ಶಾಸಕ ಸೈಲ್ ಮತ್ತು ಮಂತ್ರಿ ದೋಷಪಾಂಡೆಯ ದಗಾಕೋರ ಹಿಂಬಾಲಕರು. ಇವರಿಗೆಲ್ಲ ಮೂರು ತಿಂಗಳಷ್ಟೇ ಮರಳು ಎತ್ತಲು-ಸಾಗಿಸಲು ಪರವಾನಗಿ ಕೊಡಲಾಗಿತ್ತು. ಈ ಅವಧಿಯಲ್ಲಿ ತಲಾ 1,000 ಮೆಟ್ರಿಕ್ ಟನ್ ಮರಳಷ್ಟೇ ತೆಗೆದು ಸಾಗಿಸಬೇಕೆಂಬ ನಿಬಂಧನೆಯೂ ಹಾಕಲಾಗಿತ್ತು. ಒಂದು ಟಿಪ್ಪರ್ ಲೋಡ್ ಎಂದರೆ 10 ಮೆಟ್ರಿಕ್ ಟನ್. ಇಂಥ ಒಂದು ಲೋಡ್‌ಗೆ ಒಂದು ಪರವಾನಗಿಯಂತೆ 29 ಉಸುಕು ಲೀಸ್‌ದಾರರಿಗೆ ತಲಾ 100 ಪರ್ಮಿಟ್ ಗಣಿ-ಭೂ ವಿಜ್ಞಾನ ಇಲಾಖೆ ನೀಡಿತ್ತು. ಪರವಾನಗಿ ಪಡೆದ ಉದ್ಯಮಿಗಳು ಇ-ಪರ್ಮಿಟ್ ವ್ಯವಸ್ಥೆಯ ಮೂಲಕ ಇಂಟರ್‌ನೆಟ್‌ನಲ್ಲಿ ತಮಗೆ ನೀಡಲಾಗಿರುವ ಪಾಸ್‌ವರ್ಡ್ ಬಳಸಿ ಪರವಾನಗಿ ಕ್ರಿಯಾಶೀಲ (ಆ್ಯಕ್ಟಿವೇಟ್)ಗೊಳಿಸಬೇಕು. ಆ್ಯಕ್ಟಿವೇಟ್ ಮಾಡಿದ ಪಾಸ್‌ಗಳನ್ನು ಮರಳು ಸಾಗಿಸುವ ಲಾರಿಯೊಂದಿಗೆ ಕಳಿಸಿ ಮರಳು ಖರೀದಿಸಿದ ಗ್ರಾಹಕನಿಗೆ ಕೊಡಬೇಕು. ಇಂಥ ಪಾಸ್ ಇಲ್ಲದ ಮರಳು ಅಕ್ರಮ.

ಒಂದು ಸಾವಿರ ಮೆಟ್ರಿಕ್ ಟನ್ ಮರಳು ಎತ್ತಿ-ಸಾಗಿಸಲು ಗಣಿ ಇಲಾಖೆಗೆ ಲೀಸ್‌ದಾರ ರಾಜಧನವೆಂದು 60 ಸಾವಿರ ತುಂಬಬೇಕು. ಇಂಥ ಷರತ್ತುಗಳಲ್ಲಿ ಒಂದನ್ನೂ ಲೀಸ್‌ದಾರರು ಪಾಲಿಸಿಲ್ಲ. ಜಿಲ್ಲೆಯಲ್ಲಿ ಕಾಳಿ ನದಿ ಉಸುಕಿಗೆ ದೊಡ್ಡ ಬೇಡಿಕೆಯಿದೆ. ಅಲ್ಲದೆ ಪಕ್ಕದ ಧಾರವಾಡ-ಬೆಳಗಾವಿ ಜಿಲ್ಲೆಗಳಲ್ಲೂ ಕಾಳಿ ಮರಳಿಗೆ ಮಾರ್ಕೆಟ್ ಇದೆ. ಆದರೆ ಬರೀ 15 ಕಿ.ಮೀ. ದೂರವಿರುವ ಗೋವಾ ಗಡಿ ದಾಟಿಸಿ ಈ ಲೂಟಿಕೋರ ಲೀಸ್‌ದಾರರು ದಂಧೆ ನಡೆಸಿದ್ದಾರೆ. ಕಾರವಾರದಲ್ಲಿ ಒಂದು ಲೋಡ್ (10 ಮೆಟ್ರಿಕ್ ಟನ್) ಮರಳಿಗೆ ರೂ. 6,000 ಇದ್ದರೆ, ಗೋವಾದಲ್ಲಿ 15,000 ರೂ. ಬೆಲೆಯಿದೆ. ಹೀಗಾಗಿ ಈ ಲೀಸ್‌ದಾರರು ದಿನವೊಂದಕ್ಕೆ 15 ಮೀಟರ್ (1-2 ಬೋಟ್) ಮರಳು ಎತ್ತಿ ಗೋವಾಕ್ಕೆ ಸಾಗಿಸಿದ್ದಾರೆ. ಅಂದರೆ ದಿನಕ್ಕೆ ಕೋಟ್ಯಾಂತರ ರೂ. ದೋ ನಂಬರ್ ದಂಧೆ 29 ಲೀಸ್‌ದಾರರು ಮಾಡಿದ್ದಾರೆ.

ಯಾವ ಗ್ರಾಹಕನಿಗೂ ಪರ್ಮಿಟ್ ಕೊಟ್ಟಿಲ್ಲ ಈ ಲೀಸ್ ಸರದಾರರು. ಈ ಪರ್ಮಿಟ್ ಇಟ್ಟುಕೊಂಡೇ ದಗಲುಬಾಜಿ ಆಟ ಆಡುತ್ತ ಲಕ್ಷಾಂತರ ಮೆಟ್ರಿಕ್ ಟನ್ ಮರಳು ಗೋವಾಕ್ಕೆ ಸಾಗಿಸಿ ಕಳ್ಳ ಕುಬೇರರಾಗಿದ್ದಾರೆ. ಒಂದು ಕಾಲದಲ್ಲಿ ಒಪ್ಪತ್ತು ಗಂಜಿ-ಒಣ ಮೀನಿಗೂ ತತ್ವಾರ ಪಡುತ್ತಿದ್ದ ಲೀಸ್‌ದಾರರು ಇವತ್ತು ಬಂಗ್ಲೆ ಕಟ್ಟಿಕೊಂಡು ಹೈ-ಫೈ ಆಗಿದ್ದಾರೆ. ಮೂರು ತಿಂಗಳ ಅವಧಿ ಮುಗಿದು ತಿಂಗಳು ಕಳೆದಿದೆ. ಆದರೂ ಹೊಸ ಪರವಾನಗಿ ಪಡೆದಿಲ್ಲ. ರಾಜಧನ ತುಂಬಿಲ್ಲ. ಪರ್ಮಿಟ್‌ಗಳಿಲ್ಲ. ಆದರೂ ಹಗಲು ಇರುಳು ಮರಳುಗಾರಿಕೆಯನ್ನು ಕಾಳಿ ನದಿಯಲ್ಲಿ ಈ ಲೀಸ್‌ದಾರರು ಸ್ಪರ್ಧೆಯಲ್ಲಿ ನಡೆಸುತ್ತಿದ್ದಾರೆ. ಸಿಆರ್‌ಝಡ್ ನಿಯಮದಂತೆ ಬ್ರಿಡ್ಜ್‌ಗಳಿರುವಲ್ಲಿ ಮರಳು ಎತ್ತುವಂತಿಲ್ಲ. ಕಾಳಿ ನದಿಯಲ್ಲಿ ಹಾದುಹೋಗಿರುವ ಕೊಂಕಣ ರೇಲ್ವೆಯ ಸೇತುವೆಯ ಕಂಬಗಳ ಬುಡದಲ್ಲೇ ಕನ್ನ ಕೊರೆದು ಮರಳು ಕೊಳ್ಳೆ ಹೊಡೆಯಲಾಗುತ್ತಿದೆ. ನಿರಾತಂಕವಾಗಿ ಗೋವಾಕ್ಕೆ ಈ ಮರಳು ಸಾಗಿಸಿ ಹಣ ಮಾಡುತ್ತಿದ್ದಾರೆ.

ಮಂತ್ರಿ ದೇಶಪಾಂಡೆ ಕೃಪೆಯಿಂದ ಸರ್ಕಾರವನ್ನೇ ಯಾಮಾರಿಸಿ ಗಿಲೀಟಿನ ಲೀಸ್ ಪಡೆದಿದ್ದ ಮರಳು ಮಾಫಿಯಾ ಸದಸ್ಯರು ಈಗ ಪರ್ಮಿಟ್ ಇಲ್ಲದೆಯೂ ದಂಧೆ ಮುಂದುವರಿಸಿದ್ದಾರೆ. ಇದು ಕಾರವಾರದ ಗಣಿ ಇಲಾಖೆಯ ಪ್ರಭಾರ ಉಪ-ನಿರ್ದೇಶಕ ದಾವೂದ್‌ಗೆ ಖಾತ್ರಿಯಾಗಿ ಗೊತ್ತಿದೆ. ಆತ 'ದೊರೆ'ಯ ಭಯದಿಂದ ಕಣ್ಣಿದ್ದೂ ಕುರುಡನಂತೆ ವರ್ತಿಸುತ್ತಿದ್ದಾನೆ. ಮಾಫಿಯಾದವರು ಕೊಟ್ಟಷ್ಟು ಕಿಸೆಗಿಳಿಸಿ ಪಾಲಿಗೆ ಬಂದಿದ್ದೇ ಪಂಚಾಮೃತ ಎಂದು ಸಂತುಷ್ಟನಾಗಿದ್ದಾನೆ. ನಿಷ್ಠೂರ ತನಿಖೆ ಮಾಡಿದರೆ 'ಗುರು' ಸೈಲ್‌ನಂತೆಯೇ ಆತನ ಮರಳುಗಳ್ಳ ಅನುಯಾಯಿಗಳೂ ಜೈಲು ಸೇರುವುದು ನಿಸ್ಸಂಶಯ. ಆದರೆ ಎಲ್ಲಕ್ಕೂ ಮೊದಲು ದೇಶಪಾಂಡೆ ಎಂಬ ಕಳ್ಳ ಬೆಕ್ಕಿಗೆ ಗಂಟೆ ಕಟ್ಟಬೇಕಿದೆ. ಇದು ಸಿಎಂ ಸಿದ್ದುರಿಂದ ಸಾಧ್ಯವಾ? ಇನ್ನಾದರೂ ಗಣಿ-ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಎಚ್ಚೆತ್ತು ಅಕ್ರಮ ಮರಳುಗಾರಿಕೆಗೆ ಕಡಿವಾಣ ಹಾಕಿಯಾರಾ?

• ನಹುಷ

ಸಿಲಿಕಾ ಸ್ಯಾಂಡ್ ಲೂಟಿ!

ಉತ್ತರ ಕನ್ನಡದ ಕರಾವಳಿ ಗುಂಟ ಸಿಲಿಕಾ ಸ್ಯಾಂಡ್ ಪ್ರದೇಶವೇ ಜಾಸ್ತಿ. ಇಲ್ಲಿಯೂ ಜನ ಕೋಟಿ-ಗಟ್ಟ ಮಾಡಿಕೊಂಡಿದ್ದಾರೆ. ಈ ಉಸುಕು ಮಣ್ಣಿನ ಮೇಲೆ ದಗಲುಬಾಜಿ ದಂಧೆದಾರರ ಕಣ್ಣು ಬಿದ್ದಿದೆ. ಈ ಬೆಟ್ಟದಂಥ ಸಿಲಿಕಾ ಉಸುಕು ಗ್ಲಾಸ್ ಮತ್ತು ಪಿಂಗಾಣಿ ಪಾತ್ರೆ-ಮತ್ತು ತಯಾರಿಕೆಗೆ ಬಳಸುತ್ತಾರೆ. ಇದಕ್ಕೆ ದೊಡ್ಡ ಮಟ್ಟದ ಬೇಡಿಕೆ ಬಂದಿದೆ. ಹೀಗಾಗಿ ಆಳುವವರ ಹತ್ತಿರದವರು ಮತ್ತು ಕಳ್ಳ ಹಣವಂತರು ಈ ದಂಧೆಗೆ ಇಳಿದಿದ್ದಾರೆ.

ಜಿಲ್ಲೆಯ ಕರಾವಳಿಯ ಐದೂ ತಾಲ್ಲೂಕಿನ ಸಮುದ್ರ ದಂಡೆಯ ಏರಿಯಾದಲ್ಲಿನ ಸರ್ಕಾರಿ ಮತ್ತು ಖಾಸಗಿ ಎರಡೂ ಜಾಗದಲ್ಲಿ ಸಿಲಿಕಾ ಸ್ಯಾಂಡ್ ಅಗೆದು ಹತ್ತು ಚಕ್ರದ ಲಾರಿಗೇರಿಸಿ ರಾಜಸ್ಥಾನ-ಗುಜರಾತ್-ಮುಂಬೈ ಮುಂತಾದೆಡೆಗೆ ಕಳಿಸಲಾಗುತ್ತಿದೆ. ಹೀಗೆ ಸಿಲಿಕಾ ಕಳಿಸುವವರಲ್ಲಿ ಬೆರಳೆಣಿಕೆಯವರಿಗಷ್ಟೇ ಪರವಾನಗಿ ಇದೆ. ಹೆಚ್ಚಿನವರು ಸಿಕ್ಕ-ಸಿಕ್ಕಲ್ಲಿ ಅಗೆತ ನಡೆಸಿದ್ದಾರೆ. ರೈತರಿಗೆ ಹಣದ ಆಸೆ ತೋರಿಸಿ ಲೂಟಿ ಮಾಡುತ್ತಿದ್ದಾರೆ. ಕೆಲವು ಕಳ್ಳರಂತೂ ಸರ್ಕಾರಿ ಜಾಗದಲ್ಲೇ ಸಿಲಿಕಾ ಎತ್ತಿ ಕಳ್ಳ ಸಾಗಾಣಿಕೆ ಮಾಡಿದ್ದಾರೆ. ಕುಮಟಾದಂಥ ಕಡೆ ಕಳ್ಳ ಸಿಲಿಕಾ ಸ್ಯಾಂಡ್ ದಂಧೆದಾರರು ಮಂತ್ರಿ ದೇಶಪಾಂಡೆಯ 'ಲಬ್ಬಿ' ಮಂದಿಯೇ!!


ಸರ್ಕಾರಕ್ಕೆ ರಾಜಧನ ತುಂಬದೆ, ಪರವಾನಗಿ ಪಡೆಯದೆ, ಸಿಆರ್‌ಝಡ್ ಕಾನೂನು ಕಡೆಗಣಿಸಿ ಸಿಲಿಕಾ ಸ್ಯಾಂಡ್ ಕಳ್ಳ ಸಾಗಾಣಿಕೆ ನಡೆಯುತ್ತಿದೆ. ಗಣಿ ಇಲಾಖೆಯ ಅಧಿಕಾರಿಗಳು, ಅಧಿಕಾರಸ್ಥ ಪುಢಾರಿಗಳೂ ಈ ದಂಧೆಯಲ್ಲಿ ಶಾಮೀಲಾಗಿದ್ದಾರೆ. ಒಟ್ಟಿನಲ್ಲಿ ದೇಶಪಾಂಡೆ ದರ್ಬಾರಿನಲ್ಲಿ ಉತ್ತರ ಕನ್ನಡದ ನೈಸರ್ಗಿಕ ಸಂಪತ್ತು ನಾಯಿ-ನರಿ ಪಾಲಾಗುತ್ತಿದೆ!!

ಕೊಂಕಣ ರೈಲಿಗೆ ತುತ್ತಾಗಲಿದೆ!!


ಕಾರವಾರದಲ್ಲಿ ಮರಳು ಮಾಫಿಯಾದ ಅಕ್ರಮ-ಅವ್ಯವಹಾರ-ಅನಾಹುತ ಮಿತಿಮೀರಿ ಹೋಗಿದೆ. ಜಿಲ್ಲಾಡಳಿತ, ಪೊಲೀಸ್ ಮತ್ತು ಗಣಿ ಇಲಾಖೆ ಉಸುಕು ಕಳ್ಳರ ಕರಾಮತ್ತು ಕಣ್ಣು-ಬಾಯಿ ಬಿಟ್ಟುಕೊಂಡು ನೋಡುತ್ತಿದೆ. ಸಾಕ್ಷಾತ್ ಮಂತ್ರಿ ದೋಷಪಾಂಡೆಯೇ ಚೋರರ ಪರ ನಿಂತಿರುವಾಗ ಈ ಪಾಪದ ಸರ್ಕಾರಿ 'ಕರ್ಮ'ಚಾರಿಗಳು ಅದೇನು ಮಾಡಿಯಾರು, ಪಾಪ?!

ಕಾರವಾರದ ಮರಳುಗಾರಿಕೆಯೇ ಅಕ್ರಮ. ಇದಕ್ಕೆ ಯಾವ ಪರವಾನಗಿಯೂ ಇಲ್ಲ. ಮೂರು ತಿಂಗಳ ಮಟ್ಟಿಗೆ ಪಡೆದಿದ್ದ ಲೀಸ್ ಕೂಡ ಖೋಟಾ. ಆದರೂ ಹಗಲಿರುಳೂ ಕಾಳಿ ನದಿಯಲ್ಲಿ ಸುಮಾರು 150 ಬೋಟುಗಳು ಉಸುಕು ಎತ್ತಿ ದಂಡೆಗೆ ತಂದು ದಾಸ್ತಾನು ಮಾಡುತ್ತಿವೆ. ಇವು ಕೊಂಕಣ ರೈಲು ಸೇತುವೆಯ ಕಂಬಗಳ ಬುಡದಲ್ಲೇ ರೇತಿ ಎತ್ತುತ್ತಿವೆ. ಮರಳುಗಾರಿಕೆ ನೀತಿಯಂತೆ ಸೇತುವೆ ಕೆಳಗೆ ಮರಳು ತೆಗೆಯುವಂತೆಯೇ ಇಲ್ಲ. ಮರಳು ತೆಗೆಯುವುದಿದ್ದರೆ ಬೆಳಗ್ಗೆ 6 ರಿಂದ ಸಂಜೆ 6ರ ಒಳಗಷ್ಟೇ. ಇಲ್ಲಿ ರಾತ್ರಿಯೂ ಮರಳುಗಾರಿಕೆ.

ಮರಳು ಮಾಫಿಯಾದ ಧನದಾಹಕ್ಕೆ ಸೇತುವೆಯ ಕಂಬ ಒಂದು ಶಿಥಿಲವಾದರೆ... ಏನಾದೀತು? ಪ್ರತಿ ದಿನ ಈ ಸೇತುವೆ ಮೇಲೆ ಹತ್ತಾರು ರೈಲುಗಳು ಓಡುತ್ತಿವೆ. ಸೇತುವೆಗೆ ಗಂಡಾಂತರಕಾರಿಯಾದ ಈ ಮರಳುಗಾರಿಕೆ ಬಗ್ಗೆ ಜಿಲ್ಲಾಡಳಿತ ರಾಜಕೀಯ ಕಾರಣಕ್ಕೆ ಸುಮ್ಮನಿದೆ. ಆದರೆ ಕೊಂಕಣ ರೈಲು ಇಲಾಖೆಗೂ ಈ ಗಂಡಾಂತರ ಕಾಣಿಸದ್ದು ಆಶ್ಚರ್ಯ. ಸೇತುವೆ ಕುಸಿದರೆ.... ಸ್ವಲ್ಪ ಊಹಿಸಿ!! ಅನಾಹುತಕ್ಕೆ ಮೊದಲೇ ಸಂಬಂಧಿಸಿದವರು ಎಚ್ಚೆತ್ತುಕೊಳ್ಳುವರಾ?



‘ಕರಿಯ ಕಣ್‌ಬಿಟ್ಟ’: ದೃಶ್ಯ ರೂಪಕಗಳಲ್ಲಿ ಪ್ರತಿಧ್ವನಿಸಿದ ದಲಿತ ಬದುಕು



ದಲಿತರ ಅಸ್ಪೃಶ್ಯತೆಯಂಥ ವಿಷಯವನ್ನು ಎತ್ತಿಕೊಂಡು ಚಲನಚಿತ್ರ ಮಾಡುವುದೇ ಒಂದು ಅಪಾಯಕಾರಿ ಪ್ರಯತ್ನ ಎಂದು ತಿಳಿದಿರುವಾಗ ಹಾಗು ಅದಕ್ಕೆ ಹಣ ಖರ್ಚು ಮಾಡಲು ಯಾರೂ ಮುಂದೆ ಬರದಿರುವಾಗ ಕವಿತಾ ಲಂಕೇಶ್ ಇಂಥ ಸಾಮಾಜಿಕ ವಿಷಯವನ್ನು ಆರಿಸಿಕೊಂಡು ಚಲನಚಿತ್ರ ನಿರ್ಮಿಸಿ ನಿರ್ದೇಶಿಸಿರುವುದೇ ಕನ್ನಡದ ಸಂದರ್ಭದಲ್ಲಿ ಬಹಳ ಮಹತ್ವದ ವಿಷಯವಾಗಿದೆ. ‘ಕರಿಯ ಕಣ್‌ಬಿಟ್ಟ’ ಸಿನಿಮಾವನ್ನು ವೀಕ್ಷಿಸಲು ಇಚ್ಛಿಸುವ ಸಂಘ-ಸಂಸ್ಥೆಗಳು ಗೌರವ ಧನ ನೀಡಿ ಅದನ್ನು ತಮ್ಮ ವೃಂದದವರಿಗೆ, ಸದಸ್ಯರಿಗೆ, ಬಳಗದವರಿಗೆ ತೋರಿಸಬಹುದು. ಆಸಕ್ತರು 9844408048 ನಂಬರ್ ಸಂಪರ್ಕಿಸಿ.

ಕವಿತಾ ಲಂಕೇಶ್ ನಿರ್ಮಿಸಿ ನಿರ್ದೇಶಿಸಿರುವ ‘ಕರಿಯ ಕಣ್‌ಬಿಟ್ಟ’ ಚಲನಚಿತ್ರ ದಲಿತರ ದಯನೀಯ ಬದುಕನ್ನು ದೃಶ್ಯ ಸುರುಳಿಗಳಲ್ಲಿ ಕಟ್ಟಿಕೊಡುತ್ತದೆ. ಜೊತೆಗೆ ಅಸಹನೀಯವಾದ ದಲಿತ ಬದುಕಿನ ಪ್ರತಿಯೊಂದು ಘಟನೆಯನ್ನು ದೃಶ್ಯರೂಪಕವನ್ನಾಗಿ ಪರಿವರ್ತಿಸುವುದು ಹಾಗೂ ಪ್ರತಿಯೊಂದು ಘಟನೆ ಒಂದು ಘಟಕವಾಗಿ ತನ್ನ ಬಿಸಿ ಉಸಿರನ್ನು ವೀಕ್ಷಕನಿಗೆ ತಾಗಿಸುವುದು ಕವಿತಾ ಲಂಕೇಶ್ ಮುಟ್ಟಿದ ನಿರ್ದೇಶನ ಕಲೆಯ ಅತ್ಯುನ್ನತ ಘಟ್ಟವನ್ನು ತೋರಿಸುತ್ತದೆ. ಈ ಚಿತ್ರದ ಕಂಪನಗಳು ಹಾಗೂ ಈ ಚಿತ್ರದ ಆಂತರಿಕ ಗ್ರಹಿಕೆಗಳು ಅಸ್ಪೃಶ್ಯರು, ಸ್ಪೃಶ್ಯರು ಎನ್ನುವ ಸಮಾಜ ನಿರ್ಮಿತ ಪರಿಮಿತಿಗಳನ್ನು ದಾಟಿ, ಒಟ್ಟು ಮಾನವ ಕುಲದ ಅಂತಃಕರಣದ ಮಿಡಿತವನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾದದ್ದು ಈ ಚಿತ್ರದ ಹೆಗ್ಗಳಿಕೆಯಾಗಿದೆ. ಈ ಚಿತ್ರ ದೃಶ್ಯರೂಪಕಗಳ ಸಮೂಹ. ಅದನ್ನು ಓರಣವಾಗಿ ಬಿಗಿಬಂಧದಲ್ಲಿ ಸಂಗ್ರಹಿಸಿದ್ದಾರೆ. ಇದು ವೀಕ್ಷಕನನ್ನು ಆಕ್ರಮಿಸುವ ರೀತಿ ಹಾಗೂ ಬಾಧಿಸುವ ಪರಿ ವೀಕ್ಷಕನಲ್ಲಿ ಎಂಥ ಭಾವನೆ ಹುಟ್ಟಿಸುತ್ತದೆಂದರೆ ದಾಸ್ತೋವಸ್ಕಿ, ಟಾಲ್‌ಸ್ಟಾಯ್, ಚೆಕೊವ್‌ರಂಥ ದಾರ್ಶನಿಕರ ಬರಹಗಳಲ್ಲಿ ದೋಷಿಯಾದವ ತನ್ನ ತಪ್ಪನ್ನು ತಾನೇ ಒಪ್ಪಿಕೊಂಡು ಶಿಕ್ಷೆಗೆ ಗುರಿಪಡಿಸಿಕೊಳ್ಳುವಂತೆ, ನಮ್ಮ ವರ್ತಮಾನದ ಸಮಾಜ ದಲಿತರಿಗೆ ಮಾಡುತ್ತಿರುವ ಅನ್ಯಾಯಗಳನ್ನು ದೋಷಿಗಳಂತೆ ಒಪ್ಪಿಕೊಂಡು ಅದನ್ನು ಹೋಗಲಾಡಿಸಲು ನಮ್ಮ ನಮ್ಮ ಆತ್ಮ ಘರ್ಷಣೆಗೆ ತೊಡಗಲು ಹಚ್ಚುವ ತಾರ್ಕಿಕ ಆಶಯವೊಂದನ್ನು ಈ ಚಿತ್ರ ಸಾಧಿಸಿ ತೋರಿಸಿದೆ.

ಸಾಹಿತ್ಯ ದೃಶ್ಯ ಮಾಧ್ಯಮದಲ್ಲಿ, ಭೇದಿಸುವ ಹಾಗೂ ಕಾಡುವ ರೂಪಕಗಳಾಗಿ ಹೇಗೆ ಅರಳಬಲ್ಲವು ಎನ್ನುವುದಕ್ಕೆ ‘ಕರಿಯ ಕಣ್‌ಬಿಟ್ಟ’ ಒಂದು ಶ್ರೇಷ್ಠ ಉದಾಹರಣೆಯಾಗಿದೆ. ದಲಿತ ಸಮಸ್ಯೆಗಳನ್ನು ತನ್ನ ಆಂತರಿಕ ಸತ್ವದಿಂದ, ದೃಶ್ಯಗಳಲ್ಲಿ ಸುರುಳಿಸುರುಳಿಯಾಗಿ ಅನಾವರಣಗೊಳಿಸುವ, ಒಂದು ಘಟನೆ ಮತ್ತೊಂದು ಘಟನೆಗೆ ಜಿಗಿಯುವಾಗ ದಲಿತರ ಸಂಕಟಗಳನ್ನು ಸಣ್ಣಸಣ್ಣ ಬಿರುಗಾಳಿಗಳಂತೆ ಸೆರೆಹಿಡಿಯುವ ದಲಿತ ಬದುಕಿನ ದಯನೀಯ ಅವಸ್ಥೆಗಳಾದ ಹಸಿವು, ಅವಮಾನ, ಅಸ್ಪೃಶ್ಯತೆ, ದಿಕ್ಕುತೋಚದ ಸ್ಥಿತಿಗಳನ್ನು; ಆತಂಕ, ನಿರಾಶೆ, ಹತಾಶೆಗಳಲ್ಲಿ ಪದರುಪದರಾಗಿ ಬಿಚ್ಚುವ ಹಾಗೂ ವೀಕ್ಷಕನನ್ನು ಒಂದು ವೃತ್ತಾಂತದಿಂದ ಮತ್ತೊಂದು ವೃತ್ತಾಂತಕ್ಕೆ ಕರೆದೊಯ್ಯುವಾಗ, ದೃಶ್ಯಕಲೆ ಸತ್ಯದ ದರ್ಶನ ಮಾಡಿಸುತ್ತ, ನೋಡುಗನಲ್ಲಿ ಸಹನೆ, ಸಮಾನತೆ, ಸಹಬಾಳ್ವೆಗೆ ಪ್ರೇರೇಪಿಸುವುದು ಹಾಗೂ ಸವರ್ಣೀಯರ ಬಗ್ಗೆ ಯಾವ ದ್ವೇಷ, ಅಸಹಿಷ್ಣುತೆ ವ್ಯಕ್ತಪಡಿಸದೇ, ಅವರ ವೈರುಧ್ಯಗಳ ಬಗ್ಗೆ ಅವರ ಮುಖಕ್ಕೆ ಕನ್ನಡಿ ಹಿಡಿಯುವುದು, ಆತ್ಮಾವಲೋಕನಕ್ಕೆ ಹಚ್ಚುವುದು ಚಿತ್ರದ ಆಶಯಗಳಾಗಿವೆ.

ಕರಿಯ ಎನ್ನುವ ದಲಿತ ಬಾಲಕನ ಸುತ್ತ ಓಡುವ ಕಥೆ: ದಲಿತರು ಅನ್ನಕ್ಕಾಗಿ ಪರದಾಡುವ, ಅನ್ನ ಹೊಂದಿದವರು ಅವರನ್ನು ಅಟ್ಟಾಡಿಸಿಕೊಂಡು ಬೆನ್ನಟ್ಟುವ, ಶಾಲೆಯಲ್ಲಿ ಉಳಿದ ಸವರ್ಣೀಯ ಮಕ್ಕಳ ಎದುರು ಅವಮಾನಕ್ಕೀಡಾಗುವ, ಉಳಿದ ಮಕ್ಕಳು ಉಂಡುಟ್ಟು ಸುಖವಾಗಿ ಕೊಬ್ಬಿದ ಗೊಂಬೆಗಳಂತೆ ಓಡಾಡುವಾಗ ದಲಿತ ಬಾಲಕ ಒಂದು ಅಂಗಿಗೂ ಪರದಾಡುವ, ಆ ಒಂದು ಅಂಗಿಗೂ ರಕ್ತ ಹತ್ತಿದೆ ಎಂದು ಮೇಷ್ಟ್ರು ಅದನ್ನು ಕಿತ್ತು ಜಗುಲಿಗೆ ಬಿಸಾಕುವ, ಅವನ ತಾಯಿ ಉಟ್ಟ ಸೀರೆಯನ್ನು ಮೈಮೇಲೆ ಉಜ್ಜಿ ಒಣಗಿಸಿ ಉಟ್ಟುಕೊಳ್ಳುವ, ಶಾಲೆಯಲ್ಲಿ ಅವನದೆನ್ನುವ ಪ್ಲೇಟು ಇಲ್ಲದೆ ರದ್ದಿ ಹಾಳೆಗಾಗಿ ತಡಕಾಡಿ, ಅದನ್ನು ತಂದಾಗ ಉಳಿದ ಕರಕಲು ಉಪ್ಪಿಟ್ಟು ಕೆಬರಿ ಹಾಕುವ, ಸತ್ತ ಹಸುವಿನ ಮಾಂಸಕ್ಕಾಗಿ ಪರದಾಡುವ, ಅನುಕಂಪದ ಒಡತಿ ಎರಡು ಬೂಟುಗಳನ್ನು ಹಾಕಿಕೊಳ್ಳಲು ಎತ್ತಿಕೊಟ್ಟರೂ, ಅದರಲ್ಲಿಯ ಒಂದು ಬೂಟನ್ನು ನಾಯಿ ಎತ್ತಿಕೊಂಡು ಹೋಗುವ, ಹೇರ್ ಕಟಿಂಗ್ ಸಲೂನ್‌ನಲ್ಲಿ ದಲಿತ ಬಾಲಕನ ಕೂದಲನ್ನು ಮುಟ್ಟದ, ಶಾಲೆಯ ಸರಸ್ವತಿ ಪೂಜೆಯ ಸಮಯದಲ್ಲಿ ಪೂಜಾ ಪ್ರಸಾದವನ್ನು ದಲಿತ ಹುಡುಗನ ಉಡಿಯಲ್ಲಿ ಹಾಕಲು ಹಿಂಜರಿಯುವ, ಮಾಡಿದ ಚರಂಡಿ ಕೆಲಸಕ್ಕೆ ಕೂಲಿಯನ್ನು ಕೊಡದೇ ತಿಂಡಿಕೊಟ್ಟಂತೆ ಮಾಡಿ ಹೊತ್ತು ಹಾಕುವ, ತಿಪ್ಪೆಯ ಕೆಲಸಕ್ಕೆ ಜುಜುಬಿ ಕಾಸುಕೊಟ್ಟು ಕಾಸಿಗೂ ಮಿಗಿಲಾದ ದೊಡ್ಡ ದೊಡ್ಡ ಮಾತುಗಳನ್ನು ಆಡುವ, ಶಾಲೆಯ ನಾಟಕದಲ್ಲಿ ಸತ್ತ ಪಾತ್ರವನ್ನೂ ಮಾಡಲು ಬಿಡದ, ಸತ್ತ ಪಾತ್ರದಲ್ಲಿಯ ದಲಿತ ಬಾಲಕನ ತಲೆಯನ್ನು ತನ್ನ ತೊಡೆಯ ಮೇಲೆ ಹಾಕಿಕೊಳ್ಳಲು ನಿರಾಕರಿಸುವ, ಸತ್ತ ಹಸುವಿನ ಚರ್ಮ ತಂದಾಗ ಕೊಡಬೇಕಾದ ಜುಜುಬಿ ಹಣವನ್ನೂ ನಿರಾಕರಿಸುವ- ಇಂಥ ಹಲವಾರು ಸನ್ನಿವೇಶಗಳು ದಲಿತ ಬದುಕಿನ ಹಾಗೂ ಅದನ್ನು ಶೋಷಣೆಗೀಡುಮಾಡಿದ ಸವರ್ಣೀಯ ಬದುಕಿನ ಹಲವಾರು ವಾಸ್ತವಿಕ ಮಜಲುಗಳನ್ನು ಇನ್ನಿಲ್ಲದಂತೆ ದೃಶ್ಯಮಾಧ್ಯಮದಲ್ಲಿ ಅನಾವರಣಗೊಳಿಸಲಾಗಿದೆ.

ವಿಶ್ವದ ಮಹಾನ್ ಎನ್ನುವ ಅನೇಕ ಚಿತ್ರಗಳಲ್ಲಿ ಅಥವಾ ಪ್ರತಿಷ್ಠಿತ ಆಸ್ಕರ್ ವಿಜೇತ ಚಿತ್ರಗಳಲ್ಲಿ, ಆದರ ಹುಟ್ಟಿಸುವ, ಅಚ್ಚರಿಗೊಳಿಸುವ, ಮನುಷ್ಯ ಕಲ್ಪನೆಯನ್ನೂ ಮೀರಿದ, ಅತ್ಯದ್ಭುತವೆನ್ನುವ ತಾಂತ್ರಿಕ ಹಾಗೂ ವೈಜ್ಞಾನಿಕ ಆವಿಷ್ಕಾರ ಹೊಂದಿದ ದೃಶ್ಯಗಳನ್ನು ನೋಡುತ್ತೇವೆ. ಆದರೆ ಆಯಾ ಚಲನಚಿತ್ರಗಳ ಕಥಾ ಸಂದರ್ಭದಲ್ಲಿ ಅವು ಅರ್ಥಗಳನ್ನು ಪುಷ್ಟೀಕರಿಸುವ ರೂಪಕಗಳಾಗಿ ಪರಿವರ್ತನೆಯಾಗುವುದು ವಿರಳ. ಆಯಾ ಚಿತ್ರದ ಕಥಾ ದೃಶ್ಯಕ್ಕನುಗುಣವಾಗಿ ಒಂದು ಪೂರ್ತಿ ಸನ್ನಿವೇಶ ಅಥವಾ ಒಂದು ಘಟನೆ ಕಾವ್ಯದಂತೆ ರೂಪಕವಾಗಿ ಅರಳುವುದು ಅತಿ ವಿರಳ. ಆ ದಿಶೆಯಲ್ಲಿ ‘ಕರಿಯ ಕಣ್‌ಬಿಟ್ಟ’ ಚಿತ್ರ ರೂಪಕಗಳ ಆಗರವಾಗಿ ಪರಿವರ್ತಿತವಾಗಿದೆ. ಒಂದು ಸನ್ನಿವೇಶ ಸಣ್ಣ ಸಣ್ಣ ವಿವರಗಳನ್ನೂ ಕಟ್ಟಿಕೊಂಡು, ತನ್ನ ಎಲ್ಲ ಸಾದೃಶ್ಯ ಅಂಗಗಳನ್ನು ಸೆಳೆದುಕೊಂಡು, ಒಂದು ಪುಟಿಯುವ ಶಕ್ತಿಯಾಗಿ ರೂಪಗೊಂಡು, ಉಂಟುಮಾಡುವ ಒಟ್ಟು ಪರಿಣಾಮ ಅದ್ಭುತವಾದಂತಹದು.

ನಮ್ಮ ಕನ್ನಡ ಚಲನಚಿತ್ರಗಳು ಯೂರೋಪ್, ಇರಾನ್, ಜಪಾನಿನ ಅಥವಾ ಜಗತ್ತಿನ ಯಾವುದೇ ಚಲನಚಿತ್ರಗಳಿಗಿಂತ ಕಡಿಮೆ ಅಲ್ಲ ಎನ್ನುವುದನ್ನು ಕವಿತಾ ಲಂಕೇಶ್ ಸಿದ್ಧಪಡಿಸಿ ತೋರಿಸಿದ್ದಾರೆ. ಕರಿಯ ಬಸ್‌ನಲ್ಲಿ ಸತ್ತ ದನದ ಚರ್ಮವನ್ನು ಕಟ್ಟಿದ ಚೀಲದಲ್ಲಿ ಸಾಗಿಸುವಾಗ, ಬಸ್ಸಿನೊಳಗಡೆಯ ಜನ ಆ ವಾಸನೆಯ ಬಗ್ಗೆ ತಕರಾರು ತೆಗೆದು ಅವನನ್ನು ಹೊರಗೆ ತಳ್ಳಬೇಕೆಂದು ಒತ್ತಾಯಿಸಿದಾಗ, ಚೀಲಸಮೇತ ಅವನನ್ನು ಹೊರಗೆ ತಳ್ಳಿದಾಗ, ಒಬ್ಬ ಹೆಣ್ಣುಮಗಳು ಹೀಗೆ ಅರ್ಧದಾರಿಯಲ್ಲಿ ಆ ಮಗುವನ್ನು ಎಸೆದು ಹೋದರೆ ಹೇಗೆ ಎಂದು ಕೇಳಿದಾಗ, ಅವನನ್ನು ಬಸ್ಸಿನ ಟಾಪ್‌ಮೇಲೆ ಕೂಡ್ರಲು ಹೇಳಿ, ಬಸ್ಸು ಮುಂದೆ ಸಾಗುತ್ತದೆ. ಬಸ್ಸಿನಿಂದ ಹೊರಕ್ಕೆ ದಬ್ಬಿಸಿಕೊಂಡ ಕರಿಯ ಬಸ್ಸಿನ ಟಾಪ್ ಮೇಲೆ ಕೂತುಕೊಳ್ಳುತ್ತಾನೆ. ಕರಿಯನಿಗೆ ಅಲ್ಲಿಯ ಸ್ವಚ್ಛಂದ ಸ್ಥಿತಿ ಹಾಗೂ ಸ್ವಾತಂತ್ರ್ಯ ಅದ್ಭುತವಾದ ಸಂತೋಷ ತರುವುದಲ್ಲದೆ ಅವನು ಅತ್ತ ಇತ್ತ ಕೈಬೀಸುವುದು, ಖುಷಿ ವ್ಯಕ್ತಮಾಡುವುದು, ಲೌಕಿಕ ಸಾಗರದಲ್ಲಿ ತೇಲಿದಂತೆ, ಅದರ ತೆರೆಗಳು ಅವನಿಗೆ ಅಪ್ಪಳಿಸುತ್ತಿದ್ದಂತೆ ವರ್ತಿಸುವುದು, ಅದ್ಭುತ ರೂಪಕವಾಗಿ ಹೊರಹೊಮ್ಮಿದೆ.

ಕಲೆ ತನ್ನ ಸೀಮಿತ ಗಡಿಗಳನ್ನು ಮೀರಿ ಮಾನವೀಯ ಕಂಪನಗಳಿಗೆ ಹಾದಿಮಾಡಿ ಕೊಡುತ್ತದೆ. ಕೈಯಲ್ಲಿ ದುಡ್ಡಿಲ್ಲದ ಕರಿಯ ಬೊಂಬಾಯಿ ಮಿಠಾಯಿಯಲ್ಲಿ ವಾಚು ಮಾಡಿಕೊಡಬೇಕೆಂದು ಕೇಳಿಕೊಳ್ಳುವುದು, ಪೋಲೀಸನ ಕಿರುಕುಳದ ಮಾತಿಗೆ ಸ್ನೇಹಿತನ ಜೊತೆ ಸೀಮೆಎಣ್ಣೆ ಕುಡಿದು ಸಾಯಲು ಪ್ರಯತ್ನಿಸುವುದು, ಆ ಸಂದರ್ಭದಲ್ಲಿಯ ನೆರಳು ಬೆಳಕಿನ ಆಟ, ಸವರ್ಣೀಯ ಸಹಪಾಠಿ ಸಾವಿತ್ರಿ ಒಡೆದ ಗಾಜಿನ ತುಕಡಿಯಲ್ಲಿ ಶಾಲೆಯ ಗೋಡೆಯ ಮೇಲೆ ಬೆಳಕಿನ ಆಟ ಆಡುವಾಗ ಕರಿಯ ಅದನ್ನು ಹಿಡಿಯಲು ಹೋಗುವ ವ್ಯರ್ಥ ಪ್ರಯತ್ನ, ಗಂಗೆ ಎನ್ನುವ ಹಸು ಸಾಯುತ್ತಿದೆ ಎನ್ನುವ ಸುದ್ದಿ ಕೇಳಿ ಕರಿಯ ಹಾಗೂ ಕರಿಯನ ತಂದೆ ಅಲ್ಲಿಗೆ ದೌಡಾಯಿಸುವುದು ಹಾಗೂ ಅದು ಸಾಯದೇ ಇದ್ದಾಗ ಮನೆಗೆ ಬರುವುದು, ಅವರು ಮನೆಗೆ ಬಂದಾದ ಮೇಲೆ ಅದು ಸತ್ತು ಹೋಗುವುದು, ಇವರಿಗೆ ಮರುದಿನ ಸುದ್ದಿ ಗೊತ್ತಾಗಿ ಅಲ್ಲಿಗೆ ಹೋದಾಗ ಗೋವಿನ ಮಾಂಸವನ್ನು ಉಳಿದ ದಲಿತರು ತೆಗೆದುಕೊಂಡು ಹೋಗಿ, ಇವರಿಗಾಗಿ ಹಸಿವಿನ ಚರ್ಮದ ಕಟ್ಟಿದ ಮೂಟೆ ಬಿಟ್ಟು ಹೋಗಿರುವುದು, ಚಳವಳಿಗಾರನೊಬ್ಬನ ಪ್ರೇರಣೆಯಿಂದ ಹರಿಜನ ಕಾಲನಿ ಎಂದು ಬರೆದ ಬೋರ್ಡನ್ನು ಕಿತ್ತು ಹಾಕುವುದು, ಜೈ ಭೀಮ್ ಡಾ.ಬಾಬಾಸಾಹೇಬ ಅಂಬೇಡ್ಕರ್ ಕಾಲನಿ ಎಂದು ಮರುನಾಮಕರಣ ಮಾಡುವುದು ಹಾಗೂ ಕರಿಯನ ಕನಸಿನಲ್ಲಿ ಆ ಬೋರ್ಡು ಕೂಡ ಮೇಲಕ್ಕೆ ತೇಲಿ ಕೈಗೆ ಸಿಗದಂತೆ ಹಾರುತ್ತಾ ಹೋಗುವುದು ಇವೆಲ್ಲವುಗಳು ಮರ್ಮಭೇದಕ ರೂಪಕಗಳಾಗಿ ಕಾಡಿನ ಹೂಗಳಂತೆ ವಿಕಸಿತಗೊಂಡಿದ್ದನ್ನು ನೋಡಬಹುದು.

ಭಾರತದ ಮುಂಬಯಿ ಕೊಳಗೇರಿಗಳ ಬಗ್ಗೆ ಡ್ಯಾನಿ ಬಾಯಲ್ ನಿರ್ದೇಶನದ ‘ಸ್ಲಂಡಾಗ್ ಮಿಲಿಯೇನರ್’ ಚಿತ್ರ ಆಸ್ಕರ್ ಬಹುಮಾನಗಳಿಸಿದ್ದು, ಜಾಗತಿಕ ಮಟ್ಟದಲ್ಲಿ ಬಹಳಷ್ಟು ಸುದ್ದಿ ಮಾಡಿದ ಚಿತ್ರವಾಗಿದೆ. ‘ಸ್ಲಂಡಾಗ್ ಮಿಲಿಯೇನರ್’ ಚಿತ್ರದಲ್ಲಿ ಬೆಗರ್ ಮಾಫಿಯಾ, ರಿಯಲ್ ಎಸ್ಟೇಟ್ ಮಾಫಿಯಾ, ಗೂಂಡಾಗಿರಿ, ಮನರಂಜನೆ ಹೆಸರಿನ ವೇಶ್ಯಾವಾಟಿಕೆ, ಜೂಜು, ಪೋಲೀಸ್ ವ್ಯವಸ್ಥೆಗಳನ್ನು ಅತಿರಂಜಿತವಾಗಿ ಚಿತ್ರಿಸಿ, ಕೊಳಗೇರಿ ಬದುಕಿಗೆ ಆರೋಪಿಸಿ, ಭಾರತದ ವಾಸ್ತವಿಕ ಲೋಕದ ಅನಾವರಣ ಮಾಡದೇ, ಅಸಂಗತವಾದ ಕನಸಿನ ಬೆನ್ನುಹತ್ತಿ ಕೌನ್ ಬನೇಗಾ ಕರೋಡ್‌ಪತಿ ಆಟದ ಮುಖಾಂತರ ಕಥಾನಾಯಕನನ್ನು ಕರೋಡಪತಿಯಾಗಲು ಪ್ರೇರೇಪಿಸುವುದು, ಆದು ಕೊಳಗೇರಿ

ವಾಸಿಗಳಿಗೆ ಮುಕ್ತಿಯೆಂದು ಬಿಂಬಿಸುವುದು, ಭಾರತ ಒಂದು ದೊಡ್ಡ ಹೊಳಗೇರಿ ಎಂದು ಚಿತ್ರಿಸಿರುವುದು, ಹೊಳಗೇರಿ ನಿವಾಸಿಗಳ ಬದುಕನ್ನು ವಾಸ್ತವಿಕ ನೆಲೆಯಲ್ಲಿ, ಮಾನವೀಯ ಕಂಪನಗಳಲ್ಲಿ ಚಿತ್ರಿಸದೇ, ಚಿತ್ರ ಮಾಧ್ಯಮದ ಮುಖಾಂತರ ಶೋಷಣೆಗೀಡುಮಾಡಿರುವುದು ಕಲೆಯ ಹೆಸರಿನಲ್ಲಿ ನಡೆದ ಕ್ರೂರ ಅಣಕವಾಗಿದೆ. ಹಾಗೂ ಬದುಕಿನ ಪಲಾಯನವಾದವಾಗಿದೆ. ಕವಿತಾ ಲಂಕೇಶ್‌ರವರ 'ಕರಿಯ ಕಣ್‌ಬಿಟ್' ಚಿತ್ರ ಎಲ್ಲಿಯೂ ಅಬ್ಬರಕ್ಕೆ ಎಡೆಮಾಡಿಕೊಡದೇ, ಸಮಸ್ಯೆಯ ವ್ಯಾಪಾರೀಕರಣದ ಆಸೆಯ ಬಲೆಗೆ ಬೀಳದೇ, ಶುದ್ಧ ಕಲಾಕೃತಿಯಂತೆ, ಸ್ವಲ್ಪ ಯಾಮಾರಿದರೆ ಡಾಕ್ಯುಮೆಂಟರಿಯ ಪ್ರಪಾತಕ್ಕೆ ಬೀಳುವ ಅಪಾಯವನ್ನು ತಪ್ಪಿಸಿಕೊಂಡು, ನೋಡುಗನ ಕುತೂಹಲವನ್ನು ಹೆಜ್ಜೆ ಹೆಜ್ಜೆಗೂ ಕಾಯ್ದುಕೊಳ್ಳುತ್ತ ಒಂದು ಭೀಕರವಾದ ಸಾಮಾಜಿಕ ಸಮಸ್ಯೆಯನ್ನು ಸಾಹಿತ್ಯ ಕೃತಿಯಂತೆ ಗಂಭೀರವಾಗಿ ಅನಾವರಣಗೊಳಿಸುತ್ತ ವೀಕ್ಷಕನ ಮನಸ್ಸನ್ನು ಕಲಕುವ ಹಾಗೂ ಅವನ ಮನಃಪರಿವರ್ತನೆಗೆ ಪ್ರೇರೇಪಿಸುವ ಅಗಾಧ ಶಕ್ತಿಯಾಗಿ ಹೊರಹೊಮ್ಮಿ ಬಂದಿದೆ. ಇದು ಆಫ್ ಬೀಟ್ ಹಾಗೂ ಕಮರ್ಶಿಯಲ್ ದೃಷ್ಟಿಕೋನಗಳನ್ನು ದಾಟಿ ಹೊರಬಂದಿರುವ ಹೊಸ ಚೆಲುವು.

ಸರಕಾರಗಳು ಕೈಗೊಳ್ಳುವ ಯೋಜನೆಗಳ ಜೊತೆ ಜೊತೆಗೆ, ಸವರ್ಣೀಯರು ತಮ್ಮ ವ್ಯಕ್ತಿಗತ ನೆಲೆಯಲ್ಲಿ ದಲಿತರನ್ನು ನೋಡುವ ದೃಷ್ಟಿಕೋನ ಬದಲಾಯಿಸಿಕೊಳ್ಳದೇ ಹೋದಲ್ಲಿ ದಲಿತ ಸಮಸ್ಯೆಗೆ ಪೂರ್ಣ ಪರಿಹಾರ ಸಿಕ್ಕಲಾರದು. ನಮ್ಮಲ್ಲಿ ಸುಳಿವ ಆತ್ಮವಿದ್ದರೆ ನಾವು ಈ ಚಿತ್ರ ನೋಡಬೇಕು. ಇದು ಆತ್ಮದ ಜೊತೆಗಿನ ಸಂಭಾಷಣೆಯಂತಿದೆ. ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಹೊರಬರುತ್ತೇವೆ. ನಮ್ಮ ಮನಸ್ಸು ಮತ್ತು ಆತ್ಮ ಅಸ್ಪೃಶ್ಯತೆಯನ್ನು ಹೋಗಲಾಡಿಸಿಕೊಂಡು ಸಹಬಾಳ್ವೆಯಲ್ಲಿ ಬದುಕಲು ಪ್ರೇರೇಪಿಸುತ್ತದೆ. ಇದು ಈ ಚಲನಚಿತ್ರದ

ತಮ್ಮ ಎದುರಿನ ಗದ್ದೆಗಳ ನಡುವೆ ನಡೆದ ಬದುಕಿನ ದುರಂತ ಪ್ರಹಸನವನ್ನು ಬಹಿರಂಗಪಡಿಸುತ್ತವೆ. ಕರಿಯ ಬೆಟ್ಟದ ಸಾಲುಗಳ ಎದುರು ಓಡುವ ಪ್ರಾರಂಭದ ದೃಶ್ಯ ನಮ್ಮ ಎದೆಯ ಮೇಲೆಯೇ ಓಡಿದ ಅನುಭವ ಕೊಡುತ್ತದೆ, ಆಶ್ಚರ್ಯ ಹಾಗೂ ಅದ್ಭುತವೆನಿಸುತ್ತದೆ.

ಕಪ್ಪುಶಿಲ್ಪದಲ್ಲಿ ಕಟೆದಂತಿರುವ, ಮುಗ್ಧತೆ ಮತ್ತು ಪಾದರಸದಂತಹ ಚಲನಶೀಲತೆ ಹೊಂದಿದ ಪ್ರದ್ಯುಮ್ನ ಕರಿಯನ ಪಾತ್ರದಲ್ಲಿ ಅದ್ಭುತ ಅಭಿನಯ ನೀಡಿದ್ದಾನೆ. ಗಾಳಿ, ಬೆಳಕು, ನೀರಿನಂಥ ಸ್ವಾಭಾವಿಕ ಹಾಗೂ ಸ್ವಭಾವ ಸಿದ್ಧ ನಟನಾ ಸಾಮರ್ಥ್ಯ ಹೊಂದಿದ ರಂಗಭೂಮಿ ಹಿನ್ನೆಲೆಯಿಂದ ಬಂದ ನಿರ್ಮಲಾ, ಕರಿಯನ ತಾಯಿಯ ಪಾತ್ರಕ್ಕೆ ವಿಶಿಷ್ಟವಾದ ಶಕ್ತಿಯನ್ನು ಧಾರೆ ಎರೆದಿದ್ದಾರೆ. ಅನಿಲ ನೀನಾಸಂ ಕರಿಯನ ತಂದೆಯ ಪಾತ್ರದಲ್ಲಿ ಪಾತ್ರದ ಇತಿಮಿತಿಗನುಗುಣವಾಗಿ ಪ್ರಬುದ್ಧ ಅಭಿನಯ ನೀಡಿದ್ದಾರೆ, ಮೇಷ್ಟ್ರ ಪಾತ್ರದಲ್ಲಿ ಮಂಡ್ಯದ ರಮೇಶ ಅತ್ಯಂತ ಸಂಯಮದ ಅಭಿನಯ ನೀಡಿದ್ದಾರೆ. ನಮ್ಮ ಕಮರ್ಷಿಯಲ್ ಚಲನಚಿತ್ರಗಳ ವರ್ತಮಾನದ ಜನಪ್ರಿಯ ನಾಯಕರುಗಳಾದ ದುನಿಯಾ ವಿಜಿ, ಯೋಗೀಶ್, ಶ್ರೀನಗರ ಕಿಟ್ಟಿ, ಅನು ಪ್ರಭಾಕರ್ ಇವರುಗಳು ಈ ಚಿತ್ರದಲ್ಲಿ ಕಾಣಿಸಿಕೊಂಡು ಚಿತ್ರದ ಆಂತರಿಕ ಆಶಯಗಳಿಗೆ ತಮ್ಮದೇ ಆದ ಸದಾಶಯಗಳನ್ನು ಸಲ್ಲಿಸಿದಂತಾಗಿದೆ.

ದಲಿತರ ಅಸ್ಪೃಶ್ಯತೆಯಂಥ ವಿಷಯವನ್ನು ಎತ್ತಿಕೊಂಡು ಚಲನಚಿತ್ರ ಮಾಡುವುದೇ ಒಂದು ಅಪಾಯಕಾರಿ ಪ್ರಯತ್ನ ಎಂದು ತಿಳಿದಿರುವಾಗ ಹಾಗು ಅದಕ್ಕೆ ಹಣ ಖರ್ಚು ಮಾಡಲು ಯಾರೂ ಮುಂದೆ ಬರದಿರುವಾಗ ಕವಿತಾ ಲಂಕೇಶ್ ಇಂಥ ಸಾಮಾಜಿಕ ವಿಷಯವನ್ನು ಆರಿಸಿಕೊಂಡು ಚಲನಚಿತ್ರ ನಿರ್ಮಿಸಿ ನಿರ್ದೇಶಿಸಿರುವುದೇ ಕನ್ನಡದ ಸಂದರ್ಭದಲ್ಲಿ ಬಹಳ ಮಹತ್ವದ ವಿಷಯವಾಗಿದೆ. ಬಹಳಷ್ಟು ನಿರ್ಮಾಪಕರಿಗೆ ದಲಿತರ ವಿಷಯಗಳ ಬಗ್ಗೆ ಚಲನಚಿತ್ರ




ಚೆಲುವಿನ ಜೊತೆ ಕಲೆಯ ಅಂತಿಮ ಗೆಲುವೂ ಆಗಿದೆ.

ಈ ಚಲನ ಚಿತ್ರದ ಕಥೆ ಸುಬ್ಬು ಹೊಲೆಯಾರ್‌ರವರ 'ದನ ಕಾಯದವನು' ಎನ್ನುವ ಸಣ್ಣಕಥೆಯ ಮೇಲೆ ಆಧಾರವಾಗಿದೆ. ಸುಬ್ಬು ಹೊಲೆಯಾರ್ ದಲಿತ ಬದುಕನ್ನು ಅನುಭವಿಸಿ, ಆ ಯಾತನೆಗಳನ್ನು ಸೀಳಿ ಹೊರಬಂದ ದಿಟ್ಟ ಪ್ರತಿಭೆಯಾಗಿದ್ದಾರೆ. ಮೂಲದಲ್ಲಿ ಕವಿಯಾದ ಸುಬ್ಬು ಹೊಲೆಯಾರ್ ರೂಪಕಗಳ ಅಂತರ್ ಸುಳಿಗಳಲ್ಲಿಯೇ ಮೂಲ ಕಥೆಯನ್ನು ಹಾಗೂ ಮುಂದುವರೆದು ಕೆಲವು ವಾಸ್ತವಿಕ ಘಟನೆಗಳನ್ನು ಈ ಚಲನಚಿತ್ರಕ್ಕಾಗಿಯೇ ಹೆಣೆದಿದ್ದಾರೆ. ನಮ್ಮ ಗ್ರಾಮೀಣ ಬದುಕನ್ನು ಅಂಗೈ ಗೆರೆಗಳಂತೆ ಬಲ್ಲ ಬಿ.ಚಂದ್ರೇಗೌಡರು ಈ ಚಿತ್ರಕ್ಕೆ ಸಂಭಾಷಣೆಗಳನ್ನು ಬರೆದಿದ್ದು, ಅವು ದಲಿತ ಒಗರಿನ ದೇಶೀಯ ಬನಿಯೊಂದಿಗೆ ಸಶಕ್ತವಾಗಿ ಮೈದಳೆದು ಬಂದಿವೆ. ಅನಂತ ಅರಸ್ ಅವರ ಛಾಯಾಗ್ರಹಣ ವಿಶಿಷ್ಟವಾದ ಕ್ಲೋಸ್‌ಅಪ್ಸ, ಲಾಂಗ್‌ಶಾಟ್ಸ್, ಇಂಟಿರಿಯರ್, ಎಕ್ಸ್‌ಟಿರಿಯರ್‌ಗಳಿಂದ ಕಥೆಯ ಅಂತರಂಗದ ಶುದ್ಧ ಶ್ರುತಿಯನ್ನು ಹಿಡಿಯುವಲ್ಲಿ ಯಶಸ್ವಿಯಾಗಿದೆ. ಛಾಯಾಗ್ರಹಣ ಕಥೆಯ ಒಳಭಾಗದಿಂದ ಬಾಹ್ಯ ಭೂಪ್ರದೇಶಕ್ಕೆ ಪಲ್ಲಟಗೊಳ್ಳುವಾಗ, ಅಂತಹ ಕ್ರಿಯೆಗಳಲ್ಲಿ ಪ್ರೇಕ್ಷಕನಿಗೆ ಹೊಸ ಗಾಳಿ ದೊರೆಯುವಂತೆ ಹಾಗೂ ಚಿತ್ರದ ವಿಚಾರಗಳು ಅರಳುಗಟ್ಟುವಂತೆ, ಮನೋ ವೈಜ್ಞಾನಿಕ ನೆಲೆಯಲ್ಲಿ ಕೆಲಸ ಮಾಡಿದೆ. ಜೊ.ನಿ.ಹರ್ಷರವರ ಸಂಕಲನ, ಕಥೆಯ ಆಶಯಗಳನ್ನು ಹುರಿಗೊಳಿಸಿ, ನಿಖರವಾಗಿ ಕ್ರೋಢೀಕರಿಸಿದೆ. ಐಸಾಕ್ ಥಾಮಸ್ ಕೋಟುಕಪಲ್ಲಿಯವರ ಸಂಗೀತ ಯಾವ ಅಬ್ಬರವಿಲ್ಲದೇ ಕಥೆಯ ಏರಿಳಿತಕ್ಕೆ ಪೂರಕವಾಗಿ ಕಥೆಯ ಅವಿಭಾಜ್ಯ ಅಂಗವಾಗಿ ವರ್ತಿಸಿದ್ದು ಚಲನಚಿತ್ರದ ಆಂತರಿಕ ಕಾಂತಿಯನ್ನು ಹೆಚ್ಚಿಸಿದೆ.

ಕನಕಪುರದ ಬಳಿಯ ಬೆಟ್ಟದ ಸಾಲುಗಳು ಈ ಚಿತ್ರದಲ್ಲಿ ಯಾವ ರೀತಿ ಮೂಡಿಬಂದಿವೆ ಎಂದರೆ, ಇವು ನಮ್ಮ ಬೆಟ್ಟಗಳೇ ಎನ್ನುವಷ್ಟು ಅಚ್ಚರಿ ಹುಟ್ಟಿಸುತ್ತವೆ. ಸಾಂದ್ರವಾಗಿ ಹಾಗೂ ಕಥೆಯ ಅವಿಭಾಜ್ಯ ಅಂಗವಾಗಿ,

ತೆಗೆಯುವುದು ಹಾವು ಮುಟ್ಟಿದ ಅನುಭವ ಕೊಡುತ್ತದೆ. ಸ್ವಾತಂತ್ರ್ಯ ಸಿಕ್ಕು ಆರುವರೆ ದಶಕಗಳು ಕಳೆದರೂ, ಸರಕಾರಗಳು ಬಂದು, ಸರಕಾರಗಳು ಹೋದರೂ ದಲಿತ ಬದುಕಿನ ಆಂತರಿಕ ಸನ್ನಿವೇಶ ಬಹಳಷ್ಟು ಬದಲಾಗಿಲ್ಲ, ಮುಳುಗುವವನಿಗೆ ಹಾಳೆಯ ದೋಣಿಗಳನ್ನು (Paper Boats) ಕಳುಹಿಸಿದಂತೆ ವೋಟ್ ಬ್ಯಾಂಕ್ ಸರಕಾರಗಳು ಸಣ್ಣ ಸಣ್ಣ ಅನುಕೂಲಗಳ ಭ್ರಮೆಗಳನ್ನು ಕಲ್ಪಿಸಿ ಅವರನ್ನು ಉಳಿಸಲೂ ಬಿಡದೆ, ಸಾಯಲೂ ಬಿಡದೆ ದಯನೀಯ ಸ್ಥಿತಿಗೆ ತಳ್ಳಿವೆ. ಗ್ರಾಮೀಣ ದಲಿತ ಬದುಕು, ಅದು ನಿಂತಲ್ಲಿಯೇ ನಿಂತಿದೆ. ಅದರ ಇತಿಹಾಸ ಕಣ್ಣು ಕಳೆದುಕೊಂಡ ಕುರುಡನಂತಾಗಿದೆ. ಅದು ಹೆಪ್ಪುಗಟ್ಟಿದೆ. ನಿಂತ ನೀರಿನಂತೆ ಕೊಳೆಯುತ್ತಿದೆ. ಪರಿಸ್ಥಿತಿ ಬದಲಾಗಿದೆ ಎಂದು ತಿಳಿದವರು ಮಾಯಾಲೋಕದಲ್ಲಿದ್ದಾರೆ. ಈ ದಿಶೆಯಲ್ಲಿ ಕವಿತಾ ಲಂಕೇಶ್ ನಿರ್ಮಾಣದ ಹಾಗೂ ನಿರ್ದೇಶನದ ಈ ಚಲನಚಿತ್ರ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಒಂದು ಮಹತ್ವದ ಸಾಹಸ ಹಾಗೂ ಲಂಕೇಶ್ Legacyಯ ಮುಂದುವರೆದ ಅಧ್ಯಾಯವೆಂದೇ ತಿಳಿಯಬಹುದು.

'ಕರಿಯ ಕಣ್‌ಬಿಟ್ಟ' ಚಲನಚಿತ್ರ ತನ್ನ ಆಂತರಿಕ ಸಂಚಲನಗಳಿಂದ ಒಂದು ಪರಿಪೂರ್ಣ ಕಲಾಕೃತಿಯಾಗಿ ಹೊರಹೊಮ್ಮಿ ಬಂದಿದೆ. ಈ ಚಿತ್ರ ದಾಸ್ತೊವಸ್ಕಿಯ ಸಾಹಿತ್ಯ ಓದಿದ, ವ್ಯಾನಗಾಗ್‌ನ ವರ್ಣಚಿತ್ರ ನೋಡಿದ ಸಂತೋಷ ಕೊಡುತ್ತದೆ. ಇದು ದಲಿತ ಬದುಕಿನ ಧ್ಯಾನದಂತೆ ಕಂಡು ವೀಕ್ಷಕನಿಗೆ ಹೊಸ ಅನುಭವ ಕೊಡುತ್ತದೆ ಹಾಗೂ ಸವರ್ಣೀಯರ ಆತ್ಮ ಪರಿವರ್ತನೆಗೆ ಪ್ರೇರೇಪಿಸುತ್ತದೆ. ಗಾಂಧೀಜಿ ಅಥವಾ ಪಿ.ಲಂಕೇಶ್ ಈ ಚಿತ್ರವನ್ನು ನೋಡಿದ್ದರೆ ಎಷ್ಟು ಸಂತೋಷಪಡುತ್ತಿದ್ದರು ಎನ್ನುವುದನ್ನು, ಅವರ ಆಶೆಗಳ ಹಿನ್ನೆಲೆಯಲ್ಲಿ ಹಾಗೂ ಇಂದಿನ ನಿರಾಶೆಯ ಸಾಮಾಜಿಕ ಪರಿಸರದಲ್ಲಿ ನಾನು ಸ್ಪಷ್ಟವಾಗಿ ಕಲ್ಪಿಸಿಕೊಳ್ಳಬಲ್ಲೆ!



● ಎಸ್.ಎಫ್.ಯೋಗಪ್ಪನವರ್



FIFA WORLD CUP Brasil

ಬುದ್ಧಿವಂತರ ಆಟ ಕ್ರಿಕೆಟ್ಟೋ? ಫುಟ್ಬಾಲೋ?

ಗೌರಿ ಲಂಕೇಶರು ಇತ್ತೀಚೆಗೆ ತಮ್ಮ 'ಕಂಡಹಾಗೆ' ಅಂಕಣದಲ್ಲಿ ಒಂದು ವಿಚಾರವನ್ನು ಬರೆದಿದ್ದರು. ಅದೇನೆಂದರೆ ಕ್ರಿಕೆಟ್‌ನ ದೇವರು ಎಂದು ಪ್ರಸಿದ್ಧಿ ಪಡೆದ ಸಚಿನ್ ತೆಂಡೂಲ್ಕರ್ ಅವರ ದೇಹದಾರ್ಢ್ಯವನ್ನು ಓರ್ವ ಸಾಮಾನ್ಯ ಫುಟ್‌ಬಾಲ್ ಆಟಗಾರನ ದೇಹದಾರ್ಢ್ಯಕ್ಕೆ ಹೋಲಿಸಿ ನೋಡಿದರೆ ಈ ಎರಡೂ ಆಟಗಳ ನಡುವಿನ ಭಿನ್ನತೆ ಅರ್ಥವಾಗುತ್ತದೆ ಎಂದು. ಇದು ನಿಜಕ್ಕೂ ನಿಜವೆ. ಫುಟ್‌ಬಾಲ್ ಆಟವು ದೇಹದಾರ್ಢ್ಯವನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಈ ಕಾರಣಕ್ಕಾಗಿಯೇ ಕ್ರಿಕೆಟ್ ಆಟಗಾರರು ಕೂಡ ತಮ್ಮ ಪ್ರ್ಯಾಕ್ಟೀಸ್ ಸೆಷನ್‌ನಲ್ಲಿ ಫುಟ್‌ಬಾಲ್ ಆಡುತ್ತಾರೆ.

ಭಾರತದ ನಾಯಕ ಹಾಗೂ ವಿಕೆಟ್ ಕೀಪರ್ ಎಂ.ಎಸ್.ಧೋನಿ ಕೂಡ ಫುಟ್‌ಬಾಲ್ ಆಟಗಾರರೇ. ಫುಟ್‌ಬಾಲ್‌ನಲ್ಲಿ ಗೋಲ್ ಕೀಪರ್ ಆಗಿದ್ದ ಅವರು ಕ್ಲಬ್ ಮಟ್ಟದ ಫುಟ್‌ಬಾಲ್ ಪಂದ್ಯಗಳಲ್ಲಿ ಆಡಿದ್ದರು. ಸರ್ ವಿವಿಯನ್ ರಿಚರ್ಡ್ಸ್ ಅವರು ವರ್ಲ್ಡ್‌ಕಪ್ ಫುಟ್‌ಬಾಲ್ ಹಾಗೂ ವರ್ಲ್ಡ್‌ಕಪ್ ಕ್ರಿಕೆಟ್‌ನಲ್ಲಿ ಆಡಿರುವ ಏಕೈಕ ಆಟಗಾರನೆನಿಸಿದ್ದಾರೆ. 1974ರ ಫುಟ್‌ಬಾಲ್ ವರ್ಲ್ಡ್‌ಕಪ್‌ನ ಅರ್ಹತಾ ಸುತ್ತಿನಲ್ಲಿ ಆ್ಯಂಟಿಗುವಾ ತಂಡವನ್ನು ಪ್ರತಿನಿಧಿಸಿದ್ದ ಅವರು 1983ರ ಕ್ರಿಕೆಟ್ ವರ್ಲ್ಡ್‌ಕಪ್‌ನಲ್ಲಿ ವೆಸ್ಟ್ ಇಂಡೀಸ್ ಪರ ಆಡಿದ್ದರು.

ಬ್ರೆಜಿಲ್‌ನ ಗಲ್ಲಿಗಲ್ಲಿಗಳಲ್ಲಿ ಫುಟ್‌ಬಾಲ್ ಆಡಲಾಗುತ್ತಿದ್ದರೆ ಭಾರತದ ಗಲ್ಲಿಗಲ್ಲಿಗಳಲ್ಲಿ ಕ್ರಿಕೆಟ್ ಮನೆಮಾತಾಗಿದೆ. ಫುಟ್‌ಬಾಲ್ ಬುದ್ಧಿವಂತರ ಆಟ ಎನ್ನುವುದು ಕೂಡ ನಿಜ. ಏಕೆಂದರೆ ಬಾಲ್ ಒಬ್ಬನ ಹಿಡಿತದಲ್ಲಿದ್ದಾಗ ಅದನ್ನು ತಾವು ಹೇಗೆ ಕಸಿದುಕೊಳ್ಳುವುದು, ಎದುರಾಳಿ ತಂಡದ ಆಟಗಾರನ ಕೈಗೆ ಬಾಲ್ ಸಿಗದಂತೆ ಹೇಗೆ ಯಾವ ಆಟಗಾರನಿಗೆ ಪಾಸ್ ಕೊಡಬೇಕು, ಗೋಲುಪೆಟ್ಟಿಗೆ ಸೇರದಿದ್ದ ಹಾಗೆ ಗೋಲನ್ನು ಹೇಗೆ ತಡೆಯುವುದು, ಎದುರಾಳಿ ತಂಡದ ರಕ್ಷಣಾ ಗೋಡೆಯನ್ನು ಭೇದಿಸಿ ಹೇಗೆ ಒಳನುಗ್ಗುವುದು ಎನ್ನುವ ಈ ಚಾಣಾಕ್ಷತೆಗಳೆಲ್ಲಾ ಫುಟ್ ಬಾಲ್ ಆಟಕ್ಕೆ ಬೇಕು. ಕ್ರಿಕೆಟ್‌ನಲ್ಲಿ ಫೋರ್ ಹೊಡೆಯಲು ಯಾವ ಕಡೆ ಫೀಲ್ಡರ್ ಇಲ್ಲ ಎಂಬುದನ್ನು ನೋಡಿಕೊಂಡು ಬ್ಯಾಟಿಂಗ್ ಮಾಡುವುದಷ್ಟೇ ಬುದ್ಧಿವಂತಿಕೆ. ಆದರೆ ಪ್ರತಿ ಕ್ಷಣವೂ ಪ್ರತಿಯೊಬ್ಬ ಆಟಗಾರನೂ ಅಲರ್ಟ್ ಆಗಿರಬೇಕಾದ ಫುಟ್‌ಬಾಲ್‌ಗೆ ಹೆಚ್ಚಿನ ಬುದ್ಧಿವಂತಿಕೆ ಬೇಕಾಗುತ್ತದೆ.

ಫುಟ್‌ಬಾಲ್‌ನಲ್ಲಿ ನಡೆಯುವ ಒಂದು ಅನ್ಯಾಯವನ್ನು ನಾನು ಗಮನಿಸಿದ್ದೇನೆ. ಅದೆಂದರೆ ಶ್ರಮಪಟ್ಟು ಆಟವಾಡುವ ಆಟಗಾರರಿಗೆ ಸಿಗಬೇಕಾದಷ್ಟು ಮಾನ್ಯತೆ ಮತ್ತು ಪ್ರಸಿದ್ಧಿ ಸಿಗದಿರುವುದು.

ನೇಮರ್ ಡಿ ಸಿಲ್ವಾ ಬ್ರೆಜಿಲ್‌ನ ಒಬ್ಬ ಫುಟ್‌ಬಾಲ್‌ನ ಫಾರ್ವರ್ಡ್ ಆಟಗಾರ. ಅವನ ಕೆಲಸ ಕೇವಲ ಮಿಡ್‌ಫೀಲ್ಡರ್ ಲೂಯಿಜ್ ಗುಸ್ತಾವೋ ನೀಡಿದ ಪಾಸ್ ಅನ್ನು ತೆಗೆದುಕೊಂಡು ಚೆಂಡನ್ನು ಡ್ರಿಬಲ್ ಮಾಡುತ್ತ ಗೋಲ್‌ಪೋಸ್ಟ್ ಕಡೆಗೆ ಬಾಲನ್ನು ಒದ್ದು ಗೋಲನ್ನು ಹೊಡೆಯುವುದು. ಮಾರ್ಸೆಲೋ ಎಂಬ ಡಿಫೆಂಡರ್ ಕಷ್ಟಪಟ್ಟು, ಎದುರಾಳಿ ತಂಡದ ಫಾರ್ವರ್ಡ್ ಆಟಗಾರರಿಂದ ಚೆಂಡನ್ನು ಕಸಿದುಕೊಂಡು ಬರುತ್ತಾನೆ. ಫಾರ್ವರ್ಡ್ ಆಟಗಾರ ನೇಮರ್ ಡಿ ಸಿಲ್ವಾ ಗೋಲ್ ಹೊಡೆದರೆ ಅವನನ್ನು ಎಲ್ಲರೂ ಕೊಂಡಾಡುತ್ತಾರೆ ಆದರೆ ಡಿಫೆಂಡರ್ ಮಾರ್ಸೆಲೋ ಚೆಂಡನ್ನು ಗೋಲು ಪೆಟ್ಟಿಗೆ ಸೇರದಿದ್ದ ಹಾಗೆ ಡಿಫೆಂಡ್ ಮಾಡಿದ್ದು ಮುಖ್ಯವೆಂದು ಬಹಳಷ್ಟು ಜನರಿಗೆ ಅನ್ನಿಸುವುದಿಲ್ಲ.

ಒಬ್ಬ ಗೋಲ್‌ಕೀಪರ್ ಒಂದು ಗೋಲನ್ನು ಬಿಟ್ಟು ಕೊಟ್ಟರೆ ಅವನನ್ನು ಕುರಿತು ಭಾರಿ ಟೀಕೆ ಮಾಡಲಾಗುತ್ತದೆ. ಆದರೆ ಅವನು ಒಂದು ಗೋಲನ್ನು ಉತ್ತಮವಾಗಿ ತಡೆದ ಎಂದರೆ ಅದಕ್ಕೆ ಬೆಲೆಯೇ ಇರುವುದಿಲ್ಲ. ಕ್ರಿಕೆಟ್ ಆಟ ಕೂಡ ಇದಕ್ಕೆ ಹೊರತಾಗಿಲ್ಲ. ಸಚಿನ್ ಒಂದು ಮ್ಯಾಚ್‌ನಲ್ಲಿ 99 ರನ್ ಹೊಡೆದು ಔಟಾದರೆ ಅವನನ್ನು ಹೀನಾಯವಾಗಿ ಬೈಯ್ಯುತ್ತಾರೆ. ಅವನತ್ತ ಕಲ್ಲೆಸೆದು ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಾರೆ. ಆದರೆ ಅದೇ 99 ರನ್ನುಗಳು ಎಷ್ಟು ದೊಡ್ಡ ಮೊತ್ತ ಎಂದು ಯಾರೂ ಯೋಚಿಸುವುದಿಲ್ಲ.

ಹಿಂದೆಲ್ಲಾ ಆಟಗಾರರು ದೇಶದ ಗೌರವ ಹೆಚ್ಚಿಸಲು ಆಡುತ್ತಿದ್ದರೆ ಈಗಿನವರು ಹೆಚ್ಚೆಚ್ಚು ಹಣ ಗಳಿಸಲು ಹಣದ ಹೊಳೆ ಹರಿಸುವ ಕ್ಲಬ್‌ಗಳಿಗಾಗಿ ಆಡುತ್ತಿದ್ದಾರೆ. ಇದು ಮುಂದುವರಿದು ಫಿಕ್ಸಿಂಗ್ ಸೃಷ್ಟಿಯಾಯಿತು. ಫುಟ್‌ಬಾಲ್ ವರ್ಲ್ಡ್‌ಕಪ್‌ನಲ್ಲಿ ಕೂಡ ಫಿಕ್ಸಿಂಗ್ ದೊಡ್ಡ ಸುದ್ದಿ ಮಾಡಿತು. ಈ ಬಾರಿಯ ಕ್ರೊವೆಷಿಯಾ ಹಾಗೂ ಕ್ಯಾಮರೂನ್ ನಡುವಿನ ಪಂದ್ಯ ಫಿಕ್ಸ್ ಆಗಿತ್ತೆಂದು ವರದಿಯಾಗಿತ್ತು. ಒಬ್ಬ ಬುಕ್ಕಿ ಕ್ರೊವೆಷಿಯಾ 4-0 ಗೋಲುಗಳಿಂದ ಗೆಲುವು ಪಡೆಯಲಿದೆ ಹಾಗೂ ಒಬ್ಬ ಕ್ಯಾಮರೂನ್ ಆಟಗಾರ ರೆಡ್ ಕಾರ್ಡ್ ಪಡೆದು ಹೊರಹೋಗುತ್ತಾನೆಂದು ಫೇಸ್‌ಬುಕ್‌ನಲ್ಲಿ ಹಾಕಿಕೊಂಡಿದ್ದ. ಇದು ನಿಜವಾಗಿ ಫಿಕ್ಸಿಂಗ್ ಆಗಿದ್ದು ಸಾಬೀತಾಯಿತು.

ಬಹಳ ಜನ ಬುಕ್ಕಿಗಳು ಆಟಗಾರರಿಗೆ ಹಣದ ಆಮಿಷ ತೋರಿಸಿ ಅವರನ್ನು ಸೆಳೆದುಕೊಂಡು ಬಿಡುತ್ತಾರೆ. ಬಹಳ ಜನ ಆಟಗಾರರು ಫಿಕ್ಸಿಂಗ್ ಮಾಡಲು ಒಪ್ಪಿಕೊಂಡರೆ ಸ್ವಲ್ಪ ಜನ ಮಾತ್ರ ದೇಶಕ್ಕಾಗಿ ಆಡುತ್ತಾರೆ. ಇತ್ತೀಚೆಗೆ ಬುಕ್ಕಿಗಳು ರೆಫರಿಗಳನ್ನು ಸಹ ಫಿಕ್ಸಿಂಗ್ ಮಾಡಿಕೊಳ್ಳುತ್ತಿದ್ದಾರೆ. ಈಗಾಗಲೇ ಕ್ರಿಕೆಟ್‌ನಲ್ಲಿ ಬಹಳ ಸ್ಪಾಟ್ ಫಿಕ್ಸಿಂಗ್ ಹಾಗೂ ಮ್ಯಾಚ್ ಫಿಕ್ಸಿಂಗ್ ಆಗಿವೆ.

ಈಗ ಫುಟ್‌ಬಾಲ್‌ನಲ್ಲಿ ಬ್ರೆಜಿಲ್, ಅರ್ಜೆಂಟಿನಾ, ಸ್ಪೇನ್, ಜರ್ಮನಿ ತರಹದ ಉತ್ತಮ ತಂಡಗಳಿಗಿಂತ ರಿಯಲ್ ಮ್ಯಾಡ್ರಿಡ್, ಬಾರ್ಸಿಲೋನಾ, ಅಟ್ಲೆಟಿಕೋ ಮ್ಯಾಡ್ರಿಡ್, ಮ್ಯಾಂಚೆಸ್ಟರ್ ಯುನಿಟೆಡ್ ತರಹದ ಕ್ಲಬ್‌ಗಳು ಪ್ರಸಿದ್ಧಿ ಹೊಂದಿಬಿಟ್ಟಿವೆ. ಈ ಪ್ರಸಿದ್ಧಿಗೆ ಕಾರಣ ಆ ಕ್ಲಬ್‌ಗಳು ಆಟಗಾರರಿಗೆ ಭಾರಿ ಹಣ ಕೊಡುವುದು. ಅದ್ದರಿಂದಲೇ ಕ್ಲಬ್‌ಗಳ ಪರ ಈ ಆಟಗಾರರು ಬಹಳ ಚೆನ್ನಾಗಿ ಆಡುತ್ತಾರೆ. ಕ್ಲಬ್‌ಗಳ ಪರ ಆಡಿದಂತೆ ತಮ್ಮ ದೇಶದ ಪರವಾಗಿ ಇವರೆಲ್ಲಾ ಆಡಿ ತಮ್ಮ ದೇಶಗಳ ಗೌರವ ಹೆಚ್ಚಿಸಬಾರದೇ?



● ಅಂತಃಕರಣ

10 ವರ್ಷ, 5ನೇ ತರಗತಿ

ಲಿಂಗವಂತ ಧರ್ಮದಲ್ಲಿ ಏನುಂಟು ಏನಿಲ್ಲ?

ಲಿಂಗವಂತ ಧರ್ಮದ ಬಹುಪಾಲು ಅನುಯಾಯಿಗಳು ಕಾಲದ ಪ್ರವಾಹಕ್ಕೆ ಸಿಲುಕಿ ತಮ್ಮ ಧರ್ಮದ ಮೂಲಸತ್ತ್ವದಿಂದ ತಮಗರಿಯದಂತೆಯೇ ದೂರ ಸಾಗುತ್ತಿದ್ದಾರೆ. ಬಹುಶಃ ಜಗತ್ತಿನ ವಿವಿಧ ಧರ್ಮಗಳ ಅನುಯಾಯಿಗಳನೇಕರು ಇಂಥ ವಿಷಮಸ್ಥಿತಿಯ ಗೊಂದಲಗಳ ಮಧ್ಯೆ ಮುಂದುವರಿಯುತ್ತಿದ್ದಾರೆ. ವೈಜ್ಞಾನಿಕ ಮನೋಭಾವದಿಂದ ಕೂಡಿದ ಕಾಯಕಜೀವಿ ಶರಣರ ಬದುಕಿನ ಕ್ರಮದ ಮೂಲಕ ಜೀವನವಿಧಾನವಾದಂಥ ಲಿಂಗವಂತ ಧರ್ಮದ ತಿರುಳನ್ನು ಇಂದು ಪ್ರತಿಯೊಬ್ಬರು ಅರಿತುಕೊಳ್ಳುವುದು ಅವಶ್ಯವಾಗಿದೆ. ಆ ಮೂಲಕ ಹಿಂಸೆ, ಸುಲಿಗೆ ಮತ್ತು ಅಸಮಾನತೆಗಳಿಲ್ಲದ ಶಾಂತಿಯುತವಾದ ಸಮೃದ್ಧ ಬದುಕನ್ನು ಪಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ಲಿಂಗವಂತ ಧರ್ಮಕ್ಕೆ ಸಂಬಂಧಿಸಿದ ಕೆಲವೊಂದು ಮುಖ್ಯ ಪ್ರಶ್ನೆಗಳಿಗೆ ಉತ್ತರಿಸುವುದು ಅವಶ್ಯವಾಗಿದೆ.



** ಲಿಂಗವಂತ ಧರ್ಮದ ಮೂಲಾಧಾರ ಯಾವುದು?*

ಕಾಯಕವೇ ಲಿಂಗವಂತ ಧರ್ಮದ ಮೂಲಾಧಾರವಾಗಿದೆ. ಇಡೀ ನಿಸರ್ಗ ಕಾಯಕದ ಉತ್ಪಾದನೆಯಾಗಿದೆ. ಅಂತೆಯೆ "ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು" ಎಂದು ಹೇಳುವ ಮೂಲಕ ಆಯ್ದಕ್ಕಿ ಮಾರಯ್ಯನವರು 'ಕಾಯಕವೇ ಕೈಲಾಸ' ಎಂದು ತಿಳಿಸಿದ್ದಾರೆ.

'ಲೋಕದ ಚೇಷ್ಟೆಗೆ ರವಿ ಬೀಜ' ಎಂದು ಅಕ್ಕಮಹಾದೇವಿ ಹೇಳುತ್ತಾಳೆ. ಸೃಷ್ಟಿ ರೂಪುಗೊಳ್ಳುವ ಕ್ರಿಯೆಯಲ್ಲಿ ಸೂರ್ಯನ ಪಾತ್ರವನ್ನು ಅಕ್ಕ ಸೂಚಿಸುತ್ತಾಳೆ. ಸೂರ್ಯನದು ಬೆಳಕು ಕೊಡುವ ಕಾಯಕ. ಚಂದ್ರನದು ಬೆಳದಿಂಗಳು ಕೊಡುವ ಕಾಯಕ. ವಾಯುವಿನದು ಸೃಷ್ಟಿಯನ್ನು ಜೀವಂತವಾಗಿಡುವ ಕಾಯಕ, ಭೂಮಿ ಮತ್ತು ಜಲಕ್ಕೆ ನಮ್ಮೆಲ್ಲರನ್ನು ಸಲಹುವ ಕಾಯಕ. ಮೋಡಗಳಿಗೆ ಮಳೆ ಸುರಿಸುವ ಕಾಯಕ, ಲೋಕಕ್ಕೆ ನೀರುಣಿಸುತ್ತ ಸಮುದ್ರ ಸೇರಿ ಉಪ್ಪಿನಂಶವನ್ನು ಸಮತೋಲನದಲ್ಲಿ ಇಡುವ ಮೂಲಕ ಜಲಚರಗಳನ್ನು ರಕ್ಷಿಸುವ ಕಾಯಕ ನದಿಯದು. ಹೀಗೆ ಕಾಯಕವು ನಿಸರ್ಗಧರ್ಮವಾಗಿದೆ. ಈ ಪ್ರಕಾರ ಲಿಂಗವಂತ ಧರ್ಮವು ನಿಸರ್ಗಧರ್ಮವಾಗಿರುವುದರಿಂದ ಕಾಯಕವು ಅದರ ಮೂಲಾಧಾರವಾಗಿದೆ.

ಬಸವಧರ್ಮ ಎಂಬ ಲಿಂಗವಂತ ಧರ್ಮವು ಕಾಯಕ ಪ್ರಧಾನ ಧರ್ಮವಾಗಿರುವುದರಿಂದ ಕಾಯಕ ಜೀವಿಗಳೇ ಈ ಧರ್ಮದ ಮೂಲಪುರುಷರು. ಬಸವಣ್ಣನವರ ಅನುಭವದ ಪಾತ್ರೆಯನ್ನು ತುಂಬಿಸಿದವರೇ ಕಾಯಕ ಜೀವಿಗಳು. "ಭಕ್ತಿ ಇಲ್ಲದ ಬಡವ ನಾನಯ್ಯಾ, ಕಕ್ಕಯ್ಯನ ಮನೆಯಲ್ಲೂ ಬೇಡಿದೆ; ಚೆನ್ನಯ್ಯನ ಮನೆಯಲ್ಲೂ ಬೇಡಿದೆ" ಎಂದು ಬಸವಣ್ಣನವರು ಮನದುಂಬಿ ಹೇಳಿದ್ದಾರೆ. ಉನ್ನತ ಕುಲ, ಉನ್ನತ ಶಿಕ್ಷಣ, ಉನ್ನತ ವರ್ಗ ಮತ್ತು ಪ್ರಧಾನ ಮಂತ್ರಿಯಂಥ ಉನ್ನತ ಹುದ್ದೆಯನ್ನು ಹೊಂದಿ ಕ್ರಿಯಾಶೀಲರಾಗಿದ್ದ ಬಸವಣ್ಣನವರು ಇವುಗಳನ್ನೆಲ್ಲ ಲೆಕ್ಕಿಸದೆ ಹೀಗೆ ಕೆಳಜಾತೀಕರಣಕ್ಕೆ ಒಳಗಾಗಿ ಬಸವಳಿದ ಜನರ ಕಣ್ಣೀರನ್ನು ಒರೆಸಲು ಮುಂದಾದರು. ಸಕಲ ವೇದ, ಶಾಸ್ತ್ರ ಉಪನಿಷತ್, ಪುರಾಣ ಮತ್ತು ಆಗಮಗಳಲ್ಲಿ ಪಾರಂಗತರಾಗಿದ್ದರೂ ಹೊಸ ಜಗತ್ತಿನ ಸಿದ್ಧಾಂತ ರೂಪಿಸುವಲ್ಲಿ ಕಾಯಕಜೀವಿಗಳ ಅನುಭವವನ್ನೇ ಪ್ರಮಾಣವಾಗಿ ಸ್ವೀಕರಿಸಿದರು.

ಲಕ್ಷಾಂತರ ಜನರ ಅನುಭವದಿಂದ ಒಂದು ನಾಗರಿಕತೆಯ ನಿರ್ಮಾಣವಾಗುವುದು. ಅವರೆಲ್ಲರ ಅನುಭವದ ಸಾರವಾದ ಅನುಭಾವದಿಂದ ಮಾನವಸಂಸ್ಕೃತಿ ಅರಳುವುದು. ಹೀಗೆ ನಿರ್ಮಾಣವಾದ ನಾಗರಿಕತೆಯಲ್ಲಿ ಅರಳಿದ ಸಂಸ್ಕೃತಿಯಲ್ಲಿ ವಿಶ್ವಮಾನವನ ಉದಯವಾಗುವುದು. ನಮ್ಮ ಬಸವಾದಿ ಶರಣರು ಅಂಥ ವಿಶ್ವಮಾನವರು.

ಕಾಯಕ, ಪ್ರಸಾದ ಮತ್ತು ದಾಸೋಹ ವ್ಯವಸ್ಥೆಯನ್ನು ಲಿಂಗವಂತ ಧರ್ಮ ಹೊಂದಿದೆ. ಗುರು, ಲಿಂಗ ಮತ್ತು ಜಂಗಮಕ್ಕೆಲ್ಲ ಕಾಯಕ ಅವಶ್ಯವಾಗಿದೆ. ಲಿಂಗವಂತ ಧರ್ಮದಲ್ಲಿ ಅರಿವೇ ಗುರು. ಅರಿವಿನ ಮೂಲವಾದ ಸಮತಾ ತತ್ವವೇ ಲಿಂಗತತ್ತ್ವ. ಸಕಲ ಜೀವಾತ್ಮರಿಂದ ಕೂಡಿರುವ ಲೋಕವೇ ಜಂಗಮ. ಕಾಯಕದಿಂದ ಪಡೆದುದ್ದನ್ನು ಲಿಂಗಪ್ರಸಾದವೆಂದು ಸ್ವೀಕರಿಸಬೇಕು. ಆ ಪಡೆದುದ್ದನ್ನು ಲಿಂಗದ ವಿರಾಟ್ ಸ್ವರೂಪವಾದ ಸಮಾಜವೆಂಬ ಜಂಗಮಕ್ಕೆ ದಾಸೋಹ ಎಂಬ ಸಾಮಾಜಿಕ ವಿತರಣಾ ವ್ಯವಸ್ಥೆ ಮೂಲಕ ಕೊಟ್ಟು ಅಸಮಾನತೆಯನ್ನು ತೊಡೆದು ಹಾಕಬೇಕು.

ಹೀಗೆ ಕಾಯಕವು ಲಿಂಗವಂತ ಧರ್ಮದ ಮೂಲಾಧಾರವಾಗಿದೆ. 'ಮಾನವನ ಎಲ್ಲ ಇರುವಿಕೆಗೆ ದುಡಿಮೆಯೆ ಮೊಟ್ಟ ಮೊದಲ ಆಧಾರ. ಇದು ಎಷ್ಟರಮಟ್ಟಿಗೆ ನಿಜವೆಂದರೆ ಒಂದರ್ಥದಲ್ಲಿ ದುಡಿಮೆಯೆ ಮನುಷ್ಯನನ್ನು ಸೃಷ್ಟಿಸಿತು' ಎಂದು 19ನೇ ಶತಮಾನದ ಫ್ರೆಡ್ರಿಕ್ ಎಂಗೆಲ್ಸ್ ಅವರು 'ದ ಪಾರ್ಟ್ ಪ್ಲೇಯ್ಡ್ ಬೈ ಲೇಬರ್ ಇನ್ ದ ಟ್ರಾಂಜಿಶನ್ ಫ್ರಾಮ್ ಏಪ್ ಟು ಮ್ಯಾನ್' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ವಾನರ ನರ ಆಗುವಲ್ಲಿ ದುಡಿಮೆಯ ಪಾತ್ರ ಹಿರಿದಾಗಿದೆ. ಆತನ ಅನುಭವ ಮತ್ತು ಅನುಭಾವಕ್ಕೆ ಕೂಡ ದುಡಿಮೆಯೆ ಮೂಲ ಕಾರಣವಾಗಿದೆ ಎಂದು ಎಂಗೆಲ್ಸ್ ವಿವರಿಸಿದ್ದಾರೆ. ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರು 19ನೇ ಶತಮಾನದಲ್ಲಿ ರೂಪಿಸಿದ ಸಮತಾವಾದ ಕೂಡ ದುಡಿಯುವ ವರ್ಗದ ಅನುಭವದ ಮೇಲೆಯೆ ನಿಂತಿದೆ.

** ಲಿಂಗವಂತ ಧರ್ಮದಲ್ಲಿ ಅಧ್ಯಾತ್ಮ ಮತ್ತು ಯೋಗದ ಸ್ಥಾನವೇನು?*

ಶರಣರು ಸಕಾರಾತ್ಮಕವಾಗಿ ಅಧ್ಯಾತ್ಮ ಪದಪ್ರಯೋಗ ಮಾಡುವುದಿಲ್ಲ. ಅವರಿಗೆ ಇಷ್ಟಲಿಂಗಪೂಜೆಯೆ ಶಿವಯೋಗವಾಗಿದೆ. ಶರಣರ ಪ್ರಕಾರ ಯೋಗಗಳಲ್ಲಿ ಶಿವಯೋಗವೇ ಪರಿಪೂರ್ಣವಾದುದು.

"ಮಾಡಿ ಮಾಡಿ ನಿತ್ಯ ಲಿಂಗಾರ್ಚನೆಯ,
ಮಾಡಿ ಮಾಡಿ ನಿತ್ಯ ಜಂಗಮಾರ್ಚನೆಯ,
ಮಾಡಿ ಮಾಡಿ ಎಂದು ವಿಸ್ತಾರವೆಂದು ಮಾಡಿ ಕೂಡಿದವರೆಲ್ಲ ನಿತ್ಯರಾದರು.
ಮಾಡದೆ, ಕೂಡದೆ ಯೋಗವೆಂದು
ಅಧ್ಯಾತ್ಮವ ನುಡಿದು ಶಿವಪೂಜೆಗೆ ದೂರವಾಗಬೇಡ,
ಅಲ್ಲದೆ ಕೆಲವರೊಳಗೆ ಆದಿ ಕಪಿಲಸಿದ್ಧಮಲ್ಲಿಕಾರ್ಜುನನ ಚಿತ್ತಕ್ಕೆ ದೂರವಾಗದೆ



ಶಿವಾರ್ಚನೆಯ ಮಾಡಿದಡೆ ದಿವ್ಯಯೋಗಿಯಪ್ಪೆ"

ಎಂದು ಸಿದ್ಧರಾಮೇಶ್ವರರು ಹೇಳುವ ಮೂಲಕ ಇಷ್ಟಲಿಂಗಯೋಗದ ರಹಸ್ಯವನ್ನು ತಿಳಿಸುತ್ತಾರೆ. ಲಿಂಗವಂತ ಧರ್ಮದಲ್ಲಿ ಎರಡು ಪ್ರಕಾರದ ಶಿವಯೋಗ ವಿಧಾನಗಳಿವೆ. ಮೊದಲನೆಯದು ಆತ್ಮಕಲ್ಯಾಣಕ್ಕಾಗಿ ಇರುವ ಇಷ್ಟಲಿಂಗಯೋಗ. ಎರಡನೆಯದು ಲೋಕಕಲ್ಯಾಣಕ್ಕಾಗಿ ಇರುವ ಜಂಗಮಲಿಂಗಯೋಗ. ಇಷ್ಟಲಿಂಗಯೋಗದಲ್ಲಿ ಶರಣರು ಇಡೀ ವಿಶ್ವವನ್ನು ತಮ್ಮೊಳಗೆ ತುಂಬಿಕೊಳ್ಳುತ್ತಾರೆ. ಇದುವೆ ಲಿಂಗಾರ್ಚನೆ. ತಮ್ಮೊಳಗಿನ ಮಹಾಘನದ ಜೊತೆ ಅವರು ಒಂದಾದಾಗ ಆ ಮಹಾಘನದ ಒಂದಂಶವಾದ ಇಡೀ ವಿಶ್ವ ಅವರೊಳಗೆ ಸಹಜವಾಗಿಯೇ ಒಂದಾಗುವುದು. ವಿಶ್ವದ ಪ್ರತಿಯೊಂದು ಅಂಶದಲ್ಲಿ ತಾವು ತಮ್ಮೊಳಗಿನ ಘನದ ಜೊತೆಗೂಡಿ ಇರುವ ಸತ್ಯದ ಅರಿವಾಗುವುದು. ಆಗ ಅವರಿಗೆ ಎಲ್ಲವೂ ಶಿವಸ್ವರೂಪವಾಗೇ ಕಾಣತೊಡಗುವುದು. ಸಕಲಜೀವಾತ್ಮರಿಗೆ ಲೇಸನೆ ಬಯಸಿ ಕಾರ್ಯೋನ್ಮುಖವಾಗುವುದೇ ಜಂಗಮಯೋಗ. ಇದುವೆ ಜಂಗಮಾರ್ಚನೆ. ಅಂದರೆ ಲೋಕಕಲ್ಯಾಣಕ್ಕಾಗಿ ಕಾಯಕ, ಪ್ರಸಾದ ಮತ್ತು ದಾಸೋಹಭಾವದೊಂದಿಗೆ ಜೀವಿಸುತ್ತ ಸರ್ವಸಮತ್ವದ ವ್ಯವಸ್ಥೆಗಾಗಿ ಬದುಕನ್ನೇ ಮುಡಿಪಿಡುವುದು. ಹೀಗೆ ಆತ್ಮಾನುಸಂಧಾನ ಮತ್ತು ಲೋಕಾನುಸಂಧಾನದೊಂದಿಗೆ ಕ್ರಿಯಾಶೀಲವಾಗಿ ಬದುಕುವವರೇ ದಿವ್ಯಯೋಗಿಗಳು. ಇದುವೆ ಶಿವಾರ್ಚನೆ. ಅಂದರೆ ಒಳಲೋಕ ಮತ್ತು ಹೊರಲೋಕ ಒಂದಾಗಿಸಿ ಸಮತೆಯನ್ನು ಸಾಧಿಸುವುದು.

"ಲಿಂಗಾರ್ಚನಂ ನ ಕರ್ತವ್ಯಂ, ಜಂಗಮಾರ್ಚನಂ ಕರ್ತವ್ಯಂ" ಎಂದು ಬಸವಣ್ಣನವರು ತಿಳಿಸಿದ್ದಾರೆ. ನಮ್ಮ ಆತ್ಮೋದ್ಧಾರ ಕರ್ತವ್ಯವಲ್ಲ, ಅದು ಸ್ವಸಂತೋಷಕ್ಕಾಗಿ ಇರುವಂಥದ್ದು. ಲೋಕೋದ್ಧಾರವೇ ಕರ್ತವ್ಯ. ಅದುವೇ ಜಂಗಮಾರ್ಚನ. "ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ. ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ. ಇನ್ನು ಜಂಗಮವೇ ಲಿಂಗವೆಂದು ನಂಬಿದೆ" ಎಂದು ಹೇಳುವ ಮೂಲಕ ಬಸವಣ್ಣನವರು ಸಕಲಜೀವಾತ್ಮರ ಸಮೂಹವೇ ದೇವರೆಂದು ಸೂಚಿಸುತ್ತಾರೆ. ಇಂಥ ಪ್ರಜ್ಞೆಯನ್ನು ಹೊಂದುವ ಉದ್ದೇಶದಿಂದ ಅಂತರಂಗದ ಅರಿವನ್ನು ಪಡೆಯುವುದಕ್ಕಾಗಿಯೇ ಇಷ್ಟಲಿಂಗ ಪೂಜೆ ಇರುವುದು. ಸಮರತಿ (ಹೆಣ್ಣು ಗಂಡು ಸಮಾನ), ಸಮಕಳೆ (ಕೆಳಜಾತಿ ಮತ್ತು ಮೇಲ್ಜಾತಿ ಸಮಾನ) ಸಮಸುಖ (ಬಡವರು ಮತ್ತು ಶ್ರೀಮಂತರು ಸಮಾನ) ಎಂಬುದನ್ನು ಅರಿಯುವುದೇ ಇಷ್ಟಲಿಂಗ ಪೂಜಾಫಲ ಎಂದು ಬಸವಣ್ಣನವರು ಸಾರಿದ್ದಾರೆ.

ಎಲ್ಲ ಜೀವಗಳ ಮಧ್ಯೆ ಸಮಾನತೆಯನ್ನು ಸಾಧಿಸಬೇಕಿದೆ. "ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆ ಎಂಬುದೇ ಯೋಗ ನೋಡಾ" ಎಂದು ಹಾವಿನಾಳ ಕಲ್ಲಯ್ಯನವರು ಸಮತಾವಾದದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

ಗುಹೆಗಳಲ್ಲಿ, ಅರಣ್ಯಗಳಲ್ಲಿ ಮತ್ತು ಹಿಮಾಲಯದಂಥ ಪರ್ವತಗಳಲ್ಲಿ ಏಕಾಂಗಿಯಾಗಿ ಉಳಿದು ಧ್ಯಾನಿಸುತ್ತ ಅಧ್ಯಾತ್ಮ ಸಾಧನೆ ಮಾಡುವುದನ್ನು ಶರಣರು ಅಲ್ಲಗಳೆಯುತ್ತಾರೆ. ಲಿಂಗವಂತ ಧರ್ಮದಲ್ಲಿ ಇಂಥ ಅಧ್ಯಾತ್ಮದ ಬದಲು ಅನುಭಾವದ ಪರಿಕಲ್ಪನೆ ಇದೆ. ಈ ಅನುಭಾವವನ್ನು ಹಿಮಾಲಯಕ್ಕೆ ಹೋಗಿ ಪಡೆದುಕೊಳ್ಳುವಂಥದ್ದಲ್ಲ, ಕಾಯಕದ ಅನುಭವದ ಮೂಲಕ ಸಾಧಿಸುವಂಥದ್ದು. ಅನೇಕ ಶರಣರು ಅನುಭಾವವನ್ನು ಸೂಚಿಸಲು ತಮ್ಮ ದೈನಂದಿನ ಕಾಯಕದ ಅನುಭವ ಮತ್ತು ಆ ಕಾಯಕಕ್ಕೆ ಬೇಕಾದ ವಸ್ತುಗಳನ್ನೇ ಬಳಸುತ್ತಾರೆ. "ಹದ ಮಣ್ಣಲ್ಲದೆ ಮಡಕೆಯಾಗದು" ಎಂದು ಕುಂಬಾರ ಗುಂಡಯ್ಯನವರ ಪುಣ್ಯಸ್ತ್ರೀ ಕೇತಲದೇವಿ ಹೇಳುತ್ತಾಳೆ. "ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ" ಎಂದು ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ತಿಳಿಸುತ್ತಾಳೆ. ಈ ರೀತಿ ಶರಣರು ಅನುಭವದ ಮೂಲಕ ಅನುಭಾವವನ್ನು ಸಾಧಿಸುತ್ತಾರೆ. 'ಬದುಕು ಹದಗೊಂಡಾಗಲೆ ಭಕ್ತನ ವ್ಯಕ್ತಿತ್ವ ವಿಕಸನಗೊಳ್ಳುತ ಸಾಗುವುದು. ಕೊನೆಯಲ್ಲಿ ಆತ ಐಕ್ಯಸ್ಥಲವನ್ನು ತಲುಪುವನು' ಎಂಬುದನ್ನು ಕೇತಲದೇವಿ ಸೂಚಿಸುತ್ತಾಳೆ. 'ಅದಕ್ಕಾಗಿ ಎಚ್ಚರಿಕೆಯಿಂದ ಬದುಕದಿದ್ದರೆ ಅನಾಹುತವಾಗುವುದು' ಎಂದು ಕಾಳವ್ವೆ ತಿಳಿಸುತ್ತಾಳೆ. ಹೀಗೆ ಅನ್ಯೋಕ್ತಿಗಳ ಮೂಲಕ ಶರಣರು ಅನುಭಾವದ ಮಟ್ಟಕ್ಕೆ ಏರುವುದನ್ನು ತಿಳಿಸುತ್ತಾರೆ. ಶರಣರ ಪ್ರಕಾರ ವಸ್ತುಜಗತ್ತಿನ ಅನುಭವವಿಲ್ಲದೆ ಪರವಸ್ತುವಿನ ಅನುಭಾವ ಆಗದು.

** ಲಿಂಗವಂತ ಧರ್ಮದಲ್ಲಿ ಗುರು-ಶಿಷ್ಯ ಸಂಬಂಧ ಎಂತಹುದು?*

ಈ ಧರ್ಮದ ಪ್ರಕಾರ ಅರಿವನ್ನುಂಟುಮಾಡುವವರೆಲ್ಲ ಗುರುಗಳೇ. ಈ ಧರ್ಮದಲ್ಲಿನ ಗುರು-ಶಿಷ್ಯ ಸಂಬಂಧ ಲೋಕಕ್ಕೇ ಮಾದರಿಯಾಗಿದೆ. "ಅಜಕೋಟಿ ಕಲ್ಪವರುಷದವರೆಲ್ಲರು ಹಿರಿಯರೆ?" ಎಂದು ಚೆನ್ನಬಸವಣ್ಣನವರು ಪ್ರಶ್ನಿಸಿದ್ದಾರೆ. ಅರಿವುಳ್ಳವರೇ ಹಿರಿಯರು ಎಂದು ಸೂಚಿಸಿದ್ದಾರೆ. "ಗುರು ಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನೆ; ಹಿಂದ ಬಿಟ್ಟು ಮುಂದ ಹಿಡಿಯಲೇ ಬೇಕು. ಕೂಡಲಸಂಗಮದೇವ ಕೇಳಯ್ಯಾ ಕಿಚ್ಚಿನೊಳಗೆ ಕೋಲ ಬಯ್ಚಿಟ್ಟಂತಿರಬೇಕು" ಎಂದು ಬಸವಣ್ಣನವರು ಹೇಳಿದ್ದಾರೆ. ಎರಡು ಕೋಲುಗಳನ್ನು ಕಿಚ್ಚಿನಲ್ಲಿ ಇಟ್ಟಾಗ ಅವು ನಿಗಿನಿಗಿಯಾಗಿ ಒಂದೇ ಆಗಿರುತ್ತವೆ. ಜ್ಯೋತಿ ಮುಟ್ಟಿ ಜ್ಯೋತಿಯಾದಾಗ ಎರಡೂ ಒಂದೇ ತೆರನಾದ ಪ್ರಕಾಶವನ್ನೇ ಕೊಡುತ್ತವೆ.

** ಲಿಂಗವಂತ ಧರ್ಮದಲ್ಲಿ ಪೂಜಾರ್ಹ ವಸ್ತು ಯಾವುದು?*

ಲಿಂಗವಂತ ಧರ್ಮದಲ್ಲಿ ಇಷ್ಟಲಿಂಗ ಮಾತ್ರ ಪೂಜಾರ್ಹ ವಸ್ತು, ಇಷ್ಟಲಿಂಗವು ಅರಿವಿನ ಕುರುಹು ಆಗಿದೆ. "ಅರಿಯದ ಕಾರಣ ಕುರುಹುವಿಡಿವೆನಲ್ಲದೆ ಅರಿದ ಬಳಿಕ ಇನ್ನೇನೊ?" ಎಂದು ಅಲ್ಲಮಪ್ರಭುಗಳು ಪ್ರಶ್ನಿಸುತ್ತಾರೆ. ಇಷ್ಟಲಿಂಗವೇ ದೇವರಲ್ಲ, ಲಿಂಗದೇವನ ಕುರುಹು. ಲಿಂಗವಂತ ಧರ್ಮದಲ್ಲಿ ದೇವರ ಹೆಸರು ಲಿಂಗದೇವ ಎಂದಿದೆ. ಶರಣರು ಶಿವ ಮುಂತಾದ ಶಬ್ದಗಳನ್ನು ಕೇವಲ ರೂಢಿಗತವಾಗಿ ಬಳಸಿದ್ದಾರೆ. ಇದರ ಅರ್ಥ ಕೂಡಲಸಂಗಮದೇವ ವಚನಾಂಕಿತವನ್ನು ಲಿಂಗದೇವ ಎಂದು ತಿದ್ದಬೇಕು ಎಂದಲ್ಲ. ಆ ಕೂಡಲಸಂಗಮದೇವ ವಚನಾಂಕಿತವು ಬಸವಣ್ಣನವರ ಸಿಗ್ನೇಚರ್ ಆಗಿದೆ ಎಂಬುದನ್ನು ಮರೆಯಬಾರದು. ಕೂಡಲಸಂಗಮದೇವನಿಗೆ ಎಲ್ಲಿಯೂ ಗುಡಿ ಇಲ್ಲ. ಕೂಡಲಸಂಗಮದಲ್ಲಿರುವುದು ಸಂಗಮೇಶ್ವರ/ಸಂಗಮನಾಥ ದೇವಸ್ಥಾನವೇ ಹೊರತು ಕೂಡಲಸಂಗಮ ದೇವಸ್ಥಾನವಲ್ಲ. "ತೋರಲಿಲ್ಲದ ಸಿಂಹಾಸನದ ಮೇಲೆ ಹೇಳಬಾರದ ಘನವು ಬಂದೆರಗಿದಡೆ ತೋರಿ ಮೆರೆವ ಸಂಗಮನಾಥನು ಎದ್ದು ಹೋದನು" ಎಂದು ಬಸವಣ್ಣನವರು ಕೂಡಲಸಂಗಮದಲ್ಲಿನ ಸ್ಥಾವರಲಿಂಗವನ್ನು ಅಲ್ಲಗಳೆದಿದ್ದಾರೆ.

ಶರಣರು ತಮ್ಮೊಳಗಿನ ಲಿಂಗದೇವನ ಅನುಸಂಧಾನಕ್ಕಾಗಿ ಇಷ್ಟಲಿಂಗವೆಂಬ ಮಾಧ್ಯಮವನ್ನು ಬಳಸಿದರು. ಆ ಮೂಲಕ ತಮ್ಮೊಳಗೇ ಇರುವ ಮಹಾಘನದ ಜೊತೆ ಒಂದಾದರು. ಹೀಗೆ ಒಂದಾಗುವುದೇ ಇಷ್ಟಲಿಂಗಯೋಗ (ಶಿವಯೋಗ). ಆದ್ದರಿಂದ ಲಿಂಗವಂತ ಧರ್ಮದಲ್ಲಿ ಪೂಜೆ ಇಲ್ಲ, ಆದರೆ ಪೂಜೆ ಮಾಡಿಕೊಳ್ಳುವುದು ಇದೆ. ಪೂಜೆ ಮಾಡಿಕೊಳ್ಳುವುದೆಂದರೆ ತಮ್ಮೊಳಗಿನ ಘನದ ಜೊತೆ ಶೂನ್ಯ (ಪೂಜೆ) ಆಗುವುದು. ಹೀಗೆ ಶರಣರು ತಮ್ಮನ್ನು ತಾವು ಶೂನ್ಯ ಮಾಡಿಕೊಳ್ಳುತ್ತಿದ್ದರು. ಲಿಂಗವಂತ ಜ್ಞಾನಿಗಳು 'ಪೂಜೆ ಮಾಡಿರಿ' ಎಂದು ಹೇಳುವುದಿಲ್ಲ, 'ಪೂಜೆ ಮಾಡಿಕೊಳ್ಳಿರಿ' ಎಂದು ಹೇಳುತ್ತಾರೆ.

ದೇವರು ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣ ಎಂದು ಬಸವಣ್ಣನವರು ಹೇಳಿದ್ದಾರೆ. ರೂಪಿಲ್ಲದ ವಿಶ್ವಚೇತನವಾಗಿರುವ ಇಷ್ಟಲಿಂಗವು ಲಿಂಗದೇವ ಎಂಬ ಅರಿವಿನ ಕುರುಹು ಹೊರತಾಗಿ ಮೂರ್ತಿ ಅಲ್ಲ, ಆದ್ದರಿಂದ ಲಿಂಗವಂತ ಧರ್ಮದಲ್ಲಿ ಮೂರ್ತಿಪೂಜೆ ನಿಷಿದ್ಧ. ಮೂರ್ತಿಯೇ ಇಲ್ಲವೆಂದಮೇಲೆ ಮಂದಿರದ ಪ್ರಶ್ನೆಯೇ ಇಲ್ಲ. ದೇಹವೇ ದೇಗುಲವಾಗಿರುವುದರಿಂದ ದೇವರು ನಮ್ಮೊಳಗೇ ಇದ್ದಾನೆ. ನಾವೆಲ್ಲ ಜೀವಂತ ಮಂದಿರಗಳೇ ಆಗಿದ್ದೇವೆ.

ಸಮಷ್ಟಿಯನ್ನು ವ್ಯಷ್ಟಿಯಲ್ಲಿ ಒಂದಾಗಿಸಿ ಲೋಕಕಲ್ಯಾಣದಲ್ಲಿ ತೊಡಗುವುದೇ ಲಿಂಗವಂತನು ದೇವರನ್ನು ಮೆಚ್ಚಿಸುವ ಕ್ರಮ. ಲಿಂಗಾಯತ ಎಂದರೆ 'ಲಿಂಗಧಾರಣೆ ಮಾಡಿದವನು' ಎಂಬುದು ಸಾಮಾನ್ಯ ಅರ್ಥವಾದರೆ. 'ಲಿಂಗಕ್ಕೆ ಪ್ರಿಯನಾದವನು' ಎಂಬುದು ಅದರ ತಾತ್ವಿಕ ಅರ್ಥವಾಗಿದೆ. (ಆಯತ ಎಂದರೆ ಪ್ರಿಯ ಎಂಬ ಅರ್ಥವೂ ಇದೆ.)

ಈ ಧರ್ಮದಲ್ಲಿ ಬಸವಾದಿ ಶರಣರು ಗೌರವಾರ್ಹವಾಗಿದ್ದಾರೆ. ಬಸವಾದಿ ಶರಣರ ಪಾದಸ್ಪರ್ಶದಿಂದಾಗಿ ಬಾಗೇವಾಡಿ, ಕೂಡಲಸಂಗಮ, ಕಲ್ಯಾಣ ಮುಂತಾದವು ಸ್ಫೂರ್ತಿಯ ತಾಣಗಳಾಗಿವೆ. ಶರಣರಿಗೆ ಇಡೀ ಭೂಲೋಕವೇ ಶ್ರದ್ಧಾಕೇಂದ್ರವಾಗಿದೆ. ಏಕೆಂದರೆ

ಕರ್ತಾರನ ಕಮ್ಮಟವಾಗಿದೆ.

* ಲಿಂಗವಂತರು ಪೂಜೆಗಾಗಿ ತೆಂಗು, ಲಿಂಬೆಹಣ್ಣು ುಗುಂಬಳ ಬಳಸುವುದು ಸರಿಯೆ?

ಅದು ಹೇಗೆ ಸರಿಯಾಗುತ್ತದೆ? ಬಲಿಪ್ರಜ್ಞೆಯ ಚಾರಿಗಳು ಇವುಗಳನ್ನು ಬಲಿಯ ವಸ್ತುಗಳನ್ನಾಗಿ ರ್ತಿಸಿದ್ದಾರೆ. ನಮ್ಮ ದೇಶದಲ್ಲಿ ನರಬಲಿ, ಪ್ರಾಣಿಬಲಿ ಪಕ್ಷಿಬಲಿ ಇರುವಂತೆಯೆ ಇಂಥ ಕಾಯಿಗಳನ್ನು ಹಿಟ್ಟಿನ ಮೂರ್ತಿಗಳನ್ನು ಕೂಡ ಬಲಿ ಕೊಡಲು ತ್ತಾರೆ. ದೇವರ ಮುಂದೆ ಕಾಯಿಗಳನ್ನು ಒಡೆಯುವುದು ಸಂಪ್ರದಾಯ ಎಂಬುದನ್ನು ಜನ ಮರೆತಿದ್ದರೂ ಸುಪ್ತಪ್ರಜ್ಞೆಯಲ್ಲಿ ಹಾಗೇ ಉಳಿದುಕೊಂಡು ಬಂದಿದೆ. ಣ್ಣನವರು ಇಂಥ ಬಲಿಯನ್ನೂ ನಿಷೇಧಿಸಿದ್ದರು. ಣ್ಣನವರು ಸೃಷ್ಟಿಸಿದ ಇಷ್ಟಲಿಂಗ ಪೂಜೆಯಲ್ಲಿ ಕಾಯಿ, ಲಿಂಬೆಕಾಯಿ ಮತ್ತು ಕುಂಬಳಕಾಯಿ ಅಥವಾ ನ ಮೂರ್ತಿಗಳ ಬಳಕೆಯಾಗುವುದಿಲ್ಲ. ಇಷ್ಟಲಿಂಗಕ್ಕೆ ೂ ಹರಕೆ ಹೊರುವುದಿಲ್ಲ. ಬೆಳ್ಳಿಯ ತೊಟ್ಟಿಲು, ಾರದ ಬಟ್ಟಲು, ವಜ್ರದ ಕಣ್ಣುಗಳು ಅದಕ್ಕೆ ಬೇಕಿಲ್ಲ. ್ರದೇ ಖರ್ಚಿಲ್ಲದ ಪೂಜಾ ವಿಧಾನ ಅದು! ಉಳಿದ ಗಳು ಬಡವರ ಆರ್ಥಿಕ ವ್ಯವಸ್ಥೆಯನ್ನೇ ಹದಗೆಡಿಸಿವೆ.

* ಲಿಂಗವಂತ ಧರ್ಮದಲ್ಲಿ ಸ್ವಾಮಿಗಳು ಇದ್ದಾರೆಯೆ? ಗಳು ಇವೆಯೆ?

ಸ್ವಾಮಿ ನೀನು ಶಾಶ್ವತ ನೀನು" ಎಂದು ಣ್ಣನವರು ಹೇಳುತ್ತಾರೆ. ಅರಿವೇ ಗುರು, ಗುರುವೇ ು, ದೇವರೇ ಸ್ವಾಮಿ, ಆ ಸ್ವಾಮಿಯೇ ಶಾಶ್ವತ. ಲ್ಲವೂ ಕಾಲಮಿತಿಯೊಂದಿಗೆ ಅಸ್ತಿತ್ವದಲ್ಲಿರುವಂಥವು. ನನ್ನು ಬಿಟ್ಟು ಸೂರ್ಯ ಚಂದ್ರ ಮೊದಲುಮಾಡಿ ವೂ ಮರಣಕ್ಕೆ ಒಳಗಾಗುವಂಥವು. ಆದ್ದರಿಂದ ವಂತ ಧರ್ಮದಲ್ಲಿ ಸ್ವಾಮಿಗಳಿಲ್ಲ. ಆದರೆ ತತ್ತ ಮರು ಇದ್ದಾರೆ. ಅವರು ಲಿಂಗವಂತ ಧರ್ಮದ ವನ್ನು ಜನಮನಗಳಲ್ಲಿ ಬಿತ್ತುವವರು.

ಲಿಂಗವಂತ ಧರ್ಮದಲ್ಲಿ ಮಠಗಳಿಲ್ಲ. ಅವುಗಳಿಗೆ ರ್ಯಯವಾಗಿ ಮಹಾಮನೆ ಇದೆ. ಈ ಮಹಾಮನೆಯ ಪ್ಪನೆಯು ಸಕಲಜೀವಾತ್ಮರಿಗೆ ಲೇಸನೆ ಬಯಸುವಂಥ ಿ. ಲಿಂಗವಂತ ಧರ್ಮದ ಗುರಿ ಲೋಕಕಲ್ಯಾಣವಾಗಿದೆ. ಯೆ ಇಲ್ಲಿ ಜಂಗಮಕ್ಕೆ ಬಹಳ ಮಹತ್ವವಿದೆ. ಜಂಗಮಕ್ಕೆ ಅರ್ಥಗಳಿವೆ. ಲೋಕ, ಸಮಾಜ, ವಚನಗಳಲ್ಲಿನ ತ್ವ ಪ್ರತಿಪಾದಕ, ಚೈತನ್ಯ ಮುಂತಾದ ಅರ್ಥಗಳನ್ನು ಹೊಂದಿದೆ.

ಶರಣರ ಮೂಲ ಉದ್ದೇಶ ಈ ಬದುಕನ್ನು ಾಗೊಳಿಸುವಂಥದ್ದಾಗಿತ್ತು. ಅನುಭಾವದ ನೆಲೆಯಲ್ಲಿ ಇಲ್ಲದ ಮತ್ತು ಸರ್ವರಿಗೂ ಘನತೆವೆತ್ತ ಬದುಕನ್ನು ಸುವ ಸಮಾಜ ನಿರ್ಮಾಣವೇ ಅವರ ಗುರಿಯಾಗಿತ್ತು. ಂದ ಅವರ ಅನುಭಾವದ ಬದುಕು (ಸ್ಪಿರಿಚ್ಯುವಲ್) ಜೀವನಪ್ರೇಮದಿಂದ ಕೂಡಿದ್ದು ಸರ್ವಜೀವದಯಾ ವಾಗಿತ್ತು.

* ಲಿಂಗವಂತ ಧರ್ಮದಲ್ಲಿ ಪಾದಪೂಜೆ ಮತ್ತು ೋದಕ ಸೇವನೆಯ ಸಂಪ್ರದಾಯ ಇದೆಯೆ?

ಸ್ವಾಮಿಗಳೇ ಇಲ್ಲವೆಂದಮೇಲೆ ಅವರ ಪಾದಗಳು ದ ಬರುವವು? ಮುಂಬರುವ ದಿನಗಳಲ್ಲಿ ಸ್ವಾಮಿಗಳು ಜಂಗಮತ್ವವನ್ನು ಕಳೆದುಕೊಂಡು ತತ್ತ್ವಜಂಗಮರಾಗಿ ಾದಿ ಶರಣರ ತತ್ತ್ವಗಳನ್ನು ಪ್ರಚಾರ ಮಾಡುವ ರ್ಭದಲ್ಲೂ ಪಾದಪೂಜೆ ಮತ್ತು ಪಾದೋದಕ ಸೇವನೆ ಿ. ಲಿಂಗವಂತ ಧರ್ಮದಲ್ಲಿ ಪಾದಪೂಜೆ ಎಂದರೆ ವ ಪೂಜೆ. ಪಾದ ಎಂಬ ಶಬ್ದಕ್ಕೆ ಕಿರಣ, ಹೊಳವು ಜ್ಞಾನ ಎಂಬ ಅರ್ಥಗಳೂ ಇವೆ ಎಂಬುದನ್ನು ಯಬಾರದು. 'ನಿಮ್ಮ ಶ್ರೀಪಾದಕ್ಕೆ ಶರಣೆಂಬೆ' ಎಂದರೆ ಜ್ಞಾನಸಂಪತ್ತಿಗೆ ಶರಣು' ಎಂದರ್ಥ. ಈ ಶರಣ ವು ಬಾಗಿದ ಶಿರ ಮತ್ತು ಮುಗಿದ ಕೈಗಳೊಂದಿಗೆ ಶರಣಾರ್ಥಿ ಎಂದು ಗೌರವ ಸೂಚಿಸುವ ವಾಗಿದೆ. ಸರ್ವರು ಶಿವಸ್ವರೂಪಿಗಳೇ ಆಗಿರುವುದರಿಂದ ು ಯಾರ ಕಾಲಿಗೆ ಬೀಳುವುದು? ಎದುರಿಗೆ ವರ ಒಳಗಿನ ಶಿವಸ್ವರೂಪಕ್ಕೆ ಒಬ್ಬರಿಗೊಬ್ಬರು ಶರಣು ರ್ಥಿ ಎನ್ನುತ್ತಾರೆ. ಪಾದೋದಕ ಎಂದರೆ ಜ್ಞಾನೋದಕ. ವೇ ಲಿಂಗವಾದ ಕಾರಣ ಚೆನ್ನಬಸವಣ್ಣನವರು ೋದಕವೆಂಬುದು ಲಿಂಗಕ್ಕೆ ಮಜ್ಜನಕ್ಕೆರೆದುದು" ಎಂದು ಿಸಿದ್ದಾರೆ. ಆದರೂ ಬಹುಪಾಲು ಸ್ವಾಮಿಗಳು ಈ ನ್ನು ಭಕ್ತರಿಗೆ ವಿವರಿಸಿ ಹೇಳುತ್ತಿಲ್ಲ.

* ಹಾಗಾದರೆ ಮಠಗಳು ಬೇಡವೆ?

ಂದಿತ ಬೇಕು. ಆದರೆ ಅವೆಲ್ಲ ಮಹಾಮನೆಗಳಾಗಿ ರ್ತನೆಗೊಳ್ಳಬೇಕು. ಸ್ವಾಮಿಗಳೆಲ್ಲ ಸೇರಿ ವಚನಗಳಲ್ಲಿನ ಮತ್ವದ ಲಿಂಗತತ್ತ್ವವನ್ನು ಜನಸಮುದಾಯದ ಿನ ಮೂಲ ಸೆಲೆಯಾಗಿಸುವಲ್ಲಿ ಕಾರ್ಯೋನ್ಮುಖ ೇಕು. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಾದ ವೃತ್ತಿಪರ ಸಂಸ್ಥೆಗಳನ್ನು ಸ್ಥಾಪಿಸಲು ಾಳಶಾಹಿಗಳು ತುದಿಗಾಲ ಮೇಲೆ ನಿಂತಿದ್ದಾರೆ. ಂದ ಸಂಪದ್ಭರಿತ ಮಠಗಳ ಸ್ವಾಮಿಗಳು ಆ ಕಡೆ ಹರಿಸಬೇಕಿಲ್ಲ. ಇಂದು ಜನಸಮುದಾಯಕ್ಕೆ ುವುದು ಅನುಭವ ಮತ್ತು ಅನುಭಾವಪೂರ್ಣ ಿನ ಶಿಕ್ಷಣ. ಶರಣರ ವಚನಗಳು ಅಂಥ ಶಿಕ್ಷಣದ ಆಗರವಾಗಿವೆ. ಈ ಜೀವಪರ ಶಿಕ್ಷಣ ಪಡೆಯದೆ ಬದುಕುವುದು ಪ್ರಾಣಿಸದೃಶವಾಗುತ್ತದೆ. ಧನಾಢ್ಯರು ಮಾಡಲು ಮುಂದೆ ಬರದ ಈ ಮಹಾಕಾರ್ಯವನ್ನು ಸ್ವಾಮಿಗಳು ತತ್ತ್ವಜಂಗಮರಾಗಿ ಮಾಡಬೇಕು.


ಹೂಗಾರ ಮಾದಯ್ಯ
ನುಲಿಯ ಚಂದಯ್ಯ
ಮೋಳಿಗೆ ಮಾರಯ್ಯ
ಮಾದಾರ ಚನ್ನಯ್ಯ
ಕದಿರೆ ರೆಮ್ಮವ್ವೆ
ಕುರುಬ ಗೊಲ್ಲಾಳೇಶ

* ಲಿಂಗವಂತ ಧರ್ಮದಲ್ಲಿ ಸ್ವರ್ಗ, ನರಕ, ಪುಣ್ಯ, ಪಾಪ, ಪುನರ್ಜನ್ಮ, ಮೋಕ್ಷ ಇವೆಯೆ?

ಇವೆಲ್ಲವುಗಳ ತಾಯಿಬೇರು ಕರ್ಮಸಿದ್ಧಾಂತ. ಕರ್ಮಸಿದ್ಧಾಂತದ ಪುಷ್ಪಗಳಿವು. ಬಸವಣ್ಣನವರು ಕರ್ಮಸಿದ್ಧಾಂತವನ್ನೇ ಕೊಚ್ಚಿಹಾಕಿ 'ಕರ್ಮಹರ ಬಸವ' ಎನಿಸಿದ್ದಾರೆ. "ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ? ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ?" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಈ ಧರ್ಮದಲ್ಲಿ ಆಚಾರವೇ ಸ್ವರ್ಗ, ಅನಾಚಾರವೇ ನರಕ, ಸ್ವರ್ಗದ ಆಸೆ ಮತ್ತು ನರಕದ ಭಯ ಹುಟ್ಟಿಸುವ ಪುಣ್ಯಪಾಪಗಳಿಗೆ ಇಲ್ಲಿ ಸ್ಥಾನವಿಲ್ಲ. "ಪುಣ್ಯ ಪಾಪವೆಂಬ ಉಭಯಕರ್ಮವನಾರು ಬಲ್ಲರಯ್ಯಾ? ಇವನಾರುಂಬರು? ಕಾಯ ತಾನುಂಬಡೆ ಕಾಯ ತಾ ಮಣ್ಣು, ಜೀವ ತಾನುಂಬಡೆ ಜೀವ ತಾ ಬಯಲು" ಎಂದು ಹೇಳುವ ಮೂಲಕ ಪುಣ್ಯ ಪಾಪಗಳ ಜೊತೆ ಪುನರ್ಜನ್ಮ ಮತ್ತು ಮೋಕ್ಷವನ್ನೂ ಹೊಡೆದು ಹಾಕಿದ್ದಾರೆ.

ಲಿಂಗವಂತ ಧರ್ಮದಲ್ಲಿ ಇಷ್ಟಲಿಂಗ ದೀಕ್ಷೆಯೆ ಪುನರ್ಜನ್ಮ. "ಕೂಡಲಸಂಗನ ಶರಣರು ಅಚ್ಚ ಲಿಂಗೈಕ್ಯರು" ಎಂದು ಬಸವಣ್ಣನವರು ಹೇಳುತ್ತಾರೆ. ಅಂದರೆ ಶರಣರು ಬದುಕಿರುವಾಗಲೇ ಮೋಕ್ಷ ಸಾಧನೆ ಮಾಡಿದವರು. ಆದ್ದರಿಂದ ಲಿಂಗವಂತ ಧರ್ಮದಲ್ಲಿ ಅದಮ್ಯ ಜೀವನಪ್ರೀತಿಯಿಂದ ಕೂಡಿದ ದಯಾಭಾವ ಬಿಟ್ಟರೆ ಬೇರೇನೂ ಇಲ್ಲ. ಅದುವೇ ಸಕಲಜೀವಾತ್ಮರ ಕೂಡ ದೇವರ ಜೊತೆ ಒಂದಾಗಿಸುವಂಥ ಮಾರ್ಗ.

* ಲಿಂಗವಂತರು ಪಂಚಾಂಗವನ್ನು ನಂಬಬೇಕೆ?

ಲಿಂಗವಂತ ಧರ್ಮವು ಮೂಢನಂಬಿಕೆಗೆ ವಿರುದ್ಧವಾಗಿದೆ.

"ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮ ಶಿವಪಥನರಿದಂಗೆ
ಹೋಮ, ನೇಮ, ಜಪ, ತಪದಿಂದ ವೆಗ್ಗಳ
ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವಂಗೆ."

ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಲಿಂಗಪಥವನ್ನು ಅರಿಯುವುದು ಎಲ್ಲಕ್ಕಿಂತ ಹೆಚ್ಚಿನದಾಗಿದೆ. "ವಾರ, ತಿಥಿ, ಸುಮುಹೂರ್ತವೆಂಬ ಲೌಕಿಕದ ಕರ್ಮವ ಮಾಡಿದಡೆ ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚೆನ್ನಸಂಗಮದೇವಾ" ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ.

* ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರ ಅಂದರೆ?

ಇವು ಲಿಂಗವಂಥ ಧರ್ಮಾಚರಣೆಯ ಮೂರು ಅವಿಭಾಜ್ಯ ಅಂಗಗಳು. ಆದರೆ ಇವೆಲ್ಲ 12ನೇ ಶತಮಾನದ ಮೊದಲೇ ಇದ್ದವು ಎಂದು ಪಟ್ಟಭದ್ರ ಹಿತಾಸಕ್ತಗಳು ಪ್ರತಿಪಾದಿಸುತ್ತಿವೆ. ಕಳೆದ 800 ವರ್ಷಗಳ ಅವಧಿಯಲ್ಲಿ ಇಂಥ ಅನೇಕ ಅನ್ಯಾಯಗಳನ್ನು ಶರಣರ ಲಿಂಗವಂತ ಧರ್ಮದ ಮೇಲೆ ಮಾಡಲಾಗಿದೆ. ಹೀಗೆ ಹಿಂದಿನ ಗ್ರಂಥಗಳಲ್ಲಿ ಈ ವಿಚಾರಗಳನ್ನು ಪ್ರಜ್ಞಾಪೂರ್ವಕವಾಗಿ ಸೇರಿಸಿದ್ದನ್ನು ಎತ್ತಿ ತೋರಿಸುವ ಪಟ್ಟಭದ್ರ ಹಿತಾಸಕ್ತಗಳು 'ಬಸವಣ್ಣನವರು ಇಷ್ಟಲಿಂಗದ ಜನಕರು' ಎಂಬುದನ್ನೂ ಒಪ್ಪಿಕೊಳ್ಳುವುದಿಲ್ಲ. ಇಷ್ಟಲಿಂಗ ಕೂಡ ಮೊದಲೇ ಇತ್ತು ಎಂದು ವಾದಿಸುತ್ತಾರೆ! "ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ" ಎಂದು ಹೇಳುವ ಬಸವಣ್ಣನವರು ಇಷ್ಟಲಿಂಗದ ಮೂಲಕ ಜಾತಿವ್ಯವಸ್ಥೆಗೆ ಕೊಡಲಿ ಪೆಟ್ಟು ಕೊಟ್ಟಿದ್ದಾರೆ. ಆದರೆ ಮೇಲುಕೀಳುಗಳಲ್ಲಿ ನಂಬಿಕೆ ಇರುವ ಲಿಂಗೋದ್ಭವವಾದಿಗಳು ಬಸವಣ್ಣನವರಿಗೆ ಇಷ್ಟಲಿಂಗ ಕೊಟ್ಟವರು ತಮ್ಮ ಆಚಾರ್ಯರೇ ಎಂದು ಸಾಧಿಸಲು ವಿಫಲ ಪ್ರಯತ್ನ ಮಾಡುತ್ತಲೇ ಇದ್ದಾರೆ.

'ಗುರು, ಲಿಂಗ, ಜಂಗಮ, ಪಾದೋದಕ (ಜ್ಞಾನೋದಕ), ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ' ಇವು ಅಷ್ಟಾವರಣಗಳು. ಐಹಿಕ ಜಗತ್ತಿನ ವಸ್ತುಮೋಹದಿಂದ ರಕ್ಷಿಸುವಂಥವು.

'ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ' ಇವು ಷಟ್‌ಸ್ಥಲಗಳು. ಲಿಂಗವಂತರ ಮಾನಸಿಕ ಮಜಲುಗಳನ್ನು ಸೂಚಿಸುತ್ತವೆ. ವ್ಯಷ್ಟಿಯಿಂದ ಸಮಷ್ಟಿಪ್ರಜ್ಞೆ ವರೆಗಿನ ವ್ಯಕ್ತಿತ್ವ ವಿಕಸನವನ್ನುಂಟು ಮಾಡುವ ಸ್ಥಲಗಳಿವು.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಇವು ಪಂಚಾಚಾರಗಳು. ಇವುಗಳನ್ನು ಆಚರಣೆಯಲ್ಲಿ ತರುವುದೇ ಲಿಂಗವಂತರ ಕರ್ತವ್ಯವಾಗಿದೆ.

ಇಷ್ಟಲಿಂಗದಲ್ಲಿ ನಂಬಿಕೆ ಇಟ್ಟು ಏಕದೇವೋಪಾಸಕರಾಗುವುದು ಲಿಂಗಾಚಾರ. ಪರಹಿತ ಬಯಸುವುದು ಸದಾಚಾರ. ಜಾತಿಭೇದ ಮಾಡದಿರುವುದು ಶಿವಾಚಾರ. ಶಿವಭಕ್ತರ ನಿಂದೆಯನ್ನು ಸಹಿಸದಿರುವುದು ಗಣಾಚಾರ. ಶಿವಭಕ್ತರಲ್ಲಿ ಸೇವಾಭಾವದಿಂದ ಇರುವುದು ಭೃತ್ಯಾಚಾರ.

* ಲಿಂಗವಂತ ಧರ್ಮದಲ್ಲಿ ಜಾತಿಗಳಿವೆಯೆ?

ಲಿಂಗವಂತ ಧರ್ಮ ನಿರ್ಜಾತಿ ಧರ್ಮವಾಗಿದೆ. ಮನುವಾದಿಗಳ ವರ್ಣ, ಜಾತಿ ಮತ್ತು ಉಪಜಾತಿಗಳನ್ನು ನಿರ್ನಾಮ ಮಾಡುವ ಉದ್ದೇಶದಿಂದಲೇ ಈ ಧರ್ಮ ಜನ್ಮತಾಳಿದೆ. ದುರಂತವೆಂದರೆ ಈ ಧರ್ಮ ಕಾಲಾನುಕ್ರಮದಲ್ಲಿ ಉಪಜಾತಿಗಳಿಂದ ತುಂಬಿಹೋಗಿದೆ. ಲಿಂಗಾಯತರು ಯಾವಾಗ ಹಿಂದೂ-ಲಿಂಗಾಯತರಾದರೊ ಆವಾಗಲೇ ಅವರು ತಮ್ಮ ಸ್ವತಂತ್ರ ಧರ್ಮವನ್ನು ಕಳೆದುಕೊಂಡು ಹಿಂದೂ ಧರ್ಮದೊಳಗಿನ ಲಿಂಗಾಯತ ಜಾತಿಯಾದರು. ಈ ದುರಂತ ಎಲ್ಲಿಯವರೆಗೆ ಮುಂದುವರಿಯಿತೆಂದರೆ ಜಾತಿಗಳಿಲ್ಲದ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಕಾಯಕಗಳು ಉಪಜಾತಿಗಳಾಗಿ ರೂಪುಗೊಂಡವು. ಸ್ವತಂತ್ರ ಲಿಂಗವಂತ ಧರ್ಮದಲ್ಲಿ ಸಮಗಾರ ಹರಳಯ್ಯನವರು ಎಂದರೆ ಸಮಗಾರ ಕಾಯಕದ ಲಿಂಗವಂತ ಹರಳಯ್ಯನವರು. ಆದರೆ ಲಿಂಗಾಯತವು ಹಿಂದೂ ಧರ್ಮದ ಭಾಗವಾದಾಗ ಸಮಗಾರ ಎಂಬುದು ಜಾತಿಯಾಯಿತು. ಹೀಗೆ ಲಿಂಗಾಯತ ಜಾತಿಯಾದ ನಂತರ ಜಂಗಮ, ಆರಾಧ್ಯ, ಬಣಜಿಗ, ಪಂಚಮಸಾಲಿ, ಕುಡು ಒಕ್ಕಲಿಗ, ಸಾದರ, ನೊಣಬ, ನಗರ್ತ, ಗೌಡಲಿಂಗಾಯತ, ಲಿಂಗಾಯತ ರೆಡ್ಡಿ, ಕುರುಹಿನಶೆಟ್ಟಿ, ಗಾಣಿಗ, ಬಣಗಾರ, ನೇಕಾರ, ಶಿವಸಿಂಪಿ, ಶೀಲವಂತ, ಹೂಗಾರ ಮುಂತಾದ ಉಪಜಾತಿಗಳು ಹುಟ್ಟಿಕೊಂಡಾಗ ಕಾಯಕದ ಪ್ರಾಮುಖ್ಯ ಹೊರಟುಹೋಯಿತು.

ಮೈಸೂರು ರಾಜ್ಯದ 1891ನೇ ಜನಗಣತಿಯ ಪ್ರಕಾರ ಲಿಂಗಾಯತದಲ್ಲಿ 38 ಉಪಜಾತಿಗಳಿವೆ. 1901ರ ಬಾಂಬೆ-ಕರ್ನಾಟಕದ ಜನಗಣತಿಯ ಪ್ರಕಾರ 43 ಉಪಜಾತಿಗಳಿವೆ.

ಲಿಂಗಾಯತರು ತಮ್ಮ ಸ್ವತಂತ್ರ ಧರ್ಮವನ್ನು ಮರೆತು ಉಪಜಾತಿಗಳಲ್ಲಿ ಒಡೆದು ಹೋದಾಗ ಸಹಜವಾಗಿಯೆ ಅವರ ತಲೆಯಲ್ಲಿ ಮನು ವಾಸ ಮಾಡುವನು. ಆಗ ಬಸವಣ್ಣ ನಾಲಿಗೆಯ ಮೇಲೆ ಮಾತ್ರ ಇರುತ್ತಾರೆ. ಲಿಂಗವಂತ ಧರ್ಮ ಉಳಿಯಬೇಕಾದರೆ ಲಿಂಗಾಯತರು ಜಾತಿಗಳನ್ನು ನಿರ್ನಾಮ ಮಾಡುವುದು ಅವಶ್ಯವಾಗಿದೆ. ಇಷ್ಟಲಿಂಗಪೂಜಕರು ವಿವಿಧ ಉಪಜಾತಿಗಳ ಮಧ್ಯದ ಬೇಲಿಗಳನ್ನು ಕಿತ್ತೆಸೆಯಬೇಕು. ಉಪಜಾತಿಗಳ ಮಧ್ಯೆ ಯುದ್ಧೋಪಾದಿಯಲ್ಲಿ ರಕ್ತಸಂಬಂಧ ಸಾಧಿಸುವುದರ ಮೂಲಕ ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂಬ ಸತ್ಯವನ್ನು ಜಗತ್ತಿಗೆ ಸಾರುತ್ತ ಯಶಸ್ಸನ್ನು ಸಾಧಿಸಿದಾಗ ಮಾತ್ರ ಬಸವಾದಿ ಶರಣರು ಸ್ಥಾಪಿಸಿದ ಲಿಂಗವಂತ ಧರ್ಮ ಉಳಿಯಲು ಸಾಧ್ಯ. ಇಲ್ಲದಿದ್ದರೆ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ಆಚರಿಸುವುದರೊಂದಿಗೆ ಹೋಮ ಹವನಗಳಿಗೆ ಬಲಿಯಾಗುತ್ತ ಗುಡಿ ಗುಡಿ ಸುತ್ತುವ ಸೋ ಕಾಲ್ಡ್ ಲಿಂಗಾಯತರನ್ನೇ ನೋಡುವ ದುರಂತ ಸ್ಥಿತಿಯನ್ನು ತಲುಪಬೇಕಾಗುತ್ತದೆ.

* ಲಿಂಗವಂತ ಧರ್ಮ ರಕ್ಷಣೆಗಾಗಿ ಅನುಯಾಯಿಗಳು ಏನು ಮಾಡಬೇಕು?

ಲಿಂಗವಂತ ಧರ್ಮವು ಸರಳ ಸಹಜ ಧರ್ಮವಾಗಿದೆ.

1) ಬಹುದೇವೋಪಾಸನೆಯಿಂದ ಏಕದೇವೋಪಾಸನೆ ಕಡೆಗೆ
2) ಸ್ಥಾವರಲಿಂಗದಿಂದ ಇಷ್ಟಲಿಂಗದ ಕಡೆಗೆ
3) ಮಂದಿರದಿಂದ ಅನುಭವಮಂಟಪದ ಕಡೆಗೆ
4) ಮಠಗಳಿಂದ ಮಹಾಮನೆಯ ಕಡೆಗೆ
5) ಜಾತಿಯಿಂದ ನೀತಿಯ ಕಡೆಗೆ
6) ಕರ್ಮಸಿದ್ಧಾಂತದಿಂದ ಕಾಯಕಸಿದ್ಧಾಂತದ ಕಡೆಗೆ
7) ದಾನದಿಂದ ದಾಸೋಹದ ಕಡೆಗೆ
8) ಮೂಢನಂಬಿಕೆಯಿಂದ ವೈಚಾರಿಕತೆಯ ಕಡೆಗೆ
9) ವ್ಯಷ್ಟಿಪ್ರಜ್ಞೆಯಿಂದ ಸಮಷ್ಟಿಪ್ರಜ್ಞೆಯ ಕಡೆಗೆ
10) ವ್ಯಕ್ತಿಪ್ರಭುತ್ವದಿಂದ ಪ್ರಜಾಪ್ರಭುತ್ವದ ಕಡೆಗೆ
11) ಹೆಂಡಿರು ಮಕ್ಕಳುಳ್ಳ ಸಾಕಾರ ಶಿವಮೂರ್ತಿಯಿಂದ ನಿರಾಕಾರ ಶಿವನೆಡೆಗೆ
12) ಪುರುಷಪ್ರಧಾನ ಸಮಾಜದಿಂದ ಲಿಂಗಭೇದವಿಲ್ಲದ ಸಮಾಜದೆಡೆಗೆ
13) ಅಸಮಾನತೆಯ ಸಮಾಜದಿಂದ ಸಮಾನತೆಯ ಸಮಾಜದೆಡೆಗೆ
14) ಭ್ರಮಾತ್ಮಕ ಬದುಕಿನಿಂದ ವಾಸ್ತವದ ಬದುಕಿನೆಡೆಗೆ
15) ಹಿಂಸೆಯಿಂದ ಅಹಿಂಸೆಯ ಕಡೆಗೆ

ಈ 15 ಅಂಶಗಳನ್ನು ತನ್ನ ಅರಿವಿನಲ್ಲಿ ಅಳವಡಿಸಿಕೊಂಡು ಕಾಯಕ, ಪ್ರಸಾದ ಮತ್ತು ದಾಸೋಹಂಭಾವದಿಂದ ಸ್ವಾವಲಂಬಿ ಬದುಕನ್ನು ಸಾಗಿಸುವವನೇ ಲಿಂಗಾಂಗಸಾಮರಸ್ಯದ ಆನಂದವನ್ನು ಪಡೆಯುವ ಲೋಕೋಪಯೋಗಿ ಲಿಂಗವಂತನಾಗುತ್ತಾನೆ.

* ಲಿಂಗವಂತ ಧರ್ಮಸ್ಥಾಪಕರಾರು?


ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಅಕ್ಕ ನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಮಾದಾರ ಚೆನ್ನಯ್ಯ, ಸಮಗಾರ ಹರಳಯ್ಯ ಮಧುವರಸ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ ಮಡಿವಾಳ ಮಾಚಿದೇವ, ನುಲಿಯ ಚಂದಯ್ಯ, ಕಿನ್ನರಿ ಬ್ರಹ್ಮಯ್ಯ, ಬಹುರೂಪಿ ಚೌಡಯ್ಯ, ಒಕ್ಕಲಿಗ ಮುದ್ದಣ್ಣ ಮಾದಾರ ಧೂಳಯ್ಯ, ಸಂಬೋಳಿ ನಾಗಿದೇವ, ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವೆ, ಕುಂಬಾರ ಗುಂಡಯ್ಯ, ಕೇತಲದೇವಿ, ಉರಿಲಿಂಗಪೆದ್ದಿ, ಕಾಳವ್ವೆ, ಗಜೇಶ ಮಸಣಯ್ಯ, ತುರುಗಾಹಿ ರಾಮಣ್ಣ, ಸತ್ಯಕ್ಕ, ಲದ್ದೆಯ ಸೋಮಣ್ಣ, ಅಕ್ಕಮ್ಮ, ಹಡಪದ ಅಪ್ಪಣ್ಣ, ಲಿಂಗಮ್ಮ, ಮೋಳಿಗೆ ಮಾರಯ್ಯ, ಮೋಳಿಗೆ ಮಹಾದೇವಿ, ಬೊಂತಾದೇವಿ, ಹೆಂಡದ ಮಾರಯ್ಯ, ವೀರಗೊಲ್ಲಾಳ, ಹಾವಿನಾಳ ಕಲ್ಲಯ್ಯ, ಕೋಲ ಶಾಂತಯ್ಯ, ಶಾಂತರಸ, ಸೊಡ್ಡಳ ಬಾಚರಸ, ಅಮುಗೆ ರಾಯಮ್ಮ, ಅಮುಗಿ ದೇವಯ್ಯ, ಕೂಗಿನ ಮಾರಯ್ಯ, ಕೀಲಾರದ ಭೀಮಣ್ಣ ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ, ವೈದ್ಯ ಸಂಗಣ್ಣ ಗಾಣದ ಕಣ್ಣಪ್ಪ ಜೇಡರ ದಾಸಿಮಯ್ಯ ಮುಗ್ಗೆ ಮುಂತಾದ 770 ಅಮರಗಣಂಗಳು ಲಿಂಗವಂತ ಧರ್ಮದ ಸ್ಥಾಪಕರಾಗಿದ್ದಾರೆ.

* ಲಿಂಗವಂತರ ಧರ್ಮಗುರು ಯಾರು?

ಬಸವಣ್ಣನವರು ಲಿಂಗವಂತರ ಧರ್ಮಗುರು. ಅಂತೆಯೆ ಸಿದ್ಧರಾಮೇಶ್ವರರು "ಮಹಾಜ್ಞಾನ ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯಾ ಕಪಿಲಸಿದ್ಧಮಲ್ಲಿನಾಥಯ್ಯಾ" ಎಂದು ತಿಳಿಸಿದ್ದಾರೆ.

* ಲಿಂಗವಂತರ ಧರ್ಮಗ್ರಂಥ ಯಾವುದು?

12ನೇ ಶತಮಾನದ ಅಮರಗಣಂಗಳ ಸಮಗ್ರ ವಚನಗಳೇ ಲಿಂಗವಂತರ ಧರ್ಮಗ್ರಂಥ.




● ರಂಜಾನ್ ದರ್ಗಾ

ಜೆಡಿಎಸ್ ಬೇಗುದಿ

ದುಡ್ಡೂ ಗೋತಾ, ಮಾನಕ್ಕೂ ಲಾತಾ

ಅಪ್ಪಿತಪ್ಪಿ ಎಡವಿ ಬಿದ್ದರೆ ಅದನ್ನು ಯಡವಟ್ಟೆನ್ನುತ್ತಾರೆ. ಅದನ್ನೇ ಚಾಳಿ ಮಾಡಿಕೊಂಡರೆ-

ನಾನು ಪ್ರಸ್ತುತ ರಾಜಕಾರಣದ ವಾಸ್ತವ ಹೇಳಿದ್ದೇನೆ. ಯಾವ ತನಿಖೆಗೆ ಬೇಕಾದರೂ ರೆಡಿ. ಸದ್ಯ ನಡೆಯುತ್ತಿರುವುದೂ ಇದೇಯೆ- ಎಂದೆಲ್ಲ ಏನೇ ತಿಪ್ಪೆ ಸಾರಿಸಹೊರಟರೂ ಇದು ಜೆಡಿಎಸ್ ಅಧಿಪತಿ ಕುಮಾರಣ್ಣನ ಬಾಯಿಂದ ಬರಬೇಕಾದ ಮಾತುಗಳಲ್ಲ. ಒಂದು ರಾಜಕೀಯ ಪಕ್ಷವಾಗಿ, ದೇವೇಗೌಡರಂಥ ಮುತ್ಸದ್ದಿಯಿದ್ದೂ, ಮಾಜಿ ಮುಖ್ಯಮಂತ್ರಿಯೊಬ್ಬರು ತಮ್ಮದೇ ಪಕ್ಷದ ಶಾಸಕರನ್ನು ಬಿಕರಿಗಿಟ್ಟಂತಾ ದುರ್ಗತಿ



ಬರಬಾರದಿತ್ತು.

ನಿಜ; ಅಂಥಾ ಕಾಂಗ್ರೆಸ್ ಬಿಜೆಪಿಗಳೇ ಹೆಂಡದ ದೊರೆ ಮಲ್ಯನಿಗೆ ತಮ್ಮ ಶಾಸಕರ ಓಟನ್ನು ಮಾರಿಕೊಂಡಿರಲಿಲ್ಲವೆ? ಕರ್ನಾಟಕಕ್ಕೂ ಯಾವುದೇ ಆದರ್ಶ ಸಿದ್ಧಾಂತಕ್ಕೂ ಸೂತ್ರ ಸಂಬಂಧವಿಲ್ಲದ ರಾಜೀವ್ ಚಂದ್ರಶೇಖರ್‌ನಂಥ ಪಕ್ಕಾ ಉದ್ಯಮಿಗೆ ಬಿಜೆಪಿ ಸೇರಿದಂತೆ ಕಾಂಗ್ರೆಸ್, ಜೆಡಿಎಸ್‌ಗಳೂ ದುಡ್ಡಿಗೆ ಶಾಸಕರನ್ನು ಮಾರಿಕೊಂಡಿರಲಿಲ್ಲವೆ?

ಹೀಗಿರುವಾಗ ಕುಮಾರಸ್ವಾಮಿ ಆದ್ಯಾರೋ ವಿಜುಗೌಡನೆಂಬ ಬಿಜಾಪುರದ ಪುಢಾರಿಯನ್ನು ಎಮ್ಮೆಲ್ಸಿ ಮಾಡಲು ತನ್ನ ಶಾಸಕರು ತಲಾ ಒಂದು ಕೋಟಿ ಕೇಳುತ್ತಿದ್ದಾರೆಂದು ಸಹಜವಾಗೇ ಹೇಳಿರಬಹುದು. ಹಾಗಂತ ಕುಮಾರಣ್ಣನನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಯಾವ ನ್ಯಾಯ?

ಇದೇತಾನೆ ಕುಮಾರಣ್ಣನ ಅಭಿಮಾನಿಗಳೂ, ಕಟ್ಟಾ ಜೆಡಿಎಸ್ ಕಾರ್ಯಕರ್ತರೂ ಕೇಳುತ್ತಿರುವ ಪ್ರಶ್ನೆ?

ಲೆಕ್ಕಕ್ಕಿಲ್ಲದ ದತ್ತ

ರಾಜಕೀಯ ಪಕ್ಷವೊಂದರ ಚಾಲಕ ಸ್ಥಾನದಲ್ಲಿದ್ದು ರಾಜತಾಂತ್ರಿಕವಾಗಿ, ನೈತಿಕವಾಗಿ ಕಾಟಾಚಾರದ ಸಜ್ಜನಿಕೆಯನ್ನೂ ನಿರೀಕ್ಷಿಸಲಾಗದ ದುರ್ಗತಿ ಕುಮಾರಣ್ಣನದ್ದು. ಮಗ ಈ ರೀತಿ ಮರ್ಮಾಘಾತ ಮಾಡಿದಾಗೆಲ್ಲ ಅಪ್ಪ ದೇವೇಗೌಡರದ್ದು ಮಾಮೂಲಿನ ಮೌನ. ಇನ್ನು ಸಾರ್ವಜನಿಕವಾಗಿ ಉತ್ತರಿಸಲೇಬೇಕಾದ ಜವಾಬ್ದಾರಿ ತಾನೇ ಜೆಡಿಎಸ್‌ನ ಯಾವ ನಾಯಕನಿಗಿದೆ?

ಎಂ.ಸಿ. ನಾಣಯ್ಯನವರಂಥ ಹಿರಿಯರ ಪ್ರತಿಕ್ರಿಯೆ ಯಾರಿಗೂ ಬೇಕಿಲ್ಲ, ಏಕೆಂದರೆ ಅವರ ಯಾವ ನಿರ್ಧಾರವನ್ನೂ ಜೆಡಿಎಸ್ ಅವಲಂಬಿಸಿಲ್ಲ. ಹೊರಟ್ಟಿಗೆ ಸೀನಿಯಾರಿಟಿ ಇದೆ ನಿಜ, ಆದರೆ ಅವರ ಮರ್ಜಿಗಾಗಿ ಪಕ್ಷದ ತೃಣ ಮಾತ್ರವೂ ಕೊಂಕುವುದಿಲ್ಲ. ದತ್ತಗೆ ಪ್ರತಿಭೆಯಿದ್ದೂ ಅವರ ಮಾತು ಕೇಳುವವರಿಲ್ಲ. ಪುಟ್ಟಣ್ಣರಿಗೆ ಏನೇ ಸಂಘಟನಾ ಚಾತುರ್ಯವಿದ್ದರೂ ಯಾರಿಗೂ ಅದು ಬೇಕಾಗಿಲ್ಲ. ಇನ್ನು ಉಳಿದವರಾದರೂ ಎಂಥವರು? ಉಳಿದವನೇ ದೊಣ್ಣನಾಯಕ ಚಲುವರಾಯಸ್ವಾಮಿಗೆ ಶೋಕಿ, ಡೀಲು, ಉಂಡಾಡಿ ಬುದ್ಧಿಯ ಹೊರತಾಗಿ ಹೋರಾಟದ ಕಾಗುಣಿತ ಗೊತ್ತಿಲ್ಲ. ಜಮೀರ್ ಏನೇ ಸಂಘಟನೆ ಎಂದು ರುಬಾಬು ಮಾಡಿದರೂ ಆತನ ಚಾತುರ್ಯವೇನಿದ್ದರೂ ಡೀಲು, ಪಾಲು, ಇಸ್ಪೀಟು ಶೋಕಿಯಲ್ಲೇ ಖಾಲಿಯಾಗುತ್ತದೆ. ಇಕ್ಬಾಲ್ ಅನ್ಸಾರಿ ಆಟಕ್ಕುಂಟು ಆದರೆ ಲೆಕ್ಕಕ್ಕಿಲ್ಲ. ಎಂ.ಟಿ. ಕೃಷ್ಣಪ್ಪ ತುರುವೇಕೆರೆಯಿಂದಾಚೆಗೆ ಬೆಳೆಯಲೇ ಇಲ್ಲ. ಶ್ರವಣಬೆಳಗೊಳದ ಬಾಲಕೃಷ್ಣ ನೆಂಟಸ್ತಿಕೆಯಲ್ಲಿ ಗೌಡರ ಅಳಿಯ ಡಾ. ಮಂಜುನಾಥ್‌ಗೆ ತಮ್ಮ ಎನ್ನುವುದರ ಹೊರತಾಗಿ 24 ಗಂಟೆ ಪೂರ್ತಿ ಒಕ್ಕಲಿಗರ ಸಂಘದ ರಾಜಕಾರಣದಲ್ಲೇ ಬಿಜಿ. ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಸುಂಕದಕಟ್ಟೆ ಬಿಟ್ಟು ಈಚೆಗೇ ಬರುತ್ತಿಲ್ಲ. ಜಿ.ಟಿ. ದೇವೇಗೌಡರ ದೇಹವಷ್ಟೇ ಜೆಡಿಎಸ್‌ನಲ್ಲಿದೆ ಮನಸ್ಸೆಲ್ಲಾ ಇನ್ನೂ ಬಿಜೆಪಿಯಲ್ಲೇ ಅಲೆದಾಡಿಕೊಂಡಿದೆ.

ಹಾಸನದ ಪ್ರಕಾಶ್, ಸಕಲೇಶಪುರದ ಕುಮಾರಸ್ವಾಮಿ, ಕೆ.ಆರ್. ನಗರದ ಸಾ.ರಾ.ಮಹೇಶ್, ಹೆಗ್ಗಡದೇವನಕೋಟೆಯ ಚಿಕ್ಕಮಾದು, ಮದ್ದೂರಿನ ಡಿ.ಸಿ. ತಮ್ಮಣ್ಣ, ದೇವನಹಳ್ಳಿಯ ಪಿಳ್ಳ ಮುನಿಶಾಮಪ್ಪ, ಕೆ.ಆರ್. ಪೇಟೆಯ ನಾರಾಯಣಗೌಡ, ಶಿಡ್ಲಘಟ್ಟದ ರಾಜಣ್ಣ, ಚಿಂತಾಮಣಿಯ ಕೃಷ್ಣಾರೆಡ್ಡಿ, ಕುಣಿಗಲ್‌ನ ಡಿ. ನಾಗರಾಜಯ್ಯ- ಹೀಗೆ ಜೆಡಿಎಸ್ ಬಾವುಟ ಹಿಡಿದು ಗೆದ್ದ ಡಜನ್‌ಗಟ್ಟಲೇ ಶಾಸಕರೆಲ್ಲ ಗೆದ್ದಾಗಿನಿಂದ ರಾಜ್ಯದ ಹಿತಾಸಕ್ತಿಗಾಗಿ ಒಂದೇ ಒಂದು ದಿನ ಹೆಸರು ಮಾಡಿದ್ದಾಗಲಿ, ಸುದ್ದಿಯಾಗಿದ್ದಾಗಲಿ ನಡೆಯಲೇ ಇಲ್ಲ!

ಆಟಕ್ಕುಂಟು ಲೆಕ್ಕಕ್ಕಿಲ್ಲ?

ಮಾಗಡಿ ಬಾಲಕೃಷ್ಣ ಇದ್ದುದರಲ್ಲಿ ನಾಯಕತ್ವದ ಎಲ್ಲಾ ಲಕ್ಷಣಗಳಿದ್ದರೂ ಯಾಕೋ ಮನಸ್ಸು ಮಾಡುತ್ತಿಲ್ಲ. ಏನೋ ಖಿನ್ನತೆ, ಅದೆಂಥದೋ ಕೊರತೆ. ಯಾಕೋ ಹಿಂದೇಟು. ರಾಯಚೂರಿನ ಡಾ. ಶಿವರಾಜ್ ಪಾಟೀಲ್‌ಗೆ ಎಲ್ಲಾ ಪ್ರತಿಭೆಯಿದ್ದೂ ಬಾಯಿಮುಚ್ಚಿ ಕೂತಿರಬೇಕಾದ ದುರ್ಗತಿ. ಭದ್ರಾವತಿಯ ಅಪ್ಪಾಜಿಗೆ ಅನುಭವ ಮತ್ತು ತಾಕತ್ತು ಎರಡೂ ಇದ್ದರೂ ತನ್ನ ಪಕ್ಷದ ಉಸಾಬರಿಗಿಂತಲೂ ಯಡ್ಡಿ ಮನೆಯ ಚಾಕರಿಯೇ ಮಿಗಿಲು. ಮಧು ಬಂಗಾರಪ್ಪ ಇನ್ನೂ ಸೊರಬ ಬಿಟ್ಟು ಬರುತ್ತಿಲ್ಲ. ಬಿ.ಬಿ. ನಿಂಗಯ್ಯ ನಿಜಕ್ಕೂ ಜನತಾ ಪರಿವಾರದ ದಲಿತಾಗ್ರೇಸರರಾಗಿದ್ದ ಮಾಜಿ ಸಭಾಪತಿ ಬಿ. ಮಂಜುನಾಥ್ ಮಟ್ಟಕ್ಕೆ ಬೆಳೆಯುವ ಎಲ್ಲಾ ಲಕ್ಷಣಗಳಿದ್ದೂ ಮುನ್ನುಗ್ಗಲಾರದ ಅಸಹಾಯಕತೆ.

ಮಿಕ್ಕಂತೆ ಆಗಾಗ ಟೀವಿ ಚರ್ಚೆಗಳಲ್ಲಿ ಜೋಕರ್‌ನಂತೆ ಮಾತಾಡಿ ಮರೆಯಾಗುವುದನ್ನೇ ಕಾಯಕ ಮಾಡಿಕೊಂಡ ಅರಸೀಕೆರೆಯ ಶಿವಲಿಂಗೇಗೌಡ, ಹೊಸಕೋಟೆಯ ರಕ್ತ ಪಿಪಾಸು ರಾಜಕಾರಣ ಕೂಸಾದ ಮಾಲೂರಿನ ಮಂಜುನಾಥಗೌಡ, ಪರಮೇಶ್ವರರನ್ನು ಮಣಿಸಿದ ಕೊರಟಗೆರೆಯ ಸುಧಾಕರ್‌ಲಾಲ್ ಬಿಟ್ಟರೆ ಉಳಿದವರೆಲ್ಲ ನೆಲಮಂಗಲದ ಶ್ರೀನಿವಾಸಮೂರ್ತಿ, ಪುಲಿಕೇಶಿ ನಗರ ಅಖಂಡಾ ಶ್ರೀನಿವಾಸಮೂರ್ತಿ, ಶ್ರೀರಂಗಪಟ್ಟಣದ ರಮೇಶ್ ಬಂಡಿ ಸಿದ್ದೇಗೌಡ, ಚಿಕ್ಕನಾಯಕನಹಳ್ಳಿಯ ಸುರೇಶ್‌ಬಾಬು ಥರದ ಕೀಲಿ ಕೊಟ್ಟ ಗೊಂಬೆಗಳೆ.



ಒಬ್ಬ ನಜೀರ್‌ಸಾಬ್, ಒಬ್ಬ ಎಂ.ಪಿ. ಪ್ರಕಾಶ್, ಒಬ್ಬ ಭೈರೇಗೌಡ, ಒಬ್ಬ ಮುದ್ನಾಳ್, ಒಬ್ಬ ಕಾಂತಾ, ಒಬ್ಬ ನಾಗೇಗೌಡ, ಒಬ್ಬ ವೈ.ಕೆ. ರಾಮಯ್ಯನಂಥವರೇಕೆ ಜೆಡಿಎಸ್‌ನಲ್ಲಿ ಕಾಣಿಸುತ್ತಿಲ್ಲ? ಸಿದ್ದರಾಮಯ್ಯ, ಡಾ. ಮಹದೇವ, ಬಿ.ಎಲ್. ಶಂಕರ್, ದೇಶಪಾಂಡೆ, ಬಿ.ಆರ್. ಪಾಟೀಲ್, ವೈಜನಾಥ್ ಪಾಟೀಲ್, ಉಗ್ರಪ್ಪ ಮುಂತಾದ ಸ್ವಂತಿಕೆಯಿದ್ದವರೆಲ್ಲ ಪಕ್ಷ ತೊರೆದು ಹೋದಮೇಲೆ ಉಳಿದಿರುವುದು ಜಮೀರ್, ಚಲುವ, ಬಾಲು, ಮಹೇಶ್ ಥರದ ಡೀಲು ಪಡ್ಡೆಗಳೆ.

ಕನ್ನಡಿಗರ ಪಾರ್ಟಿ!

ತೀರ ಇತ್ತೀಚೆಗೆ ಪಕ್ಷ ತೊರೆದ ಪಿ.ಜಿ.ಆರ್. ಸಿಂಧ್ಯರ ಲೆಕ್ಕವನ್ನೇ ತೆಗೆದುಕೊಂಡರೆ, ಅದು ಅಪ್ಪಮಕ್ಕಳ ಏಕಾಧಿಪತ್ಯದ ವಿರುದ್ಧದ ಆಕ್ರೋಶವಲ್ಲದೆ ಮತ್ತೇನಲ್ಲ. ಜೆಡಿಎಸ್ ಸಾಂಸ್ಥಿಕವಾಗಿ ಏನೇ ರಾಷ್ಟ್ರೀಯ ಪಕ್ಷವೆನಿಸಿಕೊಂಡರೂ ಕನ್ನಡಿಗರ ಪಾಲಿಗದು ಅನಿವಾರ್ಯ ಪ್ರಾದೇಶಿಕ ಪಕ್ಷವೆ. ಬಿಜೆಪಿ ಅಥವಾ ಕಾಂಗ್ರೆಸ್ ಅಧಿಕಾರಕ್ಕೆ ಬಂತೆಂದರೆ, ಗಡ್ಕರಿ, ವೆಂಕಯ್ಯನಾಯ್ಡು, ಮಹಾಜನ್, ಸುಷ್ಮಾಸ್ವರಾಜ್, ಗುಲಾಂನಬಿ ಆಜಾದ್, ವಿಲಾಸ್‌ರಾವ್ ದೇಶಮುಖ್, ಕಮಲ್‌ನಾಥ್ ಥರದ ರಾಷ್ಟ್ರ ನಾಯಕರೇ ಕಾಂಟ್ರಾಕ್ಟು, ರಿಯಲ್ ಎಸ್ಟೇಟ್, ಗಣಿ ಡೀಲುಗಳಿಗೆ ಕೈಹಾಕುತ್ತಾರೆ. ಕನಿಷ್ಠ ದೇವೇಗೌಡರೋ ಅವರ ಮಕ್ಕಳೋ, ಜಮೀರ್, ಚಲುವನಂಥವರೋ ದೋಚಿದರೆಂದರೆ ಸಂಪತ್ತು ಕರ್ನಾಟಕದಿಂದ ಹೊರಹೋಗದೆ ಇಲ್ಲೇ ಉಳಿಯುತ್ತದೆಯಲ್ಲವೆ ಎಂದು ವಿಕಟ ಪ್ರಶ್ನೆ ಹಾಕುವವರೂ ಉಂಟು.

ಇದರ ಹೊರತಾಗ್ಯೂ ಕನ್ನಡಿಗ-ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಯಾವುದೇ ದೆಹಲಿ ಮರ್ಜಿಗೆ ಬೀಳದೆ ದಿಟ್ಟ ನಿಲುವು ತೋರುವ ಅವಕಾಶವಿರುವುದು ಜೆಡಿಎಸ್‌ಗೇ. ಹೆಸರಿಗಷ್ಟೇ ಅದು ಜಾತ್ಯತೀತ ಜನತಾದಳವಾದರೂ ಸ್ವಭಾವತಃ ಕನ್ನಡಿಗರ ಪ್ರಾದೇಶಿಕ ಪಕ್ಷವೆ. ಅದರಲ್ಲೂ ಮೈಸೂರು ಪ್ರಾಂತ್ಯದ ಕನ್ನಡ ಸಂಸ್ಕೃತಿಯ ಆಧಾರಸ್ತಂಭ ಗಳೆಂದೇ ಪರಿಭಾವಿತ ಒಕ್ಕಲಿಗರೇ ಅದರ ಬೆನ್ನೆಲುಬು. ಬಿಜೆಪಿ ಏನೇ ಅಂದರೂ ಅದು ಲಿಂಗಾಯತರ ಪಕ್ಷವಾದ್ದರಿಂದ ಒಕ್ಕಲಿಗರ ಪಾಲಿಗೆ ಉಳಿದಿರುವುದು ದೇವೇಗೌಡರ ಪಾರ್ಟಿಯೆ.


ಇಂಥಾ ಸ್ಥಿತಿಯಲ್ಲಿ ಜೆಡಿಎಸ್ ಎಷ್ಟೊಂದು ಜವಾಬ್ದಾರಿಯಿಂದ ವರ್ತಿಸಬೇಕು? ಹೋಗಲಿ ದೇವೇಗೌಡರಿಗೇನು ಅನುಭವ ಕಮ್ಮಿಯೆ? ಕರ್ನಾಟಕದ ಸಮಸ್ಯೆ ಸಂಕಷ್ಟಗಳೇನು ಹೊಸತೆ?

ದೇವೇಗೌಡರ ಶಕ್ತಿಯ ಜೊತೆಗೇ ಅವರದ್ದೇ ದೌರ್ಬಲ್ಯಗಳ ಮಿತಿಯೂ ಉಲ್ಬಣಿಸಿಕೊಂಡೇ

ಭೂ ಡಕಾಯಿತ ಕುಪೇಂದ್ರರೆಡ್ಡಿ ರಾಜ್ಯಸಭೆಗೆ ನೆಲಕಂಟಕ ಮಲ್ಲಿಕಾರ್ಜುನ ಮೇಲ್ಮನೆಗೆ

ರಾಜ್ಯಸಭೆಗೆ ನಾಮಪತ್ರದ ಹಿಂದಿನ ದಿನದವರೆಗೂ ಕಾಂಗ್ರೆಸ್ಸಿನ ಕಟ್ಟಾಳುವಾಗಿದ್ದ ಪುಟ್ಟಾ ನೆಲಕಂಟಕ ಕುಪೇಂದ್ರರೆಡ್ಡಿ ರಾತ್ರೋರಾತ್ರಿ ಜೆಡಿಎಸ್ ಬೆಂಬಲಗಿಟ್ಟಿಸಿ ರಾಜ್ಯಸಭೆಗೆ ಆಯ್ಕೆಯಾಗಿದ್ದೇ ಪವಾಡ!

ಈ ಪವಾಡವೇನೇ ಇರಲಿ ಅದರ ಬಾಬತ್ತು ಮಾತ್ರ ಐವತ್ತು ಕೋಟಿಗೂ ಕಮ್ಮಿಯಿರಲಿಕ್ಕಿಲ್ಲವೆಂದೇ ಜೆಡಿಎಸ್ ಆಪ್ತವಲಯ ಪಿಸುಗುಡುತ್ತಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ತನ್ನ ಪರಮಾಪ್ತ ನಾಗಭೂಷಣರೆಡ್ಡಿಯನ್ನು ಬೊಮ್ಮನಹಳ್ಳಿಯಿಂದ ಕಾಂಗ್ರೆಸ್ ಟಿಕೆಟ್ಟಿನಿಂದ ಗೆಲ್ಲಿಸಲೆತ್ನಿಸಿದ ಕುಪೇಂದ್ರರೆಡ್ಡಿ ಅದಕ್ಕೂ ಹಿಂದಿನ ಬಾರಿ ತಾನೇ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ. ಹೇಗೆ ಕಾಂಗ್ರೆಸ್ ನಾಯಕರಿಗೆಲ್ಲ ತನ್ನ ನೆಲಗಳ್ಳತನದ ಪಾಪದ ರೊಕ್ಕ ತಿನ್ನಿಸಿದನೋ ಅದೇ ರೀತಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗಲೂ ಬೆಲೆಬಾಳುವ ಸರ್ಕಾರಿ ಭೂಮಿ ಲಪಟಾಯಿಸಿದ್ದ.



ಈಗ ಅದೇ ರಿಯಲ್ ಎಸ್ಟೇಟ್ ಪಾಲುದಾರಿಕೆ ಫಲ ನೀಡಿದೆ. ತಲಾ ಎಮ್ಮೆಲ್ಲೆಗೆ 1 ಕೋಟಿ ಕೊಟ್ಟು ಮಿಕ್ಕಿದ್ದನ್ನು ಅಪ್ಪ ಮಕ್ಕಳ ಉಡಿಗೆ ಹಾಕಿಯೇ ರಾಜ್ಯಸಭೆಯ ಹೊಸ್ತಿಲು ತುಳಿದಿದ್ದಾನೆ ಕುಪೇಂದ್ರರೆಡ್ಡಿ. ಸದ್ಯ ಜೆಡಿಎಸ್ ಧಣಿಗಳ ಪಾಲಿಗಂತೂ ಈತನೇ ಎಟಿಎಂ!

ಈ ಸಾಲಿಗೆ ಸೇರುವ ಮತ್ತೊಬ್ಬ ನೆಲಕಂಟಕನೇ ಮೇಲ್ಮನೆಗೆ ಆಯ್ಕೆಯಾದ ಮಲ್ಲಿಕಾರ್ಜುನ. ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಭೂಮಿ, ರಾಜಾ ಕಾಲುವೆ, ಮೋರಿ, ರಸ್ತೆ ಕೆರೆ, ಗೋಮಾಳ ಯಾವುದನ್ನೂ ಬಿಡದೆ ಗತಿ ಕಾಣಿಸುತ್ತಲೇ ಬಂದ ಮಲ್ಲಿಕಾರ್ಜುನ ಹೇಳಿಕೇಳಿ ಬಿಜೆಪಿ ನಾಯಕ ಯಡ್ಡಿಯ ವಾಕ್‌ಮೇಟ್. ಪ್ರತಿ ಬೆಳಗ್ಗೆ ಯಡ್ಡಿ ಜೊತೆ ವಾಕಿಂಗ್ ಹೊರಟನೆಂದರೆ ಒಂದಲ್ಲಾ ಒಂದು ಡೀಲಿನ ಕುದುರಿಸಿಕೊಂಡೇ ಮನೆ ಸೇರುವ ಆಸಾಮಿ. ಪ್ರಾರಂಭದಲ್ಲಿ ಬಿಡಿಎ ಬ್ರೋಕರಿಕೆ ಮಾಡಿಕೊಂಡಿದ್ದ. ಎಲ್ಲೆಲ್ಲಿ ಬಿಡಿಎ ಲಿಟಿಗೇಷನ್ ಸೊತ್ತಿದೆಯೋ ಅದಕ್ಕೆ ಹೇಗೆ ಗತಿ ಕಾಣಿಸಬೇಕೆಂದು ಕಾರಸ್ತಾನ ಮಾಡಿಯೇ ನೂರಾರು ಕೋಟಿ ದೋಚಿದ ಮಲ್ಲಿಕಾರ್ಜುನ ಅಳಿದುಳಿದ ಬಿಜೆಪಿ ಮತಗಳ ಜೊತೆಗೆ ಹೆಚ್ಚುವರಿ ಜೆಡಿಎಸ್ ಮತಗಳನ್ನೂ ಸಾರಾಸಗಟಾಗಿ ಖರೀದಿಸಿದ್ದ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಾಂತಿನಗರಕ್ಕೆ ಎನ್.ಎ. ಹ್ಯಾರೀಸ್ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿದ್ದ ಇದೇ ಮಲ್ಲಿಕಾರ್ಜುನ ತನ್ನ ಎಲೆಕ್ಷನ್ ಖರ್ಚಿಗೆಂದು ನೂರು ಕೋಟಿ ಸುರಿದೂ ಮತ್ತೆ ಮೇಲ್ಮನೆಗಾಗಿ ಅದರ ದುಪ್ಪಟ್ಟು ಕೋಟಿ ಬಿಚ್ಚುತ್ತಾನೆಂದರೆ, ಎಮ್ಮೆಲ್ಸಿಯಾಗಿ ಇನ್ನೆಷ್ಟು ಸರ್ಕಾರಿ ಭೂಮಿ ಕಬಳಿಸಬಲ್ಲ!

ಒಬ್ಬ ನೆಲಕಂಟಕ ರಾಜ್ಯಸಭೆಗೆ, ಇನ್ನೊಬ್ಬ ಭೂ ದಕಾಯಿತ ಮೇಲ್ಮನೆಗೆ. ಜೆಡಿಎಸ್ ಸೌಭಾಗ್ಯಕ್ಕೆ ಮೇರೆಯುಂಟೆ ಪಾರವುಂಟೆ?

...ಜಾಪುರದ ಘಾತುಕ ವಿಜುಗೌಡನ ದೋಖಾ ಮತ್ತು ಶೆಟ್ಟರ್ ಮನೆಯ ಷಡ್ಯಂತ್ರ

...ನೆಲ್ಲಿಗೆ ತಿಂಗಳ ಹಿಂದೆಯೇ ಬಿಜಾಪುರದ ಗುರುಮ ಘಾತುಕ ವಿಜುಗೌಡ ...ಯ ಜಗದೀಶ್ ಶೆಟ್ಟರ್ ಮನೆಯಲ್ಲಿ ಪ್ರತ್ಯಕ್ಷನಾಗಿದ್ದ. ಹುಟ್ಟಾ ...ಕೋರ, ಶುದ್ಧ ಒರಟ ಮತ್ತು ಯಾರ ಬೆನ್ನಿಗೆ ಯಾವ ಗಳಿಗೆಯಲ್ಲಾದರೂ ...ಬಲ್ಲ ವಿಜುಗೌಡ ಇನ್ನೇನು ಬಿಜೆಪಿಗೆ ವಕ್ಕರಿಸಲಿದ್ದಾನೆಂದೇ ಅನೇಕರು ...ಸಾಕಿದ್ದು ಬೇರೆಯದೇ ಕಾರಸ್ಥಾನವೊಂದರ ತಯಾರಿಯಾಗಿತ್ತು.

...ನಾಗಿ ಹದಿನೈದೇ ದಿನದಲ್ಲಿ ಕುಮಾರಸ್ವಾಮಿಯ ಸೀಡಿ ಸ್ಫೋಟಗೊಂಡಿದೆ. ...ತಃ ವಿಜುಗೌಡನ ಬಿಜೆಪಿ ಸೇರ್ಪಡೆಯ ಪ್ರಯತ್ನವೂ ...ಗೊಂಡಿರಬೇಕು!

ವಿಜುಗೌಡ ಬಸವನ ಬಾಗೇವಾಡಿಯ ಹಾಲಿ ಕಾಂಗ್ರೆಸ್ ಶಾಸಕ. ...ದ ಪಾಟೀಲನ ಖಾಸಾ ತಮ್ಮ. ಅಣ್ಣ ಕಾಂಗ್ರೆಸ್ಸಾದರೆ ತಮ್ಮ ಜೆಡಿಎಸ್ ... ಹಿಡಿದಿದ್ದ. ನಾಮಕಾವಸ್ತೆಗಷ್ಟೇ ಅಣ್ಣತಮ್ಮ ಬೇರೆ ಪಕ್ಷವಾದರೂ ...ರದ ಗಾಂಧಿಚೌಕದ ಲಿಕ್ಕರ್ ಅಡ್ಡೆಯಾದ ಮಿಲನ್ ಬಾರ್ ಮಾಲಿಕತ್ವದ ...ಕ್ಕೆ ಬಂದರೆ ಇಬ್ಬರೂ ಒಂದೇ 'ಪಾರ್ಟಿ'. ಅಣ್ಣತಮ್ಮ ಇಬ್ಬರೂ ...ಒಂದೇ ಎಂ.ಬಿ.ಪಾಟೀಲರ ಭದ್ರಕೋಟೆಯಂತಿದ್ದ ಬಿಎಲ್‌ಡಿ ಶಿಕ್ಷಣ ಸಂಸ್ಥೆಯನ್ನು ಹಿಡಿಯಲು ಹೋದರೆ, ಹಿಡಿಯುವುದಿರಲಿ ಅದರ ಕಾಂಪೌಂಡಿನೊಳಕ್ಕೂ ಕಾಲಿಡಲಾಗಲಿಲ್ಲ.

ಹೀಗಾಗಿ ಅಣ್ಣ ಶಿವಾನಂದ ಪಾಟೀಲ ಬಿಜಾಪುರದ ಪಿಎಲ್‌ಡಿ ಬ್ಯಾಂಕಿಗಷ್ಟೇ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಎಂ.ಬಿ. ಪಾಟೀಲರನ್ನು ಬಬಲೇಶ್ವರದಲ್ಲಿ ನೆಲ ಕಚ್ಚಿಸಲು ವಿಜುಗೌಡ ಏನೆಲ್ಲಾ ಸರ್ಕಸ್ ಮಾಡಿದನಾದರೂ ಮೂರು ಕಾಸಿನ ಫಲ ಕಾಣಲಿಲ್ಲ. ಹೀಗಾಗಿ, ಜೆಡಿಎಸ್‌ಗಿಂತಲೂ ಬಿಜೆಪಿಯೇ ಲಾಭಕರವಾಗಿ ವಿಜುಗೌಡನಿಗೆ ಕಾಣುವುದಕ್ಕೂ ಮತ್ತೊಂದು ಕಾರಣವಿತ್ತು. ಅದು ಜೆಡಿಎಸ್ ತೊರೆದು ಇತ್ತೀಚೆಗಷ್ಟೇ ಬಿಜೆಪಿಗೆ ವಕ್ಕರಿಸಿದ ಬಸನಗೌಡ ಯತ್ನಾಳ್. ಯತ್ನಾಳ್, ಶಿವಾನಂದ ಪಾಟೀಲ್ ಮತ್ತು ವಿಜುಗೌಡ ಹೇಳಿಕೇಳಿ ಕುಲಬಾಂಧವರು. ಮೊನ್ನೆ ಚುನಾವಣೆ ಹೊತ್ತಿಗೆ ಮೋದಿ ಕರ್ನಾಟಕಕ್ಕೆ ಕಾಲಿಟ್ಟಾಗಲೇ ವಿಜುಗೌಡನ ಬಿಜೆಪಿ ಸೇರ್ಪಡೆಯಾಗಬೇಕಿತ್ತು. ಹೇಗೂ ಎಮ್ಮೆಲ್ಲೆ ಆಯ್ಕೆಯಾದೆಯಲ್ಲ, ಅಲ್ಲಿ ತನಗೇನಾದರೂ ಲಕ್ಕು ಕುದುರಬಹುದೇನೋ ಎಂದೇ ಸಮಯ ಸಾಧಿಸಿಕೊಂಡಿದ್ದವನಿಗೆ ಅಚಾನಕ್ಕಾಗಿ ಕುಮಾರಣ್ಣನ ಮಾತಿನ ಟೇಪು ಸಿಕ್ಕಿಬಿಟ್ಟಿದೆ.



ಬಹುಶಃ ವಿಜುಗೌಡನಂಥ ಖತರ್‌ನಾಕ್‌ಗಳನ್ನು ದೂರವಿಡುವುದಕ್ಕೆಂದೇ ಕುಮಾರಸ್ವಾಮಿ ನಿವಾರಣಾ ತಂತ್ರವಾಗಿ 1 ಕೋಟಿಯ ನೆಪವೊಡ್ಡಿರಲಿಕ್ಕೂ ಸಾಕು. ತಾನು ನಾಲಾಯಕ್ಕುಗಳನ್ನು avoid ಮಾಡಲೆಂದೇ ಒಂದು ತಂತ್ರವಾಗಿ ಶಾಸಕರು 1 ಕೋಟಿ ಕೇಳುತ್ತಿದ್ದಾರೆಂದು ಕಥೆ ಕಟ್ಟಿದೆನೆಂದೇ ಹೇಳಿದ್ದರೆ ಅದನ್ನು ಒಪ್ಪಬಹುದಿತ್ತು, ಆದರೆ ನಾನು ವಾಸ್ತವ ಹೇಳಿದ್ದೇನೆಂದು ಹುತಾತ್ಮನ ಪೋಜು ಕೊಡ ಹೊರಟಿದ್ದಾರೆ. ಒಂದೋ ಸ್ವಂತ ಬುದ್ಧಿಯಿರಬೇಕು ಅಥವಾ ಬುದ್ಧಿವಂತರ ಮಾತನ್ನಾದರೂ ಕೇಳಬೇಕು. ಎರಡೂ ಇಲ್ಲವೆಂದರೆ ಹೀಗೆ ಪಜೀತಿಗೆ ತಲೆ ಕೊಡಲೇಬೇಕು!


...ರ ಪ್ರತಿಫಲವೇ ಸದ್ಯದ ಜೆಡಿಎಸ್ ದುರ್ಗತಿ. ...ಆಳ್ವರಂಥವರಿಗಾದ ಅವಮಾನ ...ಕುಮಾರ್, ಉಗ್ರಪ್ಪ ಥರದ ...ವಂತರಿಗೂ ಎದುರಾಯಿತು. ದೇವೇಗೌಡರಿಗೆ ...ಅಧಿಪತಿಯೆಂಬ ಸ್ವಾರ್ಥ. ತನ್ನ ಮಕ್ಕಳ ಮೇಲೆ ...ತ ವ್ಯಾಮೋಹ. ತನ್ನ ಕೌಟುಂಬಿಕ ಪಾರುಪತ್ತೆಗೆ ...ಯೇ ಪಕ್ಷವೂ ಇರಬೇಕೆಂಬ ದುರಾಶೆ.

ಮಕ್ಕಳು ಮಾತ್ರ!


...ಯಕ ಕೊಂಚ ಸ್ವಾರ್ಥಿಯಾದನೆಂದರೆ ಔದಾರ್ಯ ...ಹಿಂದರೆ ಹರಿಯಾಣದ ದೇವಿಲಾಲ್, ಉತ್ತರ ...ದದ ಚರಣ್‌ಸಿಂಗ್, ಮುಲಾಯಂ ಸಿಂಗ್ ...ವ್, ಕರುಣಾನಿಧಿ, ಎನ್‌ಟಿಆರ್ ...ನಾದವರಿಗಾದ ಗತಿಯೇ ದೇವೇಗೌಡರಿಗೂ ...ಯುತ್ತಾ? ಸಿದ್ದು ಹೊರನಡೆದ ಫಲವಾಗಿ ...ರ ಓಟ್ ಬ್ಯಾಂಕ್ ಕೈತಪ್ಪಿತು. ಬೊಮ್ಮಾಯಿ, ...ನಯರೆಡ್ಡಿ, ನಾಗಮಾರಪಲ್ಲಿ ಸಮೇತ ಲಿಂಗಾಯತರ ಓಟುಬ್ಯಾಂಕ್ ಹರಿದು ಹಂಚಿಹೋಯಿತು. ಇನ್ನು ಅಳಿದುಳಿದ ದಲಿತ ಬೆಂಬಲವಂತೂ ಡಾ. ಮಹದೇವಪ್ಪ, ಮಂಜುನಾಥ್ ಸಮೇತವೇ ಕೈತಪ್ಪಿತು. ಮಗ ಮಾಡಿದ ಅನಾಹುತಕ್ಕೆ ಮುಸ್ಲಿಮರೂ ಪೂರ್ತಿ ನಂಬುವ ಸ್ಥಿತಿಯಲ್ಲಿಲ್ಲ. ಒಕ್ಕಲಿಗರ ಪಾರ್ಟಿ ಎಂಬ ಹಣೆಪಟ್ಟಿಯಿಂದಾಗಿ ಈಡಿಗ, ಬಲಿಜ, ನಾಯಕ, ಬೆಸ್ತ, ವಾಲ್ಮೀಕಿ, ಬೋವಿಗಳೂ ನಂಬುತ್ತಿಲ್ಲ. ಅಪ್ಪ ಮಕ್ಕಳ ಪಕ್ಷವೆಂಬ ಮೂದಲಿಕೆಯ ಹೊರತಾಗಿ ಜೆಡಿಎಸ್ ಹೆಗ್ಗಳಿಕೆ ಅಂತ ಉಳಿದಿರುವುದಾದರೂ ಏನು?

ಇಂಥಾ ಸ್ಥಿತಿಯಲ್ಲಿ ಪಕ್ಷದ ಚುಕ್ಕಾಣಿ ಹಿಡಿದ ಕುಮಾರಸ್ವಾಮಿಯ ದುರ್ಗತಿ ಹೇಗಿದೆಯೆಂದರೆ ತನ್ನದೇ ಪಕ್ಷದ ಪ್ರತಿ ಶಾಸಕನನ್ನು ಉಳಿಸಿಕೊಳ್ಳಬೇಕೆಂದರೂ ಅತ್ತು ಗೋಗರೆಯಬೇಕು, ದಮ್ಮಯ್ಯ ಗುಡ್ಡೆ ಹಾಕಬೇಕು. ಪಕ್ಷವೊಂದು ಪ್ರಜಾತಾಂತ್ರಿಕವಾಗಿ ನಡೆದಾಗ ಅದರಲ್ಲಿ ಪ್ರಜಾಪ್ರಭುತ್ವವಿದ್ದಾಗ ಈ ಥರದ ದುರ್ಗತಿ ಬರುವುದಿಲ್ಲ. ಸದ್ಯ ಜೆಡಿಎಸ್ ಪಾಲಿಗೆ ಅತೀ ದೊಡ್ಡ ಭಿನ್ನಮತೀಯ ಗುಂಪ್ಯಾವುದು ಗೊತ್ತೆ?

ಕುಮಾರಣ್ಣನ ಖಾಸಾ ಅಣ್ಣ ರೇವಣ್ಣ ಅವರ ಪತ್ನಿ ಭವಾನಿ ಮತ್ತು ಮಗ ಪ್ರಜ್ವಲ್‌ಗೌಡ. ಇದಕ್ಕೆ ತೀರ ವ್ಯತಿರಿಕ್ತವಾಗಿರುವುದು ಕುಮಾರಣ್ಣ ಅವರ ಪತ್ನಿ ಅನೀತಕ್ಕ ಮತ್ತು ನಿಖಿಲ್‌ಗೌಡ. ಕಳೆದ ಚುನಾವಣೆಯಲ್ಲೇ ತನಗೆ ಕೆ.ಆರ್. ಪೇಟೆಯ ಟಿಕೆಟ್ ನೀಡುವಂತೆ ಭವಾನಿ ರೇವಣ್ಣ ಹಠಕ್ಕೆ ಬಿದ್ದಾಗ ಅದನ್ನು ಖುದ್ದು ದೇವೇಗೌಡರೇ ಮನವೊಲಿಸಿ ತಡೆಗಟ್ಟಬೇಕಾಯಿತು. ಈಗ ಮಗ ಪ್ರಜ್ವಲ್‌ಗೌಡ ಲಾಟ್‌ಬೂಟ್ ಇಂಗ್ಲಿಷ್ ಮಿಶ್ರಿತ ಡೈಲಾಗ್ ಹೊಡೆಯುತ್ತಲೇ ಖಾದಿ ತೊಟ್ಟು ಹೊಳೆನರಸೀಪುರದ ಅಖಾಡಕ್ಕಿಳಿದಿದ್ದಾನೆ. ಇನ್ನು ಕುಮಾರಣ್ಣನ ಮಗ ನಿಖಿಲ್‌ಗೌಡ ಸುಮ್ಮನಿರುತ್ತಾನಾ?









ಕುದುರೆ ವ್ಯವಹಾರ!

ಚನ್ನಪಟ್ಟಣಕ್ಕೆ ನಾನೇ ಉತ್ತರಾಧಿಕಾರಿ. ಇವತ್ತಲ್ಲ ನಾಳೆ ನಾನೇ ಸಿಎಂ ಕ್ಯಾಂಡಿಡೇಟು ಎಂದು ಮಾತಾಡುವ ಮಟ್ಟಕ್ಕೆ ನಿಖಿಲ್‌ಗೌಡನ ಬಾಲಚೇಷ್ಟೆ ಶುರುವಾಗಿದೆ. ಪಕ್ಷವೊಂದು 10 ವರ್ಷಗಳ ಸುದೀರ್ಘ ಕಾಲದ ತನಕ ಅಧಿಕಾರವನ್ನೇ ಕಾಣದೆ ಹೋದಾಗ ಸಹಜವಾಗೇ ಅದಕ್ಕೆ ಸಂಪನ್ಮೂಲದ ಕೊರತೆ ಕಾಡುತ್ತದೆ. ಅಂತಾ ಸ್ಥಿತಿಯಲ್ಲಿ ಪಕ್ಷವನ್ನು ಉಳಿಸುವ ಎರಡೇ ಸಾಧನೆಗಳೆಂದರೆ ಒಂದು ಸಿದ್ಧಾಂತ, ಎರಡನೆಯದ್ದು ಹೋರಾಟ. ತಮಾಷೆಯೆಂದರೆ ಜೆಡಿಎಸ್ ಪಾಲಿಗೆ ಕೌಟುಂಬಿಕ ಹಿತಾಸಕ್ತಿಯೇ ಸಿದ್ಧಾಂತವಾದರೆ ತಮ್ಮ ಅಸ್ತಿತ್ವಕ್ಕಾಗಿ ಕುಟುಂಬದ ಆಂತರಿಕ ಘರ್ಷಣೆಯೇ ಹೋರಾಟವಾಗಿ ಬಿಟ್ಟಿದೆ!

ಮಗ ರೇವಣ್ಣ, ಸೊಸೆ ಭವಾನಿ, ಮೊಮ್ಮಗ ಪ್ರಜ್ವಲ್‌ಗೌಡ ಮತ್ತವರ ಬಂಧುಬಳಗವನ್ನು ಓಲೈಸಿಕೊಂಡಿದ್ದೇ ಇನ್ನೊಂಬದೆ ಕುಮಾರಸ್ವಾಮಿ, ಅನೀತಕ್ಕ ಪಾಳಯವನ್ನು ಸಂತೈಸಬೇಕು. ಹೀಗಿರುವಾಗ ಪಕ್ಷದ ಖರ್ಚು, ಸಂಘಟನೆ, ಕಾರ್ಯಕರ್ತರ ಕಷ್ಟ ಸುಖಗಳಿಗೆಲ್ಲ ಒಂದಲ್ಲ ಒಂದು ಆದಾಯದ ಮೂಲ ಬೇಕಲ್ಲವೆ?

ಅದಕ್ಕೆಂದು ಜೆಡಿಎಸ್ ಕಂಡುಕೊಂಡ ಉತ್ಪತ್ತಿ ಮೂಲವೇ ಶಾಸಕರ ಬಿಕರಿ. ಹಿಂದೆ ತಮಿಳುನಾಡು ಮೂಲದ ಕುದುರೆ ಧಣಿ ಎಂ.ಎ.ಎಂ. ರಾಮಸ್ವಾಮಿಯನ್ನು ರಾಜ್ಯಸಭೆಗೆ ಗೆಲ್ಲಿಸಿ ಹಲವು ಕೋಟಿ ವೆಚ್ಚದ ವ್ಯವಹಾರ ಕುದುರಿಸಬೇಕಾಗಿ ಬಂದಿತ್ತು. ಈ ಬಾರಿಯ ರಾಜ್ಯಸಭೆ ಮತ್ತು ವಿಧಾನಪರಿಷತ್ ಚುನಾವಣೆಯಲ್ಲಿ ನಡೆದದ್ದು ಜೆಡಿಎಸ್‌ನ ಇದೇ ಪ್ರವೃತ್ತಿಯ ನಿರ್ಲಜ್ಜತನ. ಇದಕ್ಕೂ ಮುನ್ನ ನಡೆದ ಲೋಕಸಭಾ ಚುನಾವಣೆಯೊಂದೇ ಜೆಡಿಎಸ್‌ನ ದುರ್ಗತಿಯನ್ನು ಜಗಜ್ಜಾಹೀರುಗೊಳಿಸಿತ್ತು. ಯಾವ ಬಿಜೆಪಿಯ ಮಾಜಿ ಮಂತ್ರಿ ಭಟ್ಕಳದ ಶಿವಾನಂದ ನಾಯ್ಕನನ್ನು ಮಧು ಬಂಗಾರಪ್ಪನ ಮಾತುಕೇಳಿ ಕುಮಾರಣ್ಣ ಜೆಡಿಎಸ್ ಟಿಕೆಟ್ ಕೊಟ್ಟು ಉತ್ತರ ಕನ್ನಡಕ್ಕೆ ಅಭ್ಯರ್ಥಿಯನ್ನಾಗಿಸಿದರೋ ಅಷ್ಟೇ ಲಜ್ಜೆಗೆಟ್ಟ ಶಿವಾನಂದ ನಾಯ್ಕ ತನ್ನಂತಾನೇ ಬಿಜೆಪಿಗೆ ಮಾರಿಕೊಂಡ. ಚುನಾವಣೆ ಶುರುವಾಗುವುದಕ್ಕೂ ಮೊದಲೇ ರಣಹೇಡಿಯಂತೆ ಬಿಜೆಪಿಗೆ ಶರಣಾಗಿ ವಾಪಸ್ಸು ಕುಮಾರಣ್ಣನ ಮೇಲೇ ಪ್ರತ್ಯಾರೋಪಕ್ಕಿಳಿದ.

ಅಷ್ಟಕ್ಕೂ ಶಿವಾನಂದ ನಾಯ್ಕ ಜೆಡಿಎಸ್ ನಾಯಕತ್ವವನ್ನು ದೂರಿದ್ದು ತನಗೆ ಚುನಾವಣಾ ಖರ್ಚಿಗೆ ಕೇಳಿದಷ್ಟು ದುಡ್ಡು ಕೊಡುತ್ತಿಲ್ಲ ಎಂದು!

ಇದರರ್ಥ ಟಿಕೆಟ್ ಕೊಟ್ಟಿದ್ದೂ ಅಲ್ಲದೆ ಎಲೆಕ್ಷನ್ ಖರ್ಚಿಗೂ ಪಾರ್ಟಿಯೇ ದುಡ್ಡು ಕೊಡಬೇಕು!

ಟಿಕೆಟ್ ವ್ಯಾಪಾರ!

ಅಂದರೆ ಈತನಕ ಭಟ್ಕಳದಲ್ಲಿ ಬಿಜೆಪಿಯಿಂದೆ ಗೆದ್ದು ಬರುತ್ತಿದ್ದ ಶಿವಾನಂದ ನಾಯ್ಕನಿಗೆ ಆತನ ಚುನಾವಣಾ ಖರ್ಚನ್ನೆಲ್ಲ ಬಿಜೆಪಿಯೇ ಭರಿಸುತ್ತಿತ್ತೆ? ಪಕ್ಷನಿಷ್ಠೆ, ಸಿದ್ಧಾಂತ, ಸಂಘಟನೆ ಎಂಬ ಶಬ್ದಗಳ ಅರ್ಥವೇ ಗೊತ್ತಿಲ್ಲದ ಬೇರೆ ಬೇರೆ ಪಕ್ಷಗಳ ಅತೃಪ್ತರನ್ನು ಹಿಡಿತಂದು ಅಂಥವರಿಗೆ ತನ್ನ ಪಕ್ಷದ ಟಿಕೆಟ್ ಕೊಟ್ಟು ಸಮಯಸಾಧಕ ರಾಜಕಾರಣಕ್ಕಿಳಿದರೆ ಏನಾಗುತ್ತದೆ ಎಂಬುದಕ್ಕೆ ಇದೇ ಉದಾಹರಣೆ. ಇದಕ್ಕಿಂತ ದೊಡ್ಡ ಪಜೀತಿಯಾಗಿದ್ದು ಬೆಳಗಾವಿಯಲ್ಲಿ. ಶ್ರೀಮಂತನೆಂಬ ಒಂದೇ ಕಾರಣಕ್ಕೆ ಯಾಶೀರ್ ಭಾಗವಾನ್ ಎಂಬ ಮುಸ್ಲಿಂ ಪುಢಾರಿಯನ್ನು ಕರೆತಂದು ಟಿಕೆಟ್ ಕೊಟ್ಟಿದ್ದೂ ಅಲ್ಲದೆ 2 ಕೋಟಿಯಷ್ಟು ಖರ್ಚಿಗೂ ಕೊಟ್ಟಾಗಿತ್ತು. ಆದರೆ ಭಾಗವಾನ್ ಕಾಂಗ್ರೆಸ್ಸಿನ ಲಕ್ಷ್ಮಿ ಹೆಬ್ಬಾಳ್‌ಕರ್‌ಗೆ 5 ಕೋಟಿಗೆ ಬಿಕರಿಯಾದ.

ಇಲ್ಲೂ ಅಷ್ಟೇ; ಭಾಗವಾನ್ ತನಗೆ ಕುಮಾರಸ್ವಾಮಿ ಖರ್ಚಿಗೆ ದುಡ್ಡು ಕೊಡಲಿಲ್ಲ ಎಂದೇ ಮಾನಗೆಟ್ಟು ಬೊಬ್ಬೆಯಿಟ್ಟಿದ್ದ. ದುಡ್ಡೂ ಗೋತಾ ಪಕ್ಷದ ಮಾನಕ್ಕೂ ಲಾತಾ. ಬಹುಶಃ ಇದೇ ಕಾರಣಕ್ಕಿರಬೇಕು ಪ್ರಭಾಕರ ರೆಡ್ಡಿ ಎಂಬ ರಿಯಲ್ ಎಸ್ಟೇಟ್ ವಂಚಕನೊಬ್ಬ ಬೆಂಗಳೂರು ಗ್ರಾಮಾಂತರದ ಜೆಡಿಎಸ್ ಟಿಕೆಟ್ ಖರೀದಿಸಿ ಡೀಕೆ ಸುರೇಶನ ವಿರುದ್ಧ ತೊಡೆತಟ್ಟುವಂತಾಯ್ತು. ಕೋಲಾರದಲ್ಲಿ ಕೆ.ಹೆಚ್. ಮುನಿಯಪ್ಪ ವಿರುದ್ಧ ಜೆಡಿಎಸ್ ಅಭ್ಯರ್ಥಿಯಾದ ಕೇಶವ ಹೇಳಿಕೇಳಿ ನಟೋರಿಯಸ್ ರಿಯಲ್ ಎಸ್ಟೇಟ್ ವಂಚಕನೆ. ದುಡ್ಡು ಕೊಟ್ಟವರಿಗೆಲ್ಲ ಪಕ್ಷದ ಟಿಕೆಟ್ ಅದೇ ದುಡ್ಡನ್ನು ತಂದು ಪಕ್ಷದ ಟಿಕೆಟ್ಟಿನ ಮೇಲೆ ನಿಂತವರಿಗೆ ಹಂಚಿದ. ಅಂತಿಮವಾಗಿ ಬೀದಿಪಾಲು ಮಾಡಿದ್ದು ಜೆಡಿಎಸ್ ಮತ್ತು ದೇವೇಗೌಡರ ಮಾನವನ್ನೇ!

ಪಾಳೇಗಾರಿ ಮನಸ್ಥಿತಿ, ಕೌಟುಂಬಿಕ ವ್ಯಾಮೋಹ, ಆದರ್ಶಹೀನ ವ್ಯವಸ್ಥೆ ಮತ್ತು ಹೋರಾಟ ವಿಹೀನ ರಾಜಕಾರಣ ಅಂತಿಮವಾಗಿ ಜೆಡಿಎಸ್‌ನಂಥ ಕನ್ನಡಿಗರ ಶಕ್ತಿ ಕೇಂದ್ರವನ್ನೇ ಗೆದ್ದಲಾಗಿ ಕಬಳಿಸುತ್ತಿದೆ. ದುಡ್ಡೇ ಮುಖ್ಯವಾದರೆ ಅದನ್ನು ದುಡ್ಡೇ ನಾಮಾವಶೇಷಗೊಳಿಸುತ್ತದೆ. ಕುಮಾರಣ್ಣ ಏನೋ ಪಾಠ ಕಲಿಯಲಾರ ನಿಜ, ಆದರೆ ದೇವೇಗೌಡರಿಗೇನಾಗಿದೆ? ವೃದ್ಧಾಪ್ಯವೋ, ಅನಾರೋಗ್ಯವೋ, ವೈರಾಗ್ಯವೋ?

ಕನಿಷ್ಠ ಆ ದೇವರಾದರೂ ಜೆಡಿಎಸ್ ಅನ್ನು ಕಾಪಾಡಬಾರದೆ?

● ರಾ. ಸೋಮನಾಥ್

ಶರವಣನ ಲುಂಗಿ ಡ್ಯಾನ್ಸ್!



ಕನ್ನಡ ತಾಯಿಯ ಸೌಭಾಗ್ಯವೋ ಜೆಡಿಎಸ್ ಕಾರ್ಯಕರ್ತರ ಪುಣ್ಯದ ಫಲವೋ ಗೊತ್ತಿಲ್ಲ, ಸಾಯಿಗೋಲ್ಡ್ ಶರವಣನೂ ಈಗ ಗೌರವಾನ್ವಿತ ವಿಧಾನ ಪರಿಷತ್ ಸದಸ್ಯ ಅರ್ಥಾತ್ ಎಮ್ಮೆಲ್ಸಿ!

ಥೇಟು ನೀಗ್ರೋ ಜಾನಿಯ ತಮ್ಮನಂತೆ ತಮಿಳುನಾಡಿನಿಂದ ಮೊನ್ನೆಯಷ್ಟೇ ರೈಲಿಳಿದ ಲುಂಗಿ ವೀರನಂತೆ ಕಾಣುವ ಶರವಣ ಅದ್ಯಾವ ಪುರುಷಾರ್ಥಕ್ಕೆ ದೇವೇಗೌಡರ ಕುಟುಂಬಕ್ಕೆ ಗಂಟು ಬಿದ್ದನೋ ಬಲ್ಲವರಿಲ್ಲ. ಕನಿಷ್ಠ ಮಣ್ಣಿನ ಮಕ್ಕಳ ಅನ್ನದ ಋಣಕ್ಕಾದರೂ ನೆಟ್ಟಗೆ ಕನ್ನಡ ಮಾತಾಡುವುದನ್ನು ಕಲಿಯಬೇಕಿತ್ತು. ತಾನು ದೇವೇಗೌಡರ ಫ್ಯಾಮಿಲಿ ಬಿಜಿನೆಸ್ ಪಾರ್ಟನರ್ ಎಂದುಕೊಂಡೇ ಗೋಲ್ಡ್ ಬಿಜಿನೆಸ್ ಶುರು ಹಚ್ಚಿಕೊಂಡ. ಪ್ರಾರಂಭದಲ್ಲಿ ಬಸವನಗುಡಿಯ ಡಿವಿಜಿ ರಸ್ತೆಯಲ್ಲಿದ್ದ ಸಾಯಿಗೋಲ್ಡ್ ಪ್ಯಾಲೇಸ್ ಇಲ್ಲಿಗೆ 2 ವರ್ಷದ ಹಿಂದೆ ಪದ್ಮನಾಭನಗರದಲ್ಲಿ ...ಂದು ಶಾಪಿಯಾದಾಗಲೇ ವಿಚಿತ್ರ ವದಂತಿಯೊಂದು ತೇಲಿಬಂತು.

...ದು ದೇವೇಗೌಡರ ಮಗಳು ಶೈಲಜಾರ ಬಂಡವಾಳದಲ್ಲಿ ಶರವಣ ಹೆಸರಲ್ಲಿ ಶುರುವಾದ ಮಳಿಗೆ? ...ಮತ್ತೊಂದು ರೂಮರ್ ಪ್ರಕಾರ ಗೌಡರ ಫ್ಯಾಮಿಲಿಯ ಕೋಟಿಗಟ್ಟಲೆ ನಿಧಿ ಶರವಣನ ಸಾಯಿಗೋಲ್ಡಿನಲ್ಲಿ ...ಪ್ರಸನ್ನವಾಗಿ ಚಾಲ್ತಿಗೆ ಬಂದಿತ್ತು ಮತ್ತು ಹಾಕಿದ ಬಂಡವಾಳಕ್ಕೆ ಎಲ್ಲಿ ಶರವಣ ಕೈಎತ್ತಿ ಬಿಡುತ್ತಾನೋ ಎಂಬ ...ನ ಗೌಡರ ಕುಟುಂಬ ಈಡಾಗಿತ್ತು!

...ಥ ಎಷ್ಟು ಕುಟೋದ್ಯಕ್ಕೂ ತೆರೆ ಬಿದ್ದಂತೆ ಶರವಣ ಈಗ ಎಮ್ಮೆಲ್ಸಿಯಾಗಿದ್ದಾನೆ. ಕನ್ನಡ ಗೊತ್ತಾ ಎಂದು ಯಾರೇ ... [illegible] ಕನ್ನಡ ಶೈಲಿಯಲ್ಲಿ ತಮಿಳು ಮಿಶ್ರಿತ ಡೈಲಾಗ್ ಹೊಡೆಯುತ್ತಾನೆ. ಕಾವೇರಿ ನೀರು ಕುಡಿದು ... [illegible], ಅಷ್ಟದ ಋಣಕ್ಕೂ ನಾಡಿನ ಸಮಸ್ಯೆ ಬೇಕಿಲ್ಲ, ಈತನ ಯಲಹಂಕದ ಗೆಸ್ಟ್‌ಹೌಸ್ ... [illegible] ರಂಗೇರುತ್ತದೆ. ಬಹುಶಃ ಇಂಥ ಮುಸ್ಸಿ-ಕುಸ್ಸಿ ಶೋಕಿಯನ್ನೇ ತನ್ನ ದಂಧೆ ಮಾಡಿಕೊಂಡ ಶರವಣ ... ರಾಜಕಾರಣಕ್ಕೆ ಬಂದುಕೊಂಡರೆ ಗತಿಯೇನು?


... [illegible] ಎಮ್ಮೆಲ್ಸಿ ಆಗಿಬಿಟ್ಟೆಲ್ಲಾ' ಎಂದು ಯಾರೋ ಕೇಳಿದ್ದಕ್ಕೆ 'ಕೊಟ್ಟಿಲ್ವಾ ಮತ್ತೆ 20 ಕೋಟಿ...?' ... [illegible] ಶರವಣ. ಎಂಥಾ ದುರ್ಗತಿ ಬಂತು ಜೆಡಿಎಸ್‌ಗೆ?


ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಅಂಬಿ ಹಗರಣ ಬಯಲಿಗೆಳೆದ

ದಕ್ಷ ಅಧಿಕಾರಿ ಎತ್ತಂಗಡಿ!



ಅಮರಾವತಿ ಚಂದ್ರಶೇಖರ್




ವಿದ್ಯಾನಾಗೇಂದ್ರ

'ಮಂಡ್ಯದಲ್ಲಿ ದಕ್ಷ ಅಧಿಕಾರಿಗಳಿಗೆ ಜಾಗವಿಲ್ಲ, ಭ್ರಷ್ಟರಿಗೆ ಮಾತ್ರ' ಎಂಬ ಸಂದೇಶವನ್ನು ಸ್ವತಃ ಅಂಬಿಯೇ ರವಾನಿಸಿದ್ದಾರೆ. ರಿಯಲ್ ಎಸ್ಟೇಟ್ ದಂಧೆಯ ತನ್ನ ಹಿಂಬಾಲಕರ ಮಾತು ಕೇಳಿಕೊಂಡು ಮತ್ತು ಸೈಟು ಹುರಾಣಗಳನ್ನು ಮುಚ್ಚಿಕೊಳ್ಳಲು ವಸತಿ ಸಚಿವ ಅಂಬರೀಷ್ ಮಾಡಿದ ಘನಂದಾರಿ ಕೆಲಸವೆಂದರೆ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಗರಣಗಳನ್ನೆಲ್ಲಾ ದಾಖಲೆ ಸಮೇತ ಹೊರಗೆಳೆಯುತ್ತಿದ್ದ ದಕ್ಷ ಆಯುಕ್ತ ಕೆ.ಮಥಾಯಿಯವರನ್ನೇ ಬೀದರ್‌ಗೆ ಎತ್ತಂಗಡಿ ಮಾಡಿಸಿದ್ದು. ಮಂಡ್ಯದಲ್ಲಿ ಇಷ್ಟು ದಿನ ರಾಜಕೀಯ ಪಕ್ಷಗಳ ಸಿಂಡಿಕೇಟು, ಹೆಚ್ಚೆಂದರೆ ಬಣಗಳ ಸಿಂಡಿಕೇಟುಗಳಷ್ಟೆ ಕಾರ್ಯಗತವಾಗುತ್ತಿದ್ದವು. ಆದರೆ ಈ ಸಲ ಒಬ್ಬ ದಕ್ಷ ಅಧಿಕಾರಿಯನ್ನು ಮಂಡ್ಯದಿಂದ ಓಡಿಸಲು ಪಕ್ಷಾತೀತ ಭ್ರಷ್ಟರ ಸಿಂಡಿಕೇಟ್ ಬೀದಿಗಿಳಿದು ಒತ್ತಾಯಿಸಿದ್ದು ಪ್ರಜಾತಂತ್ರದ ದುರಂತವೇ ಸರಿ.

ಕಳೆದ 2000 ರಿಂದ 2012ರವರೆಗೆ ಮುಡಾ ಹಂಚಿರುವ ಅಷ್ಟೂ ನಿವೇಶನಗಳು ಅಕ್ರಮ ಎಂದು ಮುಡಾ ಆಯುಕ್ತ ಕೆ.ಮಥಾಯಿ ಸರ್ಕಾರಕ್ಕೆ 670 ಪುಟಗಳ ವರದಿ ನೀಡಿದ್ದರು. ಸರ್ಕಾರ ಕೂಡ ಸಿಬಿಐ ತನಿಖೆಗೆ ಆದೇಶಿಸಿದೆ. 'ರೆಬಲ್ ಸ್ಟಾರ್' ಅಂಬಿ ಮೊದಲ್ಗೊಂಡು ಘಟಾನುಘಟಿಗಳಾದ ಚೆಲುವರಾಯಸ್ವಾಮಿ, ಸಂಸದ ಸಿ.ಎಸ್. ಪುಟ್ಟರಾಜು, ರಮೇಶ್‌ಬಾಬು ಬಂಡಿಸಿದ್ದೇಗೌಡ, ಎಂ. ಶ್ರೀನಿವಾಸ್, ಅಮರಾವತಿ ಚಂದ್ರಶೇಖರ್ ಮೊದಲಾದವರೆಲ್ಲ ತನಿಖೆಯ ಉರುಳಿಗೆ ಕತ್ತು ಕೊಡಬೇಕಾಗುತ್ತದೆ. ಅದಕ್ಕೆ ಬೇಕಾದ ಎಲ್ಲಾ ತಾಲೀಮನ್ನೂ ಆಯುಕ್ತ ಕೆ.ಮಥಾಯ್ ಮಾಡಿಟ್ಟಿದ್ದಾರೆ. ಮುಡಾ ಇಂಜಿನಿಯರ್ ತಮ್ಮಣ್ಣನಿಂದ 8.7.2014ರಂದು ಮಂಡ್ಯದ ಪಶ್ಚಿಮ ಠಾಣೆಯಲ್ಲಿ ಈ ಕುರಿತು ದೂರು ದಾಖಲಾಗುವಂತೆ ನೋಡಿಕೊಂಡ ಮಥಾಯ್ ತಮ್ಮ ವರ್ಗಾವಣೆಯ ಕೊನೆಯ ದಿನವೂ ಭ್ರಷ್ಟರಿಗೆ ಸರಿಯಾದ ಗುದ್ದು ನೀಡಿಯೇ ಹೋಗಿದ್ದಾರೆ. ಒಂದೊಮ್ಮೆ ಮಥಾಯ್ ಇಲ್ಲೇ ಉಳಿದರೆ ತಮಗೆ ಉಳಿಗಾಲವಿಲ್ಲ ಎಂಬುದನ್ನರಿತೇ ಅಂಬಿ ಟೀಮು ಇದ್ದಬದ್ದ ಪ್ರಭಾವಗಳನ್ನೆಲ್ಲ ಬಳಸಿ ನಗರಾಭಿವೃದ್ಧಿ ಸಚಿವ ವಿನಯ್ ಕುಮಾರ್ ಸೊರಕೆ ಮೇಲೆ ಒತ್ತಡ ತಂದು ಮಥಾಯ್‌ರನ್ನು ಮಂಡ್ಯದಿಂದ ಹೊರಗಟ್ಟಿದ್ದಾರೆ. ಹಾಗಂತ ಭ್ರಷ್ಟರು ನಿಟ್ಟುಸಿರು ಬಿಡುವಂತೇನೂ ಇಲ್ಲ. ಯಾಕೆಂದರೆ ಪಶ್ಚಿಮ ಪೊಲೀಸ್ ಠಾಣೆಯಲ್ಲಿ 10 ಮಂದಿ ಆಯುಕ್ತರು ಸೇರಿದಂತೆ 12 ಮಂದಿ ನೌಕರರ ವಿರುದ್ಧ ಐಪಿಸಿ ಕಲಂ 406, 409, 420, ಜ/ತೆ 149 ರಡಿ ಎಫ್‌ಐಆರ್ ದಾಖಲಾಗಿದೆ. ಆ ಪ್ರಕರಣವನ್ನು ಸ್ವತಃ ಸಿಬಿಐ ಕೈಗೆತ್ತಿಕೊಳ್ಳುವುದರಿಂದ ಕುಣಿಕೆಯಿಂದ ಅಷ್ಟು ಸಲೀಸಾಗಿ ನುಣುಚಿಕೊಳ್ಳಲಾಗದು.

ಅಕ್ರಮದ ಅವಧಿಯಲ್ಲಿ ಮುಡಾ ಆಯುಕ್ತರಾಗಿದ್ದ ಟಿ.ಶಾಮಯ್ಯ, ಅಬ್ದುಲ್ ಖಯ್ಯಾಂ, ಮಂಜುಳ, ಡಿ.ಹೆಚ್.ರಾಯ, ಸ್ವಾಮಿ, ಕೆಂಪಹನುಮಯ್ಯ, ಭರತರಾಜಯ್ಯ, ಸದಾಶಿವಪ್ಪ, ವೀಣಾ, ಡಿ.ಉಪೇಂದ್ರನಾಯಕ್, ಟಿ.ನಿಸಾರ್ ಅಹ್ಮದ್ ಬಂಧನದ ಭೀತಿ ಎದುರಿಸುತ್ತಿದ್ದಾರೆ. ಆಯುಕ್ತನಾಗಿದ್ದ ಸದಾಶಿವಪ್ಪ ಮುಡಾದಲ್ಲಿ ಮಾಡಿಕೊಂಡ ಅಕ್ರಮ ಸೈಟುಗಳಿಂದಲೇ ಕೋಟಿ ಕೋಟಿ ತೂಗುತ್ತಾನೆ. ಎಇಇ ನಾಗರಾಜು ಕಬಳಿಸಿರುವ 2 ಸೈಟುಗಳ ಮೊತ್ತವೇ ಲಕ್ಷಾಂತರ ರೂಪಾಯಿಗಳಾಗುತ್ತದೆ. ಇನ್ನು ಮುಡಾದಲ್ಲಿ ಅಕೌಂಟೆಂಟ್ ಆಗಿರುವ ನಾಗರಾಜ ಕಾರಸವಾಡಿ ರಸ್ತೆಯ ಹೌಸಿಂಗ್ ಬೋರ್ಡ್ ಬಳಿ ಕಟ್ಟಿರುವ ಭವ್ಯ ಬಂಗಲೆಯೇ ಕೋಟಿ ದಾಟುತ್ತದೆಂದರೆ ಮುಡಾ ಆಯುಕ್ತರಾಗಿದ್ದವರು ಅದಿನ್ನೆಷ್ಟು ಕೊಳ್ಳೆ ಹೊಡೆದಿರಬಹುದು. ಮತ್ತೊಬ್ಬ ಮುಡಾ ಆಯುಕ್ತ ಶಿವರಾಂ ಸೈಟಿಗಾಗಿ ಜನ ಕಟ್ಟಿದ ಹಣದಲ್ಲೇ 5 ಕೋಟಿ ರೂಗಳನ್ನು ಕಿಬ್ಬಳ್ಳಿ ಆನಂದನ ಜೊತೆ ಸೇರಿ ನುಂಗಿ ಕೊನೆಗೆ ತಾನೇ ದೂರು ನೀಡಿ ಅರೆಸ್ಟಾಗಿ ಕಂಬಿ ಎಣಿಸಿ ಹೊರಬಂದಿದ್ದು ಇನ್ನು ಹಸಿಹಸಿಯಾಗೇ ಇದೆ.

ಮುಡಾ ನುಂಗಾಟ

ಆ ಹಳೆ ಹಗರಣದ ಗೂಡಾಗಿದ್ದ ಮಂಡ್ಯ ಉಳ್ಳವರ ಪಾಲಿನ ಸ್ವರ್ಗವಾಗಿತ್ತು, ಆದರೆ ಅದಕ್ಕೊಂದು ಮುಕ್ತಿ ದೊರೆತದ್ದೇ ಎಂಟು ತಿಂಗಳ ಹಿಂದೆ ಕೆ. ಮಥಾಯ್ ಎಂಬ ದಕ್ಷ ಅಧಿಕಾರಿ ಆಯುಕ್ತನಾಗಿ ಅಧಿಕಾರ ವಹಿಸಿಕೊಂಡ ಗಳಿಗೆಯಿಂದ. 2002ರಿಂದ 2012ರವರೆಗೆ ಹಂಚಿರುವ ಎಲ್ಲಾ 1821 ಸೈಟುಗಳು ಕೂಡ ಅಕ್ರಮವಾದವು ಎಂಬ ಕುರಿತು ಸಾಕ್ಷಿ ಸಮೇತ ಬರೋಬ್ಬರಿ 670 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದಾಗಲೆ ಭ್ರಷ್ಟರ ಎದೆಯಲ್ಲಿ ಸಣ್ಣಗೆ ನಡುಕ ಶುರುವಾಗಿತ್ತು. ಅಂಬರೀಶ್ ಕೂಡ ಮುಡಾದಿಂದ ಅಕ್ರಮವಾಗಿ 50x80 ಅಳತೆಯ ನಿವೇಶನ ಪಡೆದುದರ ಬಗ್ಗೆ ಆ ವರದಿಯಲ್ಲಿ ಮಥಾಯಿ ಪ್ರಸ್ತಾಪಿಸಿದ್ದರು.

ಮಂಡ್ಯ ಕೆರೆ ಅಂಗಳದಲ್ಲಿರುವ ವಿವೇಕಾನಂದ ನಗರ ಬಡಾವಣೆಯ ಸ.ನಂ. 507ರಲ್ಲಿನ 230.11 ಗುಂಟೆ ಜಮೀನನ್ನು 1997ರಲ್ಲಿ ಸರ್ಕಾರ ನಿವೇಶನಗಳಾಗಿ ವಿಂಗಡಿಸಿ ಹಂಚಲು ಮುಡಾಗೆ ಮಂಜೂರು ಮಾಡಿತ್ತು. ಅದರಂತೆ ಮುಡಾ ಸೈಟುಗಳನ್ನು ಪಾರದರ್ಶಕವಾಗಿ ಕಾನೂನು ವ್ಯಾಪ್ತಿಯಲ್ಲಿ ನಿವೇಶನವಿಲ್ಲದ ಜನರಿಗೆ ಹಂಚಬೇಕಾಗಿತ್ತು. ಆದರೆ ಮುಡಾ ಆಯುಕ್ತರು, ಅಧ್ಯಕ್ಷರು, ಅಧಿಕಾರಿಗಳು ಸೇರಿ ಕೋಟ್ಯಾಂತರ ಮೌಲ್ಯಕ್ಕೆ ಹರಾಜಾಗುವ ಸೈಟುಗಳನ್ನು ಸಾವಿರಾರು ರೂ.ಗಳಿಗೆ ಮಾರಿಕೊಂಡು ಮುಡಾಗೆ ಸುಮಾರು 300 ಕೋಟಿಗಳ ಆದಾಯ ತಪ್ಪಿಸಿದ್ದರು. 'ಒಂದೇ ಕಂತು ಸ್ಕೀಂ' ನಡಿ 426 ನಿವೇಶನಗಳು, 'ನಿಮ್ಮ ಆಯ್ಕೆ ಸ್ಕೀಂ'ನಲ್ಲಿ 344 ನಿವೇಶನಗಳು, ಹೆಚ್ಚುವರಿ ಬಡ್ಡಿ ಪಾವತಿಸಿ ಹಂಚಿರುವ 944 ನಿವೇಶನಗಳು ಹಾಗೂ ಇದೆಲ್ಲಾ ಸ್ಕೀಂನಲ್ಲಿ ಹಂಚಿ ಉಳಿದಿದ್ದ 107 ನಿವೇಶನಗಳು ಸೇರಿ ಒಟ್ಟು 1821 ನಿವೇಶನಗಳನ್ನು ತಮ್ಮ ಸಂಬಂಧಿಕರಿಗೆ, ಹೆಂಡತಿ ಮಕ್ಕಳಿಗೆ ಕಡಿಮೆ ಬೆಲೆಗೆ ಮಾರಿಕೊಂಡು ಬೆಚ್ಚಗಾಗಿದ್ದರು.

ಅಂದಹಾಗೆ ಇದಕ್ಕೂ ಹಿಂದೆ 107 ನಿವೇಶನಗಳಲ್ಲಿ ಅಕ್ರಮ ನಡೆದಿರುವ ವಿಚಾರ ದೊಡ್ಡ ಕೋಲಾಹಲವನ್ನೇ ಉಂಟುಮಾಡಿ ವಿಧಾನಸಭೆಯಲ್ಲೂ ಪ್ರತಿಧ್ವನಿಸಿತು. ಆಗ ಲೋಕಾಯುಕ್ತರು ಶಾಸಕರಾಗಿದ್ದ ಎಂ.ಶ್ರೀನಿವಾಸ್, ಪುಟ್ಟರಾಜು, ರಮೇಶ್‌ಬಾಬು ಬಂಡಿಸಿದ್ದೇಗೌಡ, ಚಲುವರಾಯಸ್ವಾಮಿ, ಆಗಿನ ಮುಡಾ ಅಧ್ಯಕ್ಷೆ ವಿದ್ಯಾನಾಗೇಂದ್ರ, ನಿರ್ದೇಶಕ ಎಂ.ಜೆ.ಚಿಕ್ಕಣ್ಣ ಸೇರಿದಂತೆ ಹಲವರು ಮೇಲೆ ದೂರು ದಾಖಲಿಸಿದ್ದರು. ಅವರೆಲ್ಲಾ ಜಾಮೀನಿನ ಮೇಲೆ ಹೊರಗೆ ತಿರುಗಾಡಿಕೊಂಡಿದ್ದಾರೆ. ಆದರೆ ಇದೀಗ ಎಲ್ಲಾ 1821 ಸೈಟುಗಳ ಹಂಚಿಕೆಯೇ ಅಕ್ರಮ ಎನ್ನುವುದನ್ನು ಮಥಾಯ್ ಬಹಿರಂಗಗೊಳಿಸಿದ್ದು ಭ್ರಷ್ಟರಿಗೆ ನುಂಗಲಾರದ ತುತ್ತಾಗಿತ್ತು.

ಮುಡಾದಲ್ಲಿ ಅಂಬಿ ಪಡೆದಿದ್ದ ಸೈಟಿನ ಬಗ್ಗೆ ಯಾವ ಆಯುಕ್ತನೂ ದನಿ ಎತ್ತಿರಲಿಲ್ಲ. ಆದರೆ ದಕ್ಷ ಅಧಿಕಾರಿ ಮಥಾಯ್ ಆ ಕೆಟ್ಟ ಸಂಪ್ರದಾಯವನ್ನು ಮುರಿದು ಮಂಡ್ಯದ ಗಂಡಿನ ಅಸಲಿಯತ್ತನ್ನು ಅನಾವರಣ ಮಾಡಲು ಯತ್ನಿಸಿದ್ದರು. ಅಂಬಿ ಶಿಷ್ಯ ರಿಯಲ್ ಎಸ್ಟೇಟ್ ಕುಳ ಅಮರಾವತಿ ಚಂದ್ರಶೇಖರನ ಅಕ್ರಮಕ್ಕೆ ಆಯುಕ್ತ ಮಥಾಯಿ ಸಹಕರಿಸಲಿಲ್ಲ. ಅಲ್ಲದೆ ರಿಯಲ್ ಎಸ್ಟೇಟ್ ದಂಧೆ ನಡೆಸುವ ಅಂಬಿ ಭಂಟರಿಗೆ ಮಥಾಯಿ ನುಂಗಲಾರದ ತುತ್ತಾಗಿದ್ದರು. ಈ ಎಲ್ಲಾ ಕಾರಣಗಳನ್ನು ಮುಂದಿಟ್ಟುಕೊಂಡು ಅಂಬಿಯ ಕಿವಿ ಹಿಂಡಿದ ಅಮರಾವತಿ ಚಂದ್ರಶೇಖರ್ ನೇತೃತ್ವದ ಟೀಮು ಬೀದರ್‌ಗೆ ವರ್ಗಾವಣೆ ಆಗುವಂತೆ ಮಾಡಿದ್ದರು. ಇಲ್ಲದಿದ್ದಲ್ಲಿ ಮುಡಾಕ್ಕೆ ಆಯುಕ್ತರಾಗಿ ಬಂದ ನಾಲ್ಕೇ ತಿಂಗಳಲ್ಲಿ ಅವರ್‍ಯಾಕೆ ವರ್ಗವಾಗಬೇಕಿತ್ತು? ಅದೂ ಮುಡಾ ಮುಕ್ಕಿದ ಹೆಗ್ಗಣಗಳನ್ನು ಬಯಲಿಗೆಳೆಯುವ ಜನೋಪಕಾರಿ ಕೆಲಸ ಮಾಡುತ್ತಿರಬೇಕಾದರೆ.....

ಬೀದರ್‌ನ ಕಾರಂಜಾ ಯೋಜನೆಗೆ ಮಥಾಯ್‌ರನ್ನು ಎತ್ತಂಗಡಿ ಮಾಡಿಸುವಲ್ಲಿ ಯಶಸ್ವಿಯಾದ ಅಂಬಿ ಭಂಟರು ಇನ್ನೇನು ನಿಟ್ಟುಸಿರು ಬಿಡಬೇಕೆನ್ನುವಷ್ಟರಲ್ಲಿಯೇ ಲೋಕಸಭಾ ಚುನಾವಣೆಗಳು ಘೋಷಣೆಯಾಗಿ ಮಥಾಯಿ ವರ್ಗಾವಣೆಯಾದರೂ ಇಲ್ಲಿಂದ ತೆರಳಿರಲಿಲ್ಲ. ಲೋಕಸಭಾ ಚುನಾವಣೆ ಮುಗಿದು ವಸತಿ ಸಚಿವ ಅಂಬಿಯ ಅಕ್ರಮ ಸೈಟು ವಿಚಾರ ಬೆಳಕಿಗೆ ತಂದರೋ ಅಂದಿನಿಂದಲೇ ಅಂಬಿ ಭಂಟರು ತಕ್ಷಣ ಮುಡಾದಿಂದ ಮಥಾಯಿ ತೆರವಾಗಲೇಬೇಕೆಂದು ಹಠ ಹಿಡಿದು ಕುಳಿತಿದ್ದರು. ದಕ್ಷ ಅಧಿಕಾರಿಗಳನ್ನು ಮುಂದಿಟ್ಟುಕೊಂಡು ಮಂಡ್ಯ ಅಭಿವೃದ್ಧಿ ಬಗ್ಗೆ ಚಿಂತಿಸಬೇಕಾದ ಸಚಿವ ಅಂಬಿಯೇ ಖುದ್ದಾಗಿ ಮಂತ್ರಿ ವಿನಯ್‌ಕುಮಾರ್ ಸೊರಕೆ ಮೇಲೆ ಒತ್ತಡ ಹಾಕಿ ಮಥಾಯಿ ಬೀದರ್‌ಗೆ ಹೋಗಲೇಬೇಕಾದ ಅನಿವಾರ್ಯತೆ ಸೃಷ್ಟಿಸಿದ್ದಾರೆ. ಆಯುಕ್ತರನ್ನು ಇಲ್ಲೇ ಉಳಿಸುವಂತೆ ಪ್ರಗತಿಪರ ಸಂಘಟನೆಗಳು ನಡೆಸಿದ ಪ್ರತಿಭಟನೆಗೆ ಬೆಲೆಕೊಡದ ಅಂಬಿ ತನ್ನ ಭಂಟರ ಮಾತಿಗೆ ಮಣೆಹಾಕಿ ಮಥಾಯಿಯನ್ನು ಎತ್ತಂಗಡಿ ಮಾಡಿಸುವ ಮೂಲಕ ಜನರ ಜನರ ಕಣ್ಣಲ್ಲಿ 'ವಿಲನ್'ನಂತೆ ಕಾಣಿಸುತ್ತಿದ್ದಾರೆ.

ಎಲ್ಲರೂ ಒಂದಾದರು

ಮುಡಾದ ನುಂಗಾಟ ಬಹಳ ವ್ಯವಸ್ಥಿತ ಯೋಜನೆ. ಇಲ್ಲವಾದರೆ ಸತತ 12 ವರ್ಷ ನಿರಂತರವಾಗಿ ಮುಂದಾಯಿಸಲು ಸಾಧ್ಯವಿತ್ತೆ. ಸೈಟುಗಳನ್ನು ಅಕ್ರಮವಾಗಿ ನುಂಗಲು ಪ್ಲಾನ್ ಹಾಕಿದ ಅಧಿಕಾರಶಾಹಿ ವರ್ಗ ಮಾಡಿದ್ದ ಮೊದಲ ಕೆಲಸವೆಂದರೆ ಇದಕ್ಕೆ ವಿರೋಧ ವ್ಯಕ್ತಪಡಿಸಬಹುದಾದ ರಾಜಕಾರಣಿಗಳು, ಪತ್ರಕರ್ತರು, ಸಮಾಜಸೇವಕರು, ಸಂಘಟನೆಗಳ ಮುಖಂಡರುಗಳನ್ನು ಹುಡುಕಿ ಅವರಿಗೆಲ್ಲಾ ಒಂದೊಂದು ಸೈಟು ಕೊಟ್ಟು ಅವರನ್ನೂ ಅಕ್ರಮದ ಪಾಲುದಾರರನ್ನಾಗಿಸಿಕೊಂಡದ್ದು. ಈ ಸಿದ್ಧಾಂತದಲ್ಲೇ ಅಂಬಿ, ಸಿ.ಎಸ್.ಪುಟ್ಟರಾಜು, ಶಾಸಕರಾದ ಎಂ.ಬಿ.ರಮೇಶ್‌ಬಾಬು, ಚಲುವರಾಯಸ್ವಾಮಿ, ಮಾಜಿ ಶಾಸಕ ಎಂ.ಶ್ರೀನಿವಾಸ್ ಸೇರಿದಂತೆ ಹಲವರು ಸೈಟು ಪಡೆದಿದ್ದಾರೆ. ಮುಡಾ ನೌಕರರ ಸಂಘದ ಅಧ್ಯಕ್ಷನಾಗಿದ್ದ ಎಂ.ಬಿ.ನಾಗಣ್ಣಗೌಡನಿಗೆ ಅಕ್ರಮ ಸೈಟು ಹಂಚಿಕೆ ವಾಸನೆ ಬಂದು ಇನ್ನೇನು ಆತ ರಾದ್ಧಾಂತ ಮಾಡುತ್ತಾನೆ ಎನ್ನುವ ಸಂದರ್ಭದಲ್ಲಿ ಆತನಿಗೂ 30x40 ಸೈಟು ದಯಪಾಲಿಸಿ ಅವನ ಬಾಯಿ ಮುಚ್ಚಿಸಿದ್ದರು. ಒಂದಿಬ್ಬರು ಜಾಣ ಪತ್ರಕರ್ತರು ತಮ್ಮ ಪತ್ನಿ ಹೆಸರಿನಲ್ಲಿ ಸೈಟು ಬರೆಸಿಕೊಂಡಿದ್ದೂ ಉಂಟು. ಆಗಿನ ಮುಡಾ ಅಧ್ಯಕ್ಷೆ ವಿದ್ಯಾನಾಗೇಂದ್ರ ತನ್ನ ಸಂಬಂಧಿಗಳು, ಸ್ನೇಹಿತರು ಕೊನೆಗೆ ಕಾರ್ ಡ್ರೈವರ್‌ಗಳ ಹೆಸರಿನಲ್ಲೂ ಒಂದೊಂದು ಸೈಟು ಮಾರಿಕೊಂಡಿದ್ದಳು. ಇನ್ನು ಮುಡಾ ನಿರ್ದೇಶಕನಾಗಿದ್ದ ರಿಯಲ್ ಎಸ್ಟೇಟ್ ದಂಧೆಯ ಎಂ.ಜೆ.ಚಿಕ್ಕಣ್ಣ ಪತ್ನಿ, ನಾದಿನಿ, ಸಹೋದರರ ಹೆಸರಿನಲ್ಲಿ ಸೈಟು ಹೊಡೆದಿದ್ದ.

ಹೀಗೆ ಮುಡಾ ಹೆಗ್ಗಣಗಳ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ನಾಚಿಕೆಗೇಡಿನ ವಿಷಯವೆಂದರೆ ಅವರೆಲ್ಲರೂ ಮಥಾಯ್‌ರನ್ನು ವರ್ಗಾಯಿಸುವಂತೆ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದು. ಮೂರು ಮುಕ್ಕಾಲಷ್ಟಿದ್ದ ಅಂಬಿ ಬೆಂಬಲಿಗರು ನಡೆಸಿದ ಪ್ರತಿಭಟನೆಯಲ್ಲಿ ಸ್ವತಃ ನಗರಸಭೆ ಅಧ್ಯಕ್ಷ ಸಿದ್ಧರಾಜನೇ ಉಪಸ್ಥಿತನಿದ್ದದ್ದು ಪ್ರಜಾಪ್ರಭುತ್ವವನ್ನು ಹೀನವಾಗಿ ಅಣಕಿಸುವಂತಿತ್ತು. ನಗರಸಭೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಇದ್ದರೂ ರೊಕ್ಕದ ಕಾರಣದಿಂದಲೇ ಅಧ್ಯಕ್ಷನಾಗಿರುವ ಪಕ್ಷೇತರ ಸದಸ್ಯ ಸಿದ್ದರಾಜುಗೆ ಮಂಡ್ಯ ನಗರದಲ್ಲೇ ಬಗೆಹರಿಸಲು ಸಾಕಷ್ಟು ಸಮಸ್ಯೆಗಳು ಕಾದು ಕುಳಿತಿವೆ. ಅವೆಲ್ಲವನ್ನೂ ಬಿಟ್ಟು ಭ್ರಷ್ಟತೆಯನ್ನು ಬಯಲು ಮಾಡಿದರೆಂಬ ಕಾರಣಕ್ಕೆ ದಕ್ಷ ಅಧಿಕಾರಿಯ ಎತ್ತಂಗಡಿ ಗೋಸ್ಕರ ಪ್ರತಿಭಟಿಸಿ ಜನರ ದೃಷ್ಟಿಯಲ್ಲಿ ವಿಲನ್ ಆಗುವುದು ಬೇಕಿತ್ತಾ? ಇನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಂಡ್ಯ ಸಂಸದ ಪುಟ್ಟರಾಜು 'ಅಂಬಿ ಒಳ್ಳೇ ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಕೆಲವು ಕಿಡಿಗೇಡಿಗಳು ವಿನಾಕಾರಣ ಆರೋಪ ಮಾಡುತ್ತಿದ್ದಾರೆ' ಎನ್ನುವ ಮೂಲಕ ಆಯುಕ್ತ ಮಥಾಯಿ ಹೆಸರೇಳದೆ ಅವರನ್ನು ಕಿಡಿಗೇಡಿಗೆ ಹೋಲಿಸಿ ತಮ್ಮ ಭ್ರಷ್ಟ ಅಜೆಂಡಾವನ್ನು ಬಯಲುಗೊಳಿಸಿದ್ದರು. ಅಂದಹಾಗೆ, ಈ ಮುಡಾ ಅಕ್ರಮ ಸೈಟಿನಲ್ಲೂ ಪುಟ್ಟರಾಜುನ ಪಾಲಿದೆ.

ಒಂದಷ್ಟು ಪ್ರಗತಿಪರ ಸಂಘಟನೆಗಳು ಎಂ.ಡಿ.ಜಯರಾಂ, ವೆಂಕಟಗಿರಿಯಯ್ಯ, ಲಕ್ಷ್ಮಣ್ ಚೀರನಹಳ್ಳಿ, ಥಾಮಸ್ ಬೆಂಜಮಿನ್ ನೇತೃತ್ವದಲ್ಲಿ ಪ್ರತಿಭಟಿಸಿ ಆಯುಕ್ತ ಮಥಾಯಿ ವರ್ಗಾವಣೆ ರದ್ದು ಮಾಡುವಂತೆ ಒತ್ತಾಯಿಸಿದ್ದು ಸರ್ಕಾರದ ಗಮನಕ್ಕೆ ಬರಲೇ ಇಲ್ಲ. ಯಾಕೆಂದರೆ ವರ್ಗಾವಣೆ ಮಾಡಿಸಿದ್ದೇ ಖುದ್ದು 'ಮಂಡ್ಯ ಸರ್ಕಾರ್' (ಅಂಬಿ ಟೀಮು)! ವಿಪರ್ಯಾಸವೆಂದರೆ ತಮ್ಮನ್ನು ತಾವು ಪ್ರಗತಿಪರ ಎಂದು ಬ್ರ್ಯಾಂಡ್ ಮಾಡಿಕೊಳ್ಳುವ ಕೆಲ ನುಂಗಣ್ಣ 'ನಾಯಕರು ಮಥಾಯಿ ಪರ ಪ್ರತಿಭಟನೆಯಲ್ಲಿ ಸುಳಿಯಲೇ ಇಲ್ಲ. ಯಾಕೆಂದರೆ ಅವರೂ ಮುಡಾ ಸೈಟು ಮುಂಡಾಯಿಸಿದವರೆ. ಬೆರಳೆಣಿಕೆಯ ಸಂಘಟನೆಗಳನ್ನು ಬಿಟ್ಟರೆ ಉಳಿದ ಯಾವ ನುಂಗಣ್ಣ ಜನನಾಯಕರೂ ಮಥಾಯಿಯನ್ನು ನಾಲ್ಕು ತಿಂಗಳಿಗೆ ಏಕೆ ವರ್ಗ ಮಾಡಿದ್ದೀರಿ ಕಾರಣ ಕೊಡಿ ಎಂದು ಕೇಳಲೇ ಇಲ್ಲ.

● ಮಂಡ್ಯ ನಾಗೇಶ್

ಚಿತ್ರದುರ್ಗ ಜಿ.ಪಂ. ಕದನ

ಮಂತ್ರಿ ಆಂಜನೇಯ ವಿರುದ್ಧ ಸುಧಾಕರ್ ಸಿಂಡಿಕೇಟ್!






ಚಿತ್ರದುರ್ಗ ಜಿಲ್ಲಾ ಪಂಚಾಯತಿ ಅಧ್ಯಕ್ಷರ ಚುನಾವಣೆ ...ಮು ಕುತೂಹಲದ ರಾಜಕಾರಣಕ್ಕೆ ಸಜ್ಜಾಗುತ್ತಿದೆ. ...ಮೆಂಟ್ ಚುನಾವಣೆ ಮುಗಿದ ಬೆನ್ನಲ್ಲೆ ಶುರುವಾಗಿ ...ಈ ಪಂಚಾಯತ್ ಕಾಳಗದ ಹಿಂದೆ ಭಾರೀ ...ತ್ರವೇ ಅಡಗಿದೆ. ಮೇಲ್ನೋಟಕ್ಕೆ ಜಿಲ್ಲಾ ಪಂಚಾಯತ್ ...ಗಳ ,ಹಗ್ಗ-ಜಗ್ಗಾಟದಂತೆ ಕಂಡುಬಂದರೂ ಜಿಲ್ಲಾ ...ವಾರಿ ಸಚಿವ ಎಚ್.ಆಂಜನೇಯರನ್ನು ಹಣಿಯಲು ...ಊರು ಶಾಸಕ ಸುಧಾಕರ್ ಸಿಂಡಿಕೇಟು ಈ ...ವಣೆಯನ್ನು ಬಳಸಿಕೊಳ್ಳುತ್ತಿರುವುದು ಸ್ಪಷ್ಟವಾಗಿ ...ಕರಿಸುತ್ತಿದೆ. ಅಂದಹಾಗೆ, ಈ ಸುಧಾಕರ್ ...ಕೇಟ್‌ನಲ್ಲಿ ಚಳ್ಳಕೆರೆ ಶಾಸಕ ರಘುಮೂರ್ತಿ, ...ದುರ್ಗ ಶಾಸಕ ಗೋವಿಂದಪ್ಪರಂತಹ ...ಕರುಗಳೇ ಇರುವುದು ಆಂಜನೇಯರ ...ಸಿದೆ.

...4 ಜನ ಸದಸ್ಯ ಬಲದ ಚಿತ್ರದುರ್ಗ ...ಪಂಚಾಯತಿಯಲ್ಲಿ ಕಾಂಗ್ರೆಸ್‌ನ 16, ...ಸ್‌ನ 6 ಮತ್ತು ಬಿಜೆಪಿಯ 12 ಜನ ...ದ್ದಾರೆ. ಅಧಿಕಾರ ಹಿಡಿಯುವಷ್ಟು ...ಮತ ಯಾರಿಗೂ ಬರದಿದ್ದಾಗ ಕಾಂಗ್ರೆಸ್ ... ಜೆಡಿಎಸ್ ಒಪ್ಪಂದ ಮಾಡಿಕೊಂಡು ... ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ...ದ ಮೇಲೆ ಒಬ್ಬರು ಅನುಭವಿಸುವ ...ನಕ್ಕೆ ಬಂದಿದ್ದರು. ಅದರಂತೆಯೇ ಸರದಿ 40 ತಿಂಗಳು ಎರಡೂ ಪಕ್ಷಗಳು ...ರ ಅನುಭವಿಸಿವೆ. ಒಪ್ಪಂದದ ಕೊನೆಯ ...ಗಳ ಅಧಿಕಾರಾವಧಿ ಈಗ ಕಾಂಗ್ರೆಸ್‌ಗೆ ...ಬೇಕಿತ್ತು. ಆದರೆ ಜೆಡಿಎಸ್‌ನ ...ಟ್ಟದಿಂದ ಅದು ಕಾಂಗ್ರೆಸಿಗೆ ...ವಾಗುವಂತೆ ಕಾಣುತ್ತಿದೆ.

...ಂಗ್ರೆಸ್‌ನಿಂದ ಬಾಬುರೆಡ್ಡಿ ಮತ್ತು ಗಿರಿ ...ಲ್ ಅಧ್ಯಕ್ಷರ ರೇಸಿನಲ್ಲಿದ್ದಾರೆ. ಇವರಿಬ್ಬರಲ್ಲಿ ...ನ್ನು ಆಯ್ಕೆ ಮಾಡುವುದು ಪಕ್ಷಕ್ಕೇನು ದೊಡ್ಡ ...ನಲ್ಲ, ಆದರೆ ಜೆಡಿಎಸ್‌ನ ದ್ಯಾಮಣ್ಣ ಎಂಬ ನೆತ್ತಿ ...ದ ಆಸಾಮಿಯೊಬ್ಬ ಎಬ್ಬಿಸಿರುವ ಬಂಡಾಯದ ಹವಾ ... ಬಿಜೆಪಿಗಳಿಗೂ ಅಧಿಕಾರದ ಆಸೆ ಹುಟ್ಟಿಸಿದೆ. ... ನೋಡಿದರೆ, ಜೆಡಿಎಸ್‌ನ ಯಾವ ಸದಸ್ಯರಿಗೂ ...ವೇನೂ ಆಗಿಲ್ಲ, ಆ ಪಕ್ಷದ ಆರು ಜನರಲ್ಲಿ ...ಮಾರ್ ಅಧ್ಯಕ್ಷನಾಗಿ ಅಧಿಕಾರ ಅನುಭವಿಸಿದ್ದರೆ, ...ಣ್ಣ ಉಪಾಧ್ಯಕ್ಷನಾಗಿದ್ದವನು. ಇನ್ನುಳಿದ ನಾಲ್ಕು ಜನ ...ಪಂಚಾಯತ್‌ನ ಸ್ಟ್ಯಾಂಡಿಂಗ್ ಕಮಿಟಿಯ ಅಧ್ಯಕ್ಷರಾಗಿ ...ಕೊಂಡಿದ್ದಾರೆ. ರವಿಕುಮಾರ್ ಅಧ್ಯಕ್ಷನಾಗಲು ನಾನು ...ಮ ಮಾಡಿದ್ದೆ, ಆದರೆ ಈಗ ನಾನು ಅಧ್ಯಕ್ಷನಾಗಲು ...ಮಾರ್ ಸಹಕರಿಸುತ್ತಿಲ್ಲ ಎನ್ನುವ ಕ್ಯಾತೆ ತೆಗೆದಿರುವ ...ಣ್ಣ ಬಿಜೆಪಿಗಳತ್ತ ಆಸೆಗಣ್ಣು ನೆಟ್ಟು ಕೂತಿದ್ದಾನೆ.

..., ಪಕ್ಷದ ಮೀಸೆ ಮಹಾಲಿಂಗಪ್ಪನೂ ತೊಡರುಗಾಲು ... ಶುರು ಮಾಡಿದ್ದಾನೆ. ಹಿಂದೆ ತಾನು ಅಧ್ಯಕ್ಷನಾಗಿದ್ದಾಗ ...ರೆಡ್ಡಿ ಸರಿಯಾದ ಸಹಕಾರ ನೀಡಿರಲಿಲ್ಲ, ಹಾಗಾಗಿ ...ರೆಡ್ಡಿ ಅಧ್ಯಕ್ಷನಾಗೋದು ಬೇಡ ಎನ್ನುವುದು ಮೀಸೆಯ ... ದ್ಯಾಮಣ್ಣ ಮತ್ತು ಮೀಸೆ ಮಹಾಲಿಂಗಪ್ಪ ಇಬ್ಬರಿಗೂ ...ಹಾಕಿದ ಬಿಜೆಪಿ ಗೋವಾಗೆ ಎಸ್ಕಾರ್ಟ್ ಮಾಡಿ ...ಯಿದ್ದು, ಗೋವಾ ಬೀಚಿನ ರುಚಿ ಹತ್ತಿಸಿಕೊಂಡ ...ಣ್ಣ ಅಲ್ಲಿಂದ ಬಂದವನೇ ಪತ್ರಿಕಾಗೋಷ್ಠಿ ನಡೆಸಿ ...ಹುತ್ತಾ ಇದಿ, ಈ ಚುನಾವಣೆಯಲ್ಲಿ ಪವಾಡವನ್ನೇ ... ಬಿಡ್ತೀವಿ. ನಮ್ಮ ಪಕ್ಷದ ಮೂರು ಜನ ಹಾಗೂ ...ಸ್‌ನ ಆರು ಜನ ಬಿಜೆಪಿಗೆ ಬೆಂಬಲ ನೀಡ್ತೀವಿ.. ಕೈ ...ದ ಬಾಬುರೆಡ್ಡಿ ಅಧ್ಯಕ್ಷನಾಗೋದನ್ನು ತಪ್ಪಿಸಿ ಬಿಜೆಪಿ ...ವರ ನಾನೇ ಅಧ್ಯಕ್ಷನಾಗಿ ಬಿಟ್ಟೀನಿ' ಎಂಬ ...ತುಗಳನ್ನು ಉದುರಿಸಿದ್ದ.

...ಲಿಗೆ ಕಾಂಗ್ರೆಸ್‌ನ ಬಾಬುರೆಡ್ಡಿ ಅಧ್ಯಕ್ಷನಾಗುವುದು ... ಹಿಂದೆ ಭಯಂಕರ ರಾಜಕೀಯ ಲೆಕ್ಕಾಚಾರಗಳೇ ಅಡಗಿವೆ. ಬಾಬುರೆಡ್ಡಿಗೆ ಸುಧಾಕರ್ ಸಿಂಡಿಕೇಟಿನ ಭರ್ಜರಿ ಬೆಂಬಲವಿದೆ. ಅಂದಕಾಲತ್ತಿಲ್ ಸುಧಾಕರ್ ಹಾಗೂ ಬಾಬುರೆಡ್ಡಿ ಸಾರಾಯಿ ದಂಧೆಯ ಪಾರ್ಟನರ್ ಆಗಿದ್ದರೆನ್ನುವುದೇ ಇದಕ್ಕೆ ಮುಖ್ಯ ಕಾರಣ. ಜಿಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯಗೆ ಬೇರೆ ಆಯ್ಕೆಗಳೇ ಇಲ್ಲದ್ದರಿಂದ ಬಾಬುರೆಡ್ಡಿಗೆ ಹ್ಹೂಂ ಗುಟ್ಟುವ ಅನಿವಾರ್ಯತೆ ಇದೆ. ಹಾಗಾಗಿ ಬಾಬುರೆಡ್ಡಿ ಅನಾಯಾಸವಾಗಿ ಅಧ್ಯಕ್ಷನಾಗಬಹುದಿತ್ತು, ಆದರೆ ಮುಂದಿನ ದಿನಗಳಲ್ಲಿ ಆಂಜನೇಯರ ಪ್ರಭಾವ ತಗ್ಗಿಸಲು ಸುಧಾಕರ್ ಟೀಮು ಇದೇ ಬಾಬುರೆಡ್ಡಿಯನ್ನು ಟ್ರಂಪ್‌ಕಾರ್ಡ್ ಆಗಿ ಬಳಸಿ ಕೊಳ್ಳುವ ಚಾನ್ಸ್ ಇರುವುದರಿಂದ ಅಧ್ಯಕ್ಷ ಚುನಾವಣೆಯ ಒಂದೊಂದು ಹೆಜ್ಜೆಯೂ ತಂತ್ರಗಾರಿಕೆಗಳಿಂದಲೆ ಕೂಡಿದೆ. ಸುಧಾಕರ್ ಮತ್ತು ಆಂಜನೇಯ ನಡುವಿನ ಮುಸುಕಿನ ಉಜ್ಜಾಟ ರಹಸ್ಯವಾಗೇನೂ ಉಳಿದಿಲ್ಲ, ಮೊನ್ನೆ ಎಂಎಲ್‌ಸಿ ಎಲೆಕ್ಷನ್‌ನಲ್ಲೇ ಅದು ಜಗಜ್ಜಾಹೀರಾಗಿದೆ. ಮಂತ್ರಿ ಆಂಜನೇಯ ಸೂಚಿಸಿದ್ದ ಅಭ್ಯರ್ಥಿಯನ್ನು ಖಂಡತುಂಡವಾಗಿ ನಿರಾಕರಿಸಿದ ಸುಧಾಕರ್, ರಘುಮೂರ್ತಿ ಮತ್ತು ಗೋವಿಂದಪ್ಪರ ಸಿಂಡಿಕೇಟು ಚಳ್ಳಕೆರೆಯ ಜಯಮ್ಮನನ್ನು ಎಂಎಲ್‌ಸಿ ಮಾಡುವ ಮೂಲಕ ಸೆಡ್ಡು ಹೊಡೆದಿದ್ದರು.



ಜಿಲ್ಲಾ ಪಂಚಾಯತ್ ಅಧ್ಯಕ್ಷ ಗಾದಿಗೂ ತನ್ನ ಪರಮಾಪ್ತ ಬಾಬುರೆಡ್ಡಿಯನ್ನು ತಂದು ಕೂರಿಸಿ ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಆಂಜನೇಯ ಪ್ರಭಾವ ತಗ್ಗಿಸಬೇಕೆನ್ನುವ ಲೆಕ್ಕಾಚಾರ ಸುಧಾಕರ್‌ದು.

ಇನ್ನು ಜೆಡಿಎಸ್‌ನಿಂದ ಕೈ ಪಾಳಯಕ್ಕೆ ವಲಸೆ ಬಂದು ಅಧಿಕಾರದ ಕನಸು ಕಾಣುತ್ತಿರುವ ಮಾಜಿ ಶಾಸಕ ಎಸ್.ಕೆ. ಬಸವರಾಜನ್ ಕೂಡಾ ತಲೆನೋವಾಗುವ ಸೂಚನೆಗಳಿವೆ. 2013ರ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿಯ ತಿಪ್ಪಾರೆಡ್ಡಿಗೆ ಎದುರಾಗಿ ಕೈ ಪಾಳಯದಿಂದ ಜಿ.ಎಸ್. ಮಂಜುನಾಥ್ ನಿಂತು ಸೋತ ನಂತರ ಅಲ್ಲಿ ಕೈಗೆ ಬಲಿಷ್ಠ ನಾಯಕರೇ ಇಲ್ಲದಂತಾಗಿದೆ. ಹಾಗಾಗಿಯೇ ಎಸ್.ಕೆ. ಬಸವರಾಜನ್ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಲಾಂಗ್‌ಜಂಪ್ ಮಾಡಿದ್ದರು. ಆದರೆ ಸುಧಾಕರ್, ಬಾಬುರೆಡ್ಡಿಯ ಬೆನ್ನಿಗೆ ನಿಂತು ಬಿಜೆಪಿಯ ತಿಪ್ಪಾರೆಡ್ಡಿಯ ವಿರುದ್ಧ ಮತ್ತೊಬ್ಬ ರೆಡ್ಡಿಯನ್ನು ತಯಾರು ಮಾಡಲು ಶುರು ಮಾಡುತ್ತಿದ್ದಂತೆಯೇ ಬಸವರಾಜನ್‌ಗೆ ಭವಿಷ್ಯದ ದಿಗಿಲು ಬಡಿದಿತ್ತು, ಬಾಬುರೆಡ್ಡಿಯನ್ನು ಜಿ.ಪಂ. ಅಖಾಡದಲ್ಲಿ ಹೊಸಕಿ ಹಾಕಿಬಿಟ್ಟರೆ ಮುಂದೆ ತನಗೆ ಪ್ರತಿಸ್ಪರ್ಧಿಯಾಗಲಾರ ಎನ್ನುವುದು ಬಸವರಾಜನ್ ಲೆಕ್ಕಾಚಾರ. ತಾನು ಹಿಂದಿದ್ದ ಪಕ್ಷದ ದ್ಯಾಮಣ್ಣ ಹಾಗೂ ಈಗಿರುವ ಪಕ್ಷದ ಮೀಸೆ ಮಹಾಲಿಂಗಪ್ಪರಿಗೆ ಬಂಡಾಯದ ಮೇವು ಹಾಕುತ್ತಿರೋದೆ ಬಸವರಾಜನ್ ಎನ್ನುವ ವರ್ತಮಾನಗಳೂ ಕೇಳಿಬರುತ್ತಿವೆ.

ಇನ್ನು ನೇರಾನೇರ ವಿಷಯಕ್ಕೆ ಬರುವುದಾದರೆ ಬಾಬುರೆಡ್ಡಿಗೆ ಪ್ರತಿಸ್ಪರ್ಧಿಯಾಗಿ ನಿಂತಿರೋದು ಕಾಂಗ್ರೆಸ್‌ನ ಗಿರಿ ಜಾನಕಲ್. 2013ರ ವಿಧಾನಸಭಾ ಚುನಾವಣೆಯಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಸ್ಪರ್ಧಿಸಿ ಬಿಜೆಪಿಯ ತಿಪ್ಪಾರೆಡ್ಡಿ ಎದುರು ಸೋತ ಮಂಜುನಾಥ್‌ರ ಮಗನೇ ಗಿರಿ ಜಾನಕಲ್. ತಾನಂತೂ ರಾಜಕೀಯದಲ್ಲಿ ಏನೂ ಆಗಲಿಲ್ಲ, ಮಗನಾದರೂ ಮೇಲಕ್ಕೇಳಲಿ ಎಂಬ ಪಿತೃಕಾಳಜಿಯಿಂದ ಮಂಜುನಾಥ್ ಮಗನನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷಗಿರಿಯ ಅಖಾಡಕ್ಕಿಳಿಸಿದ್ದಾರೆ. ಮಂಜುನಾಥ್‌ರ ಈ ಪುತ್ರವ್ಯಾಮೋಹದ ಬೆನ್ನಿಗೆ ನಿಂತಿರೋದು ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷ ಸೇತುರಾಮ ಮಾತ್ರ.

ಸುಧಾಕರ್ ಸಿಂಡಿಕೇಟ್‌ನ ಬೆಂಬಲ ಇರುವುದು ಬಿಟ್ಟರೆ ಬಾಬುರೆಡ್ಡಿಗೆ ಜಿಲ್ಲಾ ಪಂಚಾಯತ್‌ನ ಉಳಿದ ಕೈ ಸದಸ್ಯರ ಅಂಥಾ ಅಭಿಮಾನವೇನೂ ಇಲ್ಲ, ಬಾಬುರೆಡ್ಡಿ, ಸುಧಾಕರ್ ಬೆಂಬಲದಲ್ಲಿ ತಮ್ಮನ್ನೂ ಮೀರಿ ಬೆಳೆದುಬಿಟ್ಟರೇನು ಗತಿ ಎನ್ನುವ ಭವಿಷ್ಯದ ಚಿಂತೆಯೂ ಅವರಿಗೆ ಒಳಗೊಳಗೇ ಕಾಡುತ್ತಿದೆ. ಈ ನಿಟ್ಟಿನಲ್ಲಿ ಯೋಚಿಸಿದರೆ ಅವರಿಗೆಲ್ಲಾ ಸಾಫ್ಟ್ ಹುಡುಗ ಗಿರಿ ಜಾನಕಲ್ ಮೆಚ್ಚುಗೆ ಎನಿಸಿದರೂ ಅಚ್ಚರಿಯಿಲ್ಲ. ಕಾಂಗ್ರೆಸ್‌ನ ಜಾನಕಲ್ ಗಿರಿಗೆ ಗಾದಿ ಒಲಿಯದಿದ್ದರೂ ಬಾಬುರೆಡ್ಡಿಯ ಕೈ ತಪ್ಪುವುದಂತೂ ಗ್ಯಾರಂಟಿಯಾಗುತ್ತದೆ. ಹಾಗೇನಾದರು ಆಗಿಬಿಟ್ಟರೆ ತಮ್ಮ ದೊಂದು ಆಟ ತೋರಿಯೇ ಬಿಡೋಣ ಅಂತ ತಿಪ್ಪಾರೆಡ್ಡಿಯ ಕಮಲ ಪಾಳಯ ಎಲ್ಲವನ್ನೂ ಕಾದು ನೋಡುತ್ತಿದೆ.

ಸದ್ಯದ ಮಟ್ಟಿಗೆ ರೇಸ್‌ನಲ್ಲಿ ಬಾಬುರೆಡ್ಡಿಯೇ ಗೆಲ್ಲುವ ಕ್ಯಾಂಡಿಡೇಟು. ಚುನಾವಣೆ ಘಳಿಗೆಯವರೆಗೂ ಇದೇ ವಾತಾವರಣ ಮುಂದುವರೆದರೆ ಜೆಡಿಎಸ್‌ನ ದ್ಯಾಮಣ್ಣ ಕನವರಿಸುವ 'ಪವಾಡ'ಕ್ಕೆ ಕೆಲಸವೇನೂ ಇರುವುದಿಲ್ಲ. ಆದರೆ ಜಿದ್ದಾಜಿದ್ದಿನ ಪೊಲಿಟಿಕಲ್ ಕೆಮಿಸ್ಟ್ರಿ ಯಾವಾಗ ಬೇಕಾದರು ಸ್ವಿಂಗ್ ಆಗಬಹುದು. ಒಟ್ಟಿನಲ್ಲಿ ಚಿತ್ರದುರ್ಗ ಜಿಲ್ಲಾ ಪಂಚಾಯತ್ ಅಧ್ಯಕ್ಷ ಗಾದಿಯ ಚುನಾವಣೆ ಕಾಂಗ್ರೆಸ್‌ನ ಕಚ್ಚಾಟ, ಜೆಡಿಎಸ್‌ನ ಹುಚ್ಚಾಟ ಮತ್ತು ಬಿಜೆಪಿಯ ಮುಚ್ಚಾಟಗಳನ್ನು ಬೆತ್ತಲಾಗಿಸುತ್ತಿದೆ.

● ಟಿ.ಎನ್.ಷಣ್ಮುಖ


ಯಾರು ಈ 'ನೀಲು'?





ಮಂಡ್ಯದ ಕಡೆಯವಳೆಂದು
ಬೂಸಿ ಬಿಡುತ್ತಲೇ
ಶಿವಮೊಗ್ಗೆಯ ಕೊನಗವಳ್ಳಿಯ
ಮನೆಯ ಹಿತ್ತಲ ಗಿಡವೊಂದರಲ್ಲಿ
ಹೂವಾಗಿ ಅರಳಿದವಳು
ಸದಾ ಕಲಾ ಆಘ್ರಾಣಿಸಲೆಂದೇ
ಹೂ ಪರಿಮಳವ
ಬಿಟ್ಟು ಹೋದವಳು
ನನ್ನೆದೆಯ ಕೋಟೆಯೊಳಗೆ
ಹೇಗೋ ಪ್ರವೇಶಿಸಿ
ಕ್ರಮೇಣ ಆವರಿಸಿ
ತನ್ನ ಮಾಂತ್ರಿಕ ಶಬ್ದ ವಿಲಾಸಗಳಿಂದ
ಪಿಸ್ತಾರ, ವೈವಿಧ್ಯತೆಗಳಿಂದ
ನನಗೆ ದಿಗ್ಭ್ರಮೆ ಹಿಡಿಸಿ
ತಾನು ಮಾತ್ರ ಮುಸಿಮುಸಿ
ನಕ್ಕ ಮೋಹಕ ಅರಸಿ
ಚಿರಕಾಲವೂ ನಾನವಳ
ಅಮರಪ್ರೇಮಿಯಾಗಿರುವಂತೆ
ಪ್ರೀತಿ ಮಂತ್ರವ ನನ್ನ ಕಿವಿಯಲ್ಲುಸುರಿ
ಇನ್ನೂ ಇರುತ್ತಾಳೆ ಎಂದುಕೊಳ್ಳುವಷ್ಟರಲ್ಲಿ
ಥಟ್ಟನೆ ಮಾಯವಾದ
ಮಹಾ ಮಾಯಾವಿ

ಚಳಿಗಾಲದಲ್ಲಿ ನೀ ಬೆಚ್ಚಗಿರಲೆಂದು
ಕಣವಿಯವರೇನೋ ಹೊದೆಸಿದರು
ನಿನಗೊಂದು ಶಾಲು
ಮೋಡಿ ಮಾಡಿದ ನಿನಗೆ
ನಾ ತಾನೇ ಸುಮ್ಮನಿರಲಿ ಹೇಗೆ?
ನೀನಿತ್ತ ಸ್ಫೂರ್ತಿಗೆ ತಗೋ
ನನ್ನ ಈ ಎಲ್ಲ ಸಾಲು

● ಎನ್.ಕೆ. ವರದರಾಜ್


ಸವಣೂರಿನಲ್ಲಿರುವ ಒಂದು ಬಾವೊಬಾಬ್ ಮರ


ಆಫ್ರಿಕಾದ ಬಾವೊಬಾಬ್ ಮರ


ಸವಣೂರಿನಲ್ಲಿರುವ ಬಾವೊಬಾಬ್ ಮರದ ಮುಂದೆ ಲೇಖಕಿ ಪದ್ಮಾ ಶ್ರೀರಾಮ್

ಕಥೆಯೊಳಗೊಂದು ಕಥೆ - ಬಾವೊಬಾಬ್

ಕಳೆದ ವರ್ಷ ಗದಗದ ನನ್ನ ಆತ್ಮೀಯ ಸ್ನೇಹಿತೆಯ ಭೇಟಿಗೆ ಹೋಗಿದ್ದೆ. ಹಾಗೇ ಅವರೊಡನೆ ಸವಣೂರಿನಲ್ಲಿರುವ ಬಾವೊಬಾಬ್ ವೃಕ್ಷಗಳನ್ನು ನೋಡುವ ಹಂಬಲವೂ ಇತ್ತು. ಈಗಾಗಲೆ ಗೊತ್ತಿರುವಂತೆ ಉತ್ತರ ಕರ್ನಾಟಕದಲ್ಲಿ ಚದುರಿದಂತೆ ಬಿಜಾಪುರ, ಸವಣೂರು, ದೇವದುರ್ಗ ದೇವರ ಗೊನಾಳ್‌ಗಳಲ್ಲಿ ಬಾವೊಬಾಬ್ ಮರಗಳು ನೂರಾರು ವರ್ಷಗಳಿಂದ ಇವೆ, ಬೆಂಗಳೂರಿನ ಲಾಲ್‌ಬಾಗ್‌ನಲ್ಲೂ ಬೆಳೆಸಿದ್ದಾರೆ. ಸವಣೂರಿನ ಬಾವೊಬಾಬ್ ಮರಗಳನ್ನು ನೋಡಿ ಆಶ್ಚರ್ಯಚಕಿತಳಾದೆ. ಎಂಥ ಬೃಹತ್ ವಿಚಿತ್ರ ಮರ! ಇವು ಯಾವುದೋ ಕಾಲದಲ್ಲಿ ಅರಬ್ ವ್ಯಾಪಾರಿಗಳು ಆಫ್ರಿಕಾದಿಂದ ತಂದ ಬೀಜಗಳಿಂದ ಹುಟ್ಟಿಕೊಂಡ ಮರಗಳು ಎಂದು ಹೇಳುತ್ತಾರೆ. ಬಾವೊಬಾಬ್ ಮರಗಳು ನಮಗೆ ಸೂಫಿ ಸಂತರ ಕೊಡುಗೆ ಎಂಬ ಮಾತೂ ಉಂಟು. ಆದರೂ ಇವುಗಳ ಸಂತತಿ ಹುಲುಸಾಗಿ ವರ್ಧಿಸಿಲ್ಲ, ಬೃಹದಾಕಾರದ ಬಾವೊಬಾಬ್ ಮರಗಳು ಎಲ್ಲಿಂದಲೊ ಬಂದು ಇನಿತುಕಾಲ ನಮ್ಮೊಡನಿದ್ದೂ ನಮ್ಮವರಾಗದ ಮರಗಳು; ಎಡೆ ಸಿಕ್ಕಿದಲ್ಲಿ ತಳ ಊರುವ ಅಲೆಮಾರಿಗಳಂತೆ ಇವುಗಳು ಇರವು. ಬಾವೊಬಾಬ್‌ನ ತೌರು ಆಫ್ರಿಕಾದಲ್ಲಿ ಇದರ ಸ್ಥಾನಮಾನ ಏನು ಎಂಬ ಪ್ರಶ್ನೆ ನನ್ನನ್ನು ಕಾಡಲಾರಂಭಿಸಿತ್ತು.


ಇಂದು ನಮ್ಮ ಕಣ್ಣ ಮುಂದೆ ಇರುವ ಜಾಲತಾಣಗಳು ಅಪರಿಮಿತ ಮಾಹಿತಿಗಳನ್ನು ಒದಗಿಸುವ ಕಣಜ. ಇವುಗಳ ಮೂಲಕ ಬಾವೊಬಾಬ್‌ನ ಮೂಲನೆಲೆ ಯಾವುದು? ಇದರ ವೈಚಿತ್ರ್ಯ ಉಪಯೋಗ ಎಲ್ಲಾ ಒಂದೇ ಏಟಿಗೆ ಸಿಕ್ಕಿಬಿಡುತ್ತದೆ. ಬಾವೊಬಾಬ್‌ನ ಮೂಲನೆಲೆ ಆಫ್ರಿಕಾದಲ್ಲಿ ಗ್ರಾಮೀಣ ಜನರು ಬಾವೊಬಾಬ್‌ನ ಹೂವು, ಎಲೆ ಮುಂತಾದ ಭಾಗಗಳ ಉಪಯೋಗ ಅರಿತಿದ್ದಾರೆ. ಬಾವೊಬಾಬ್‌ನ ಡೊಳ್ಳು ಶರೀರ ಆಫ್ರಿಕಾದ ಸವನ್ನಾ ಹುಲ್ಲುಗಾವಲಿನ ಜನರಿಗೆ ನೀರಿನ ಪಿಪಾಯಿ ಆಗಿದೆ. ಇವೆಲ್ಲಾ ದೈನಂದಿನ ಬದುಕಿಗೆ ಬೇಕಾದ ಪ್ರಯೋಜನಗಳು. ಹಾಗಿದ್ದರೆ ಒಂದು ಖಂಡದ ವಿಶಿಷ್ಟ ಮರದ ಸಾಂಸ್ಕೃತಿಕ ಮಹತ್ವ ಏನು? ನಮ್ಮಲ್ಲಿ ಅರಳಿ, ಆಲ, ಮಾವು ಮುಂತಾದ ಮರಗಳು ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ನಮ್ಮ ಪರಂಪರೆಯ ಪ್ರಜ್ಞೆಯಾಗಿ ಸೇರಿಹೋಗಿವೆ. ಹೀಗೆಯೇ ಆಫ್ರಿಕಾದಲ್ಲಿ ಬಾವೊಬಾಬ್‌ಗೆ ಇರುವ ಸ್ಥಾನವಾದರೂ ಏನು?

ಹೀಗಿರುವಾಗ ಅಲೆಕ್ಸ್ ಹ್ಯಾಲಿ ಎಂಬ ಲೇಖಕನ 'ರೂಟ್ಸ್' ಎಂಬ ಕೃತಿಯನ್ನು ಓದಿದಾಗ ಸುಮಾರು ಇನ್ನೂರು ವರ್ಷಗಳಿಗೂ ಹಿಂದೆ ಆಫ್ರಿಕಾದ ಕಪ್ಪುಜನರ ಜೀವನದಲ್ಲಿ ಬಾವೊಬಾಬ್ ಹೇಗೆ ಹಾಸುಹೊಕ್ಕಾಗಿತ್ತು ಎನ್ನುವುದು ವಿಶದವಾಯಿತು.


ಅಲೆಕ್ಸ್ ಹ್ಯಾಲಿಯ 'ರೂಟ್ಸ್' ಕೃತಿಯ ನಾಯಕ ಆಫ್ರಿಕಾದ ಗ್ಯಾಂಬಿಯಾದಲ್ಲಿರುವ ಮಂಡೆಂಕಾ ಬುಡಕಟ್ಟಿನ ಕುಂಟಾಕಿಂಟೆ ಎಂಬ ಹದಿಹರೆಯದ ಹುಡುಗ. ಇವನನ್ನು ಬಿಳಿಯರು ಮೋಸದಿಂದ ಹಿಡಿದು ಅಮೆರಿಕಾಗೆ ಗುಲಾಮನನ್ನಾಗಿ ಒಯ್ಯುತ್ತಾರೆ. ಕುಂಟಾಕಿಂಟೆಯ ಬಾಲ್ಯದ ವಿವರಣೆಯಲ್ಲಿ ಮಂಡೆಂಕಾ ಬುಡಕಟ್ಟಿನ ಜನರ ದೈನಂದಿನ ಬದುಕಿನಲ್ಲಿ ಬಾವೊಬಾಬ್ ಮರ ಹೇಗೆ ಸೇರಿಹೋಗಿದೆ ಎಂಬುದು 'ರೂಟ್ಸ್' ಕಥಾನಕದ ತುಣುಕುಗಳನ್ನು ಗಮನಿಸಿದಾಗ ತಿಳಿಯುತ್ತದೆ. ಬಾವೊಬಾಬ್‌ನ ಸಂಗಡ ನಾವೂ ಇದ್ದೇವೆ ಎಂದು ಆಗಾಗ್ಗೆ ಬೂರುಗದ ಮರ ಮತ್ತು ಟ್ರಾವಲರ್ಸ್ ಟ್ರೀ (ನಮ್ಮ ಪಾರ್ಕ್‌ಗಳಲ್ಲಿ ಅಲಂಕಾರಕ್ಕೆ ಹಾಕಿರುವ ಬಾಳೆ ಎಲೆಗಳಂತ ಎಲೆಗಳನ್ನು ಬೀಸಣಿಗೆ ಆಕಾರದಲ್ಲಿ ಹೊಂದಿರುವ ಮರ) ಈ ಕಥಾನಕದ ಪೂರ್ವಾರ್ಧದಲ್ಲಿ ಕಾಣಿಸಿಕೊಳ್ಳುತ್ತವೆ. 'ರೂಟ್ಸ್' ಕೃತಿಯಲ್ಲಿ ಕಂಡು ಬರುವ ಬಾವೊಬಾಬ್ ಪ್ರಸ್ತಾಪದತ್ತ ಕಣ್ಣು ಹಾಯಿಸೋಣ.

ಒಂದು ಬೇಸಿಗೆಯ ಕಾಲದಲ್ಲಿ ಆಫ್ರಿಕಾದ ಜಫ್ಯೂರ್ ಎಂಬ ಹಳ್ಳಿಗೆ ಮಳೆ ಕೈ ಕೊಟ್ಟಿದೆ. ಹಳ್ಳಿಯಲ್ಲಿ ಸಂಗ್ರಹವಾಗಿದ್ದ ಆಹಾರ ಧಾನ್ಯಗಳೆಲ್ಲಾ ಮುಗಿದಿದೆ. ಹಾಗಾಗಿ ಹಳ್ಳಿಯ ಗಂಡಸರು ಸಣ್ಣಪುಟ್ಟ ಕೋಳಿ, ಪುಟ್ಟ ಚಿಗರೆಗಳನ್ನು ಬೇಟೆಯಾಡಿ ತಂದರೆ ಮಾತ್ರ ಇವರಿಗೆ ಸ್ವಲ್ಪ ಆಹಾರ ದೊರೆಕುತ್ತದೆ. ಹಳ್ಳಿಯ ಜನ ಮುಂದಿನ ಮಳೆಗಾಲದಲ್ಲಿ ವ್ಯವಸಾಯ ಮಾಡಲು ತಮ್ಮ ಶಕ್ತಿ ಉಳಿಸಿಕೊಳ್ಳಬೇಕು. ಆದರಿಂದ ಜಫ್ಯೂರ್ ಹಳ್ಳಿಯ ಹೆಂಗಸರು ಬಿದರಕ್ಕಿ ಅನ್ನ ಮತ್ತು ಬಾವೊಬಾಬ್ ಮರದ ರುಚಿ ಇಲ್ಲದ ಒಣ ಎಲೆಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದಾರೆ.

ಇದು ಈ ಕಥಾನಕದಲ್ಲಿ ಮೊದಲು ಕಾಣಿಸುವ ಬಾವೊಬಾಬ್ ಮರದ ಬಗೆಗಿನ ವಿವರಣೆ. ಮಂಡೆಂಕಾ ಜನರ ನಿತ್ಯಜೀವನದಲ್ಲಿ ಬಾವೊಬಾಬ್ ಹೇಗೆ ಅವಿಭಾಜ್ಯ ಅಂಗವಾಗಿದೆ ಎನ್ನುವದನ್ನು ತಿಳಿಯಲು, ನಾವು ಅವರ ದಿನಚರಿಯನ್ನು ಗಮನಿಸಬೇಕಾಗುತ್ತದೆ. ಮಂಡೆಂಕಾ ಬುಡಕಟ್ಟಿನ ಜನ ಆಗ್ಗೆ ಸುಮಾರು ಇನ್ನೂರು ವರ್ಷಗಳ ಹಿಂದೆ ಮುಸ್ಲಿಮರಾದಂತ ಜನ. ದಿನವೆಲ್ಲಾ ಕೆಲಸ ಮಾಡಿ ಸಂಜೆ ಊಟ ಮುಗಿಸಿದ ಜಫ್ಯೂರ್ ಹಳ್ಳಿಯ ಜನ ಮನೆಗಳ ಹೊರಗಡೆ ಸೇರುತ್ತಾರೆ. ಅವರು ಸಂಜೆ ಆಗಸದಲ್ಲಿ ಅರ್ಧಚಂದ್ರ ಕಾಣಿಸಿಕೊಳ್ಳುವುದನ್ನು ನಗಾರಿ ಬಡಿದು ಸ್ವಾಗತಿಸುತ್ತಾರೆ. ಅವರಿಗೆ ಅರ್ಧಚಂದ್ರ ಅಲ್ಲಾನ ಪ್ರತೀಕ. ಒಂದು ದಿನ ಅಮಾವಾಸ್ಯೆಯ ಚಂದ್ರನನ್ನು ಮೋಡ ಮುಸುಕಿದಾಗ ಅವರೆಲ್ಲಾ ದೇವತೆಗಳು ನಮ್ಮ ಮೇಲೆ



ರೂಟ್ಸ್ ಕಾದಂಬರಿ ಮತ್ತು ಸಿನಿಮಾದ ಒಂದು ದೃಶ್ಯ


ಟ್ರಾವಲರ್ಸ್ ಟ್ರೀ

ಮುನಿದಿದ್ದಾರೆ ಎಂದು ಹೆದರಿ, ಹಳ್ಳಿಯ ಮಸೀದಿಗೆ ಹೋಗಿ ಪ್ರಾರ್ಥಿಸಿ, ಬೆದರಿದ್ದ ತಮ್ಮ ಸಂಸಾರದವರೊಡನೆ ಬಾವೊಬಾಬ್ ಮರದ ಬುಡಕ್ಕೆ ಬರುತ್ತಾರೆ. ಅಲ್ಲಾಗಲೇ ಜಲಿಬಾ (ಸಂದೇಶ ವಾಹಕ) ಬಾವೊಬಾಬ್ ಮರದ ಕೆಳಗೆ ಸಣ್ಣ ಬೆಂಕಿ ಹಾಕಿ, ಅದರಲ್ಲಿ ತನ್ನ ಮಾತನಾಡುವ ನಗಾರಿಯ ಚರ್ಮವನ್ನು ಕಾಯಿಸುತ್ತಿರುತ್ತಾನೆ. ಜಲಿಬಾನ ಪಕ್ಕದಲ್ಲಿ ಒಂದು ಆಡಿನ ಚರ್ಮ ಬಾವೊಬಾಬ್ ಕೊಂಬೆಯಿಂದ ನೇತು ಬಿದ್ದಿದೆ. ಅದರ ಮೇಲೆ ಮಂಡೆಂಕಾ ಮಕ್ಕಳ ಗುರು ಅರಫಾಂಗ್ ನಗಾರಿಯ ಮೂಲಕ ಕಳಿಸಬೇಕಾದ ಸಂದೇಶಗಳನ್ನು ಅರಾಬಿಕ್ ಭಾಷೆಯಲ್ಲಿ ಬರೆದಿದ್ದಾನೆ. ಜಲಿಬಾ ಡೊಂಕಾದ ಕಡ್ಡಿಗಳಿಂದ ನಗಾರಿಯ ವಿವಿಧ ಭಾಗಗಳ ಮೇಲೆ ಬಾರಿಸಿ, ಹತ್ತಿರದಲ್ಲೇ ಇರುವ ಒಬ್ಬ ಮಂತ್ರವಾದಿಗೆ ಬರಹೇಳಿ ಸಂದೇಶ ಕಳಿಸುತ್ತಾನೆ. ಈ ಸಂದೇಶವನ್ನು ಸುತ್ತಲಿನ ಹಳ್ಳಿಗರು ಒಬ್ಬರಿಂದೊಬ್ಬರಿಗೆ ರವಾನಿಸುತ್ತಾರೆ. ಕಥಾನಾಯಕ ಕುಂಟಾಕಿಂಟೆಗೆ ಅವನ ತಾಯಿ ಹಳ್ಳಿಯ ಮುಂದಿರುವ ಟ್ರಾವಲರ್ಸ್ ಮರದ ಹತ್ತಿರಕ್ಕೆ ಯಾರಾದರು ಅಪರಿಚಿತ ಬರುವುದನ್ನು ಗಮನಿಸಲು ಹೇಳಿರುತ್ತಾಳೆ. ಅದರಂತೆ ಮರುದಿನ ಬಂದ ಘೆರಾಂಕ ಮಂತ್ರವಾದಿಯನ್ನು ಎಲ್ಲರೂ ಸ್ವಾಗತಿಸಿ ಬಾವೊಬಾಬ್ ಮರದ ಕೆಳಗೆ ಕುಳ್ಳಿರಿಸುತ್ತಾರೆ. ಮುಂದೆ ಅವನ ಮಾಯಾಮಂತ್ರ ನಡೆಯುತ್ತದೆ.

ನಮಗೆ ಊರ ಮುಂದೆ ಅರಳಿಮರದಂತೆ ಆಫ್ರಿಕಾದ ಬುಡಕಟ್ಟಿನ ಜನರಿಗೆ 'ಟ್ರಾವಲರ್ಸ್ ಟ್ರೀ' ಎಂಬ ಮರ. ಆಫ್ರಿಕಾದಲ್ಲಿ ನಡೆದು ಪ್ರಯಾಣ ಮಾಡುತ್ತಿರುವಾಗ ಒಂದು ಟ್ರಾವಲರ್ಸ್ ಮರ ಕಂಡರೆ ಅಲ್ಲೊಂದು ಹಳ್ಳಿ ಇದೆಯೆಂದು ಅರ್ಥ. ಈ ಟ್ರಾವಲರ್ಸ್ ಮರದ ಹತ್ತಿರ ರಸ್ತೆ ಕವಲೊಡೆಯುತ್ತದೆ. ಟ್ರಾವಲರ್ಸ್ ಮರದ ಹತ್ತಿರ ಪ್ರಯಾಣಿಕ ಬಂದ ದಾರಿಯಲ್ಲೇ ಮುಂದೆ ಸಾಗಬಹುದು ಇಲ್ಲವೇ ಇನ್ನೊಂದು ಕವಲು ಹಿಡಿದು ಹಳ್ಳಿಯೊಳಕ್ಕೆ ಹೋಗಬಹುದು. ಸಾಮಾನ್ಯವಾಗಿ ಟ್ರಾವಲರ್ಸ್ ಮರದ ಹತ್ತಿರ ಮಕ್ಕಳು ಕಾಣಿಸಿಕೊಂಡು ಅಲ್ಲೊಂದು ಜನ ವಾಸ್ತವ್ಯ ಇರುವುದನ್ನು ಖಚಿತಪಡಿಸುತ್ತಾರೆ.

ಆ ಬುಡಕಟ್ಟಿನ ಜನರ ಜೀವನದಲ್ಲಿ ಬಾವೊಬಾಬ್ ಹೇಗೆ ಮಿಳಿತವಾಗಿದೆ ಎನ್ನುವುದನ್ನು ಆ ಹಳ್ಳಿಯಲ್ಲಿ ಸುಗ್ಗಿಹಬ್ಬಕ್ಕಾಗಿ ಅವರು ನಡೆಸುವ ತಯಾರಿಯನ್ನು ಗಮನಿಸಿ ತಿಳಿದುಕೊಳ್ಳಬಹುದು. ಹಳ್ಳಿಯ ಹಬ್ಬದ ಸಂಭ್ರಮದಲ್ಲಿ ದೊಡ್ಡ ಹುಡುಗರು ಕವಣೆ ಬೀರುವ ಆಟವಾಡುತ್ತಿರುತ್ತಾರೆ. ಚಿಕ್ಕಮಕ್ಕಳಿಗೆ ಹಳ್ಳಿಯಲ್ಲಿ ಅಲೆದಾಡುವುದೇ ಒಂದು ಮೋಜು. ಹಳ್ಳಿಯ ಅಜ್ಜಿಯರಿಗೆ ಸುಗ್ಗಿಹಬ್ಬದಲ್ಲಿ ಬಿಡುವಿಲ್ಲದ ಕೆಲಸ. ಅಜ್ಜಿಯರು ಮದುವೆಯಾಗದ ಹುಡುಗಿಯರ ಅಲಂಕಾರಕ್ಕಾಗಿ ಕೃತಕ ತುರುಬು, ಜಡೆಗಳು ಮತ್ತು ತಲೆತುಂಬ ಧರಿಸುವ ವಿಗ್‌ಗಳನ್ನು ಬಾವೊಬಾಬ್‌ನ ನಾರಿನಿಂದ ತಯಾರಿಸುತ್ತಿದ್ದಾರೆ. ಅದಕ್ಕಾಗಿ ಅವರು ಬಾವೊಬಾಬ್ ತೊಗಟೆಯನ್ನು ನೀರಿನಲ್ಲಿ ನೆನೆಹಾಕಿದ್ದಾರೆ. ನ್ಯೂಬೊಟ್ ಎಂಬ ಮುದುಕಿ ಹಾದಿಬದಿಯ ಹೆಂಗಸರನ್ನು ಛೇಡಿಸುತ್ತ, ಬಾವೊಬಾಬ್‌ನ ತುರುಬುಗಳನ್ನು ನೇಯುತ್ತ ಹಾಗೆಯೇ ಮಧ್ಯಾಹ್ನದ ಬಿಸಿಲಿನ ಝಳಕ್ಕೆ ನಿದ್ದೆಹೋಗಿ ಗೊರಕೆ ಹೊಡೆಯುತ್ತಿರುತ್ತಾಳೆ. ಪುಟ್ಟ ಮಕ್ಕಳು ಆ ಗೊರಕೆಯ ನಾದಕ್ಕೆ ಬಿದ್ದು ಬಿದ್ದು ನಗುತ್ತಿರುತ್ತಾರೆ. ಹಳ್ಳಿಯ ಸಂಗೀತಗಾರರು ತಮ್ಮ ಇಪ್ಪತ್ತೊಂದು ತಂತಿಗಳ ವಾದ್ಯ, ತಂತಿ ಕಟ್ಟಿದ ಸೋರೆ ಬುರುಡೆ ವಾದ್ಯಗಳನ್ನು ಸುಗ್ಗಿ ಹಬ್ಬಕ್ಕೆ ಸರಿಪಡಿಸಿಕೊಳ್ಳುತ್ತಿರುವಾಗ ಹಳ್ಳಿಯ ಹಿರಿಯ ಗಂಡಸರು ಬಾವೊಬಾಬ್ ಮರದ ನೆರಳಿನಲ್ಲಿ ವಿಶ್ರಮಿಸುತ್ತಿರುತ್ತಾರೆ. ಹೀಗೆ ಮಂಡೆಂಕಾ ಜನರ ದಿನನಿತ್ಯದ ಜೀವನದ ಆಹಾರ, ವಿಶ್ರಾಂತಿ,ಅಲಂಕಾರ, ಹಬ್ಬದ ಸಂಭ್ರಮ ಎಲ್ಲಕ್ಕೂ ಬಾವೊಬಾಬ್ ಪ್ರಧಾನ ಭಾಗಿ.

ಬಾವೊಬಾಬ್‌ನಂತೆಯೆ ಜಫ್ಯೂರ್‌ನ ಜನಜೀವನದಲ್ಲಿ ಬೆರತು ಹೋಗಿರುವ ಮತ್ತೊಂದು ಮರವೆಂದರೆ ಅದು ಬೂರುಗದ ಮರ. ಕಥಾನಾಯಕ ಕುಂಟಾಕಿಂಟೆ ಸ್ವತಃ ಎಂಟು ವರ್ಷದ ಚಿಕ್ಕ ಹುಡುಗನಾಗಿರುವಾಗಲೇ ತನ್ನ ತಮ್ಮ ಲ್ಯಾಮಿನ್‌ಗೆ ಒಂದು ಚಿಕ್ಕ ಬೀಜವನ್ನು ಬೆರಳುಗಳಲ್ಲಿ ಹಿಡಿದು ತೋರಿಸಿ, ಇಷ್ಟು ಚಿಕ್ಕ ಬೀಜ ಮಣ್ಣಿನಲ್ಲಿ ಮೊಳೆತು, ಚಿಗುರಿ ಅದ್ದೇಗೆ ತನ್ನ ಹಳ್ಳಿಯಲ್ಲಿರುವ ಬೃಹತ್ ಬೂರುಗದ ಮರವಾಗುತ್ತದೆ ಎಂದು ವಿವರಿಸುತ್ತಾನೆ. ಹೀಗೆ ಅಲ್ಲಿನ ಮಕ್ಕಳಿಗೆ ಪರಿಸರದ ಗಿಡಮರಗಳ ಪರಿಚಯ ಬಾಲ್ಯದಿಂದಲೇ ಪ್ರಾರಂಭವಾಗುತ್ತದೆ.

ಜಫ್ಯೂರ್‌ನಲ್ಲಿ ಒಂದು ಮಧ್ಯಾಹ್ನ ಅಲ್ಲಿನ ನಿವಾಸಿಗಳು ಬಿಸಿಲಿನ ತಾಪವನ್ನು ನೀಗಿಕೊಳ್ಳಲು ಬಾವೊಬಾಬ್ ಮರದ ನೆರಳಿನಲ್ಲಿ ಕುಳಿತಿರುತ್ತಾರೆ. ಆಗೊಂದು 'ನಗಾರಿ' ಸಂದೇಶ ಬರುತ್ತದೆ. ಆ ಸಂದೇಶದ ಮೂಲಕ ಕುಂಟಾಕಿಂಟೆಯ ಅಣ್ಣ ತಮ್ಮಂದಿರು ತಾವೊಂದು ಹೊಸಹಳ್ಳಿಯನ್ನು ನಿರ್ಮಿಸಿರುವುದಾಗಿಯೂ, ಕುಂಟಾನ ತಂದೆ ಒಮೆರೊ ಅಮಾವಾಸ್ಯೆಯ ಹೊತ್ತಿಗೆ ಬಂದು ಆಶೀರ್ವದಿಸಬೇಕೆಂದು ಕೇಳಿಕೊಳ್ಳುತ್ತಾರೆ. ಒಮೆರೊ ಪ್ರತಿಯಾಗಿ ಬರುವುದಾಗಿ ಪ್ರತಿ ಸಂದೇಶವನ್ನು ಜಲಿಬಾನ ಮುಖಾಂತರ ಕಳಿಸುತ್ತಾನೆ.

ತಂದೆಯ ಜತೆ ಕುಂಟಾಕಿಂಟೆಯೂ ಹೊರಡುತ್ತಾನೆ. ತಮ್ಮ ಹಳ್ಳಿಯ ಟ್ರಾವಲರ್ಸ್ ಮರವನ್ನು ದಾಟಿ ಹೋಗುವ ಮುಂಚೆ ಕುಂಟಾನ ತಂದೆ ಎರಡು ನೀಳವಾದ ವಸ್ತ್ರದ ತುಂಡುಗಳನ್ನು 'ಟ್ರಾವಲರ್ಸ್ ಟ್ರೀ' ಮರಕ್ಕೆ ಕಟ್ಟುತ್ತಾನೆ. ಈಗಾಗಲೇ ಗಾಳಿಯ ಹೊಡೆತಕ್ಕೆ ಹರಿದುಹೋಗಿರುವ ಬಟ್ಟೆಯ ತುಂಡುಗಳು ಮರದಿಂದ ನೇತಾಡುತ್ತಿರುತ್ತವೆ. ಪ್ರತಿಯೊಂದು ವಸ್ತ್ರದ ತುಂಡು ಒಬ್ಬೊಬ್ಬ ಪ್ರಯಾಣಿಕ... ಸುರಕ್ಷಿತ ಪ್ರಯಾಣವನ್ನು ಹಾರೈಸಿ ಕಟ್ಟಿರುವುದೇ ಆ...

ಪ್ರಯಾಣ ಮಾಡುತ್ತ ಅವರಿಗೆ ಸಿಗುವ ಹಳ್ಳಿ... ಕವಲಿನ ಟ್ರಾವಲರ್ಸ್ ಮರದ ಹತ್ತಿರ ಚಿಕ್ಕ ಚಿಕ್ಕ ಬ... ಹುಡುಗರು ಓಡಿಬಂದು ಪ್ರಯಾಣಿಕರನ್ನ ನೀವು ಎ... ಹೋಗುವಿರಿ? ನೀವು ಯಾವ ಹಳ್ಳಿಯವರು ಎ... ಪ್ರಶ್ನಿಸುತ್ತಾರೆ. ಹೀಗೆ ಇನ್ನೊಂದು ಹಳ್ಳಿಯ ಕವಲಿಗೆ ಬಂ... ಅವರು ಆ ಹಳ್ಳಿಯ ಬಾವೊಬಾಬ್ ಮರದ ಕ... ಕುಳಿತಿದ್ದ ಜನರನ್ನ ಕಂಡರು. ಆ ಹಳ್ಳಿಗರು ಇವ... ಸುಮ್ಮನೆ ವೀಕ್ಷಿಸಿದರು, ಆಗಂತುಕರನ್ನ ಸ್ವಾಗತಿಸಿ ವಿಚಾ... ಲಿಲ್ಲ, ಏಕೆಂದರೆ ಅವರು ಮೌಖಿಕ ಚರಿತ್ರೆಕಾರನ... ಮಂಡೆಂಕಾ ಜನರ ಹಿರಿಮೆಯನ್ನು ಹಾಡುತ್ತಿದ್ದು... ಆಲಿಸುತ್ತಿದ್ದರು.

ಅವರು ಮುಂದೆ ಸಾಗಿದಂತೆ ಸಂಜೆಯಾಗಿ ... ಸೂರ್ಯ ಮುಳುಗತೊಡಗಿದ. ಆಗ ಕುಂಟಾಕಿಂಟೆಗೆ ಹತ್ತಿರ... ದಟ್ಟವಾದ ಹೊಗೆ ಏಳುತ್ತಿರುವುದು ಕಂಡು ಅಲ್ಲೊ... ಹಳ್ಳಿ ಇರುವುದು ಖಚಿತವಾಯಿತು. ಆಗಂತುಕರನ್ನು ಕಂ... ಓಡಿ ಬರಬೇಕಾಗಿದ್ದ ಪುಟ್ಟ ಹುಡುಗರು ಓಡಿಬ... ಇಲ್ಲ, ಹಳ್ಳಿಯ ಬಾವೊಬಾಬ್ ಮರ ಅರ್ಧಂಬ... ಬೆಂದುಹೋಗಿತ್ತು. ಆ ಹಳ್ಳಿಯಲ್ಲಿ ಕೇವಲ ರೋಗಿಗ... ಮುದುಕರು, ಅಳುವ ಒಂದೆರಡು ಮಕ್ಕಳನ್ನ ಬಿ... ಪುಟ್ಟ ಹುಡುಗರು, ತರುಣರು ಇರಲೇಇಲ್ಲ . ಕು... ಮತ್ತವನ ತಂದೆಯನ್ನು ಕಂಡ ಒಬ್ಬ ಮುದುಕ ಇವರಿ... ನೀರು ತರಲು ಒಬ್ಬ ಮುದುಕಿಗೆ ಹೇಳಿ, ತಮ್ಮ ಹಳ್ಳಿ... ಕತೆ ಹೇಳತೊಡಗಿದ. "ಗುಲಾಮರನ್ನಾಗಿಕೊಳ್ಳ... ಆದಿವಾಸಿಗಳನ್ನ ಹಿಡಿಯುವ ಜನರು ಆ ಹಳ್ಳಿ... ಹುಡುಗರು, ತರುಣರನ್ನ ಸೆರೆ ಹಿಡಿದು, ವೃದ್ಧರನ್ನು ... ಉಳಿಸಿದರು, ನಾವು ಕಾಡಿಗೆ ಓಡಿಹೋಗಿದ್ದೆವು; ... ನಮ್ಮಲ್ಲಿ ತಿನ್ನಲು ಏನೂ ಇಲ್ಲ, ಬೆಳೆಗಳನ್ನು ಬೆಳೆಯ... ತರುಣ ಜನರಿಲ್ಲ, ನಾವು ಕ್ರಮೇಣ ಸಾಯುತ್ತೇವೆ." ಒಮೆರೊ ತಮ್ಮ ಅಣ್ಣತಮ್ಮಂದಿರು ಹೊಸದಾಗಿ ಕಟ್ಟಿ... ಹಳ್ಳಿಗೆ ಬನ್ನಿ ಎಂದು ಆಹ್ವಾನಿಸುತ್ತಾನೆ. ಆಗ ಆ ಹಳ್ಳಿ... ಎಲ್ಲರೂ ತಲೆಯಾಡಿಸುತ್ತಾರೆ. ಮುಖ್ಯಸ್ಥ ಹೇಳುತ್ತಾನೆ, "... ನಮ್ಮ ಹಳ್ಳಿ, ನಮ್ಮ ಬಾವಿಯ ನೀರಿನಷ್ಟು ಸಿಹಿಯ... ನೀರು ಇನ್ನೆಲ್ಲೂ ಇಲ್ಲ, ನಮ್ಮ ಹಳ್ಳಿಯ ಬಾವೊಬಾ... ಮರದ ನೆರಳಿನಷ್ಟು ತಂಪಾದ ತಾಣ ಇನ್ನೆಲ್ಲೂ ... ನಾವು ಇಲ್ಲೇ ಇರುತ್ತೇವೆ."

ಹೀಗೆ ಮುಂದೆ ಸಾಗುತ್ತಿರುವಾಗ ತಂದೆ ... ಇಬ್ಬರಿಗೂ ಟ್ರಾವಲರ್ಸ್ ಮರ, ಹಳ್ಳಿ, ಹಳ್ಳಿ... ವರದಿಗಾರರಾದ ಚಿಳ್ಳೆಪಿಳ್ಳೆ ಹುಡುಗರು ಸಿಗುತ್ತಿ... ಹೀಗೊಂದು ಟ್ರಾವಲರ್ಸ್ ಮರದ ಹತ್ತಿರದ ... ಸ್ತಬ್ಧವಾಗಿತ್ತು, ಮಕ್ಕಳು ಓಡಿಬರಲಿಲ್ಲ, ಆದರೆ ಮುಂ... ಹಳ್ಳಿಯ ಹುಡುಗರು ಖಾಲಿ ಹಳ್ಳಿಯ ಕತೆ ಹೇಳಿ... ಆ ಹಳ್ಳಿಯ ಮುಖ್ಯಸ್ಥ ತನ್ನ ಜನರ ಅಭಿಪ್ರಾ... ವಿರುದ್ಧವಾಗಿ ವರ್ತಿಸುತ್ತಿದ್ದುದರಿಂದ ಹಳ್ಳಿಗರೆಲ್ಲ... ಗಂಟುಮೂಟೆ ಕಟ್ಟಿಕೊಂಡು ನೆಂಟರು, ಸ್ನೇಹಿತರ ಹಳ್ಳಿ... ಪರಾರಿಯಾಗಿದ್ದರಂತೆ. ಕತ್ತಲಾಗುತ್ತ ಬಂದದ್ದರಿಂದ ಆ... ಹಳ್ಳಿಯ ಪ್ರವೇಶ ಮಾಡಿದರು. ಆ ಹಳ್ಳಿಯ ... ಬಾವೊಬಾಬ್ ಮರದ ಕೆಳಗೆ ಕುಳಿತು ಖಾಲಿಯಾ... ಹಳ್ಳಿಯ ವಿಷಯ ಹರಟುತ್ತಿದ್ದರು. ಕುಂಟಾನ ತಂದೆ ಹ... ಜಲಿಬಾನ ಹತ್ತಿರ ಹೋಗಿ ಮಾತಾಡುವ 'ನಗಾರಿ' ಮ... ತನ್ನ ಅಣ್ಣತಮ್ಮಂದಿರಿಗೆ ನಾಳೆ ಅವರಲ್ಲಿಗೆ ತಲುಪುವು... ಸಂದೇಶ ಕಳಿಸಿದ. ಈ ಸಂದೇಶ ದಾರಿಯ ಎಲ್ಲ ಹ... ಮಾತಾಡುವ ನಗಾರಿಗಳನ್ನು ತಲುಪಿತ್ತು. ಇದರಿಂ... ಪ್ರತಿ ಹಳ್ಳಿಯ ಕವಲಿನಲ್ಲೂ ಬೆತ್ತಲೆ ಹುಡುಗರ ಸ... ದೊಡ್ಡವರೂ ಈ ತಂದೆ ಮಗನನ್ನು ಸ್ವಾಗತಿಸಿದರು. ... ಪ್ರೀತ್ಯಾದರಗಳನ್ನು ತಿರಸ್ಕರಿಸಲಾಗದೆ ತಂದೆ ಮಗ ಇಬ... ಬಾವೊಬಾಬ್ ಮತ್ತು ಬೂರುಗದ ಮರಗಳ ನೆರ... ಕುಳಿತು ಹಳ್ಳಿಗಳ ಜನರೊಡನೆ ಆಹಾರ ಪಾನ... ಸೇವಿಸಿದರು.

ತಂದೆ ಮಗ ವೇಗವಾಗಿ ಬರುತ್ತಿರುವಾಗ ...

...ಯಾಗಿ ಸುಚಿಯನ್ನು ಸಾರುತ್ತಿರುವಾಗ ಸನಿಹದ ... ಹೊಗೆ ಏಳುವುದನ್ನು ಕಂಡರು. ಅಲ್ಲಿ ...ಬ್ ಸಿಪ್ಪೆಗಳಿಗೆ ಬೆಂಕಿ ಹಾಕಿದ್ದರಿಂದ ಅವುಗಳಿಂದ ...ವಾಗಿ ಹೊಗೆ ಏಳುತ್ತಿತ್ತು, ಸೊಳ್ಳೆಗಳನ್ನು ಓಡಿಸಲು ...ಪಾಯ ಮುಖ್ಯವಾದ ಅತಿಥಿಗಳಿಗೆ ಹೀಗೆ ...ತ್ತಾರೆಂದು ಕುಂಟಾಕಿಂಟೆಗೆ ಗೊತ್ತಿತ್ತು, ನೂತನ ...ಟ್ರಾವಲರ್ಸ್ ಮರದ ಮೇಲೆ ಪ್ರಾರ್ಥನಾ ವಸ್ತ್ರಗಳು ...ಕ್ಕಿದ್ದವು. ಕುಂಟಾಕಿಂಟೆಯ ದೊಡ್ಡಪ್ಪಂದಿರು ... ಕೂಗಾಟ, ಕುಣಿತಗಳೊಡನೆ ಇವರನ್ನು ...ದರು.

...ಸದಾಗಿ ಕಟ್ಟಿದ ಹಳ್ಳಿಯಲ್ಲಿ ಮಂಡೆಂಕಾ ಬುಡಕಟ್ಟಿನ ...ಲೀರೆ ಬಣಗಳ ಜನ ಸೇರಿದ್ದರು. ಜಾತ್ರೆಯ ...ಲ್ಲಿ ವಯಸ್ಸಾದ ಹೆಂಗಸರು ಕೋಲಾನಟ್‌ಗಳ ...ಮಾಡುತ್ತಿದ್ದರು. ಹಲ್ಲುಗಳಿಗೆ ಕಿತ್ತಲೆ ಬಣ್ಣ ಬರಿಸುವ ...ನಟ್. ಪ್ರೌಢ ಹೆಂಗಸರಿಗಾದರೆ, ಪ್ರಾಯದ ...ಯುರು ಬಾವೊಬಾಬ್‌ನ ಬ್ರೋಚ್‌ಗಳನ್ನು ...ದ್ದರು. ಹೊಸ ಹಳ್ಳಿಯ ಹೆಂಗಸರು ಅನೇಕ ಬಗೆಯ ...ನ್ನು ತಯಾರಿಸಿ ಬಾವೊಬಾಬ್ ಮರದ ನೆರಳಿನಲ್ಲಿ ...ಮೇಲೆ ಜೋಡಿಸಿದ್ದರು. ಯಾರು ಎಷ್ಟು ಬೇಕಾದರು ...ದಿತ್ತು. ಹೀಗೆ ಆ ಜನಾಂಗದ ಆಹಾರ ವಿಹಾರ ...ಬದುಕಿನಲ್ಲಿ ಬಾವೊಬಾಬ್ ಬೆರೆತುಹೋಗಿತ್ತು. ...ಟಾಕಿಂಟೆ ತನ್ನ ಜನಾಂಗದ ಪದ್ಧತಿ ಪ್ರಕಾರ ...ಯುಕ್ಕೆ ಬಂದ ಗಂಡು ಹುಡುಗರು ...ಬೇಕಾದ ಪ್ರಬುದ್ಧ ಪುರುಷನಿಗೆ ತಕ್ಕುದಾದ ... ಪಡೆದು ತನ್ನ ಹಳ್ಳಿಗೆ ಹಿಂತಿರುಗುತ್ತಾನೆ. ಆಗ ... ಎಲ್ಲವೂ ಅವನಿಗೆ ಹೊಸದಾಗಿ ಕಾಣುತ್ತದೆ. ... ಮೂಲೆಮೂಲೆಗಳನ್ನು, ಬಾವಿ, ಶಾಲೆ ನಡೆವ ...ಬಾವೊಬಾಬ್ ಮತ್ತು ಬೂರುಗದ ಮರಗಳನ್ನು ...ಸುತ್ತೆ ನೋಡುತ್ತಾನೆ. ಅನಂತರ ತನ್ನ ನೆಚ್ಚಿನ ... ಅಜ್ಜಿಯನ್ನು ನೋಡಲು ಹೋಗುತ್ತಾನೆ. ...ನ ಒಳಗೆ ನ್ಯೊಬುಟೊ ಬಕೆಟ್‌ನಲ್ಲಿ ನೆನೆಹಾಕಿದ್ದ ...ಬಾಬ್ ತೊಗಟೆಯಿಂದ ನಾರುಗಳನ್ನು ...ತ್ತಿರುತ್ತಾಳೆ. ಪ್ರಬುದ್ಧ ಗಂಡಸಾಗಿ ಬಂದಿರುವ ...ಂಟೆಯ ಬಗ್ಗೆ ಅವಳು ಮೊದಲಿನ ಸಲಿಗೆ ...ವುದಿಲ್ಲ. ಆ ಜನಾಂಗ ಪುರುಷರ ಪ್ರಬುದ್ಧತೆಗೆ ...ವ ಮರ್ಯಾದೆ ಇದು.

... ತಿಂಗಳು ಜಫ್ಯೂರ್‌ನಲ್ಲಿ ಬಾವೊಬಾಬ್ ಮರದ ...ಹಳ್ಳಿಯ ಹಿರಿಯರ ಸಭೆ ಸೇರುತ್ತದೆ. ಆಗ ತಾನೆ ...ಯ ತರಬೇತಿ ಪಡೆದು ಬಂದ ಕುಂಟಾಕಿಂಟೆಗೆ ... ಹೊರ ಅಂಚಿನಲ್ಲಿ ಕುಳಿತುಕೊಳ್ಳುವ ಅವಕಾಶ ... ಅತ್ಯಂತ ಹಿರಿಯರು ಬಾವೊಬಾಬ್‌ನಷ್ಟೇ ...ಗಿರುತ್ತಾರೆ. ಇಂಥ ಸಭೆಗಳಲ್ಲಿ ಹಳ್ಳಿಯ ಭೂವಿವಾದ, ...ವ್ಯಾಜ್ಯ, ಗಂಡ ಹೆಂಡಿರ ಜಗಳ ಮುಂತಾದವುಗಳನ್ನು ...ಸುತ್ತಾರೆ. ಕುಂಟಾಕಿಂಟೆ ತಮ್ಮ ಲ್ಯಾಮಿನ್ ಜತೆ ...ಚಿನ್ನದ ಬೇಟೆಗೆ ಹೊರಡುತ್ತಾನೆ. ಹಸಿರು ಕಾಡು, ...ರಗಳ ಕಾಡನ್ನು ಕ್ರಮಿಸಿ, ಅವರು ಒಂದು ಹುಲ್ಲು...ದ ಮರಳು ಭೂಮಿಗೆ ಬರುತ್ತಾರೆ. ಅಲ್ಲೊಂದು ...ವಾದ ಬಾವೊಬಾಬ್ ಮರ ಮತ್ತು ಅದರ ಸುತ್ತಲೂ ...ಕಾಯಿಗಳು ಬಿದ್ದಿರುವುದನ್ನು ಕಂಡರು. ಚಿನ್ನದ ... ಹೊರಟಾಗ ಬೇರೊಂದು ಹಳ್ಳಿಯ ಹುಡುಗರು ... ಡೊಳ್ಳುಬೊಡ್ಡೆಯ ಬಾವೊಬಾಬ್ ಮರ ಇದೇ ...ಕುಂಟಾಕಿಂಟೆ ಗುರುತಿಸಿಕೊಂಡ. ಈ ಬಾವೊಬಾಬ್ ...ನ ಮಾರ್ಗದರ್ಶಿ ಸ್ನೇಹಿತರು ಹೇಳಿದ್ದ ವಿವರಗಳನ್ನು ...ಲ್ಯಾಮಿನ್‌ಗೆ ಕುಂಟಾಕಿಂಟೆ ಹೀಗೆ ಹೇಳುತ್ತಾನೆ. ... ಈ ಬಾವೊಬಾಬ್ ನೂರಾರು ವರ್ಷಗಳಷ್ಟು ...ದು. ಈಗ ಇದು ಸಾಯುತ್ತಿದೆ. ನಮ್ಮ ಜನಾಂಗದ ...ಲದ ಚರಿತ್ರೆಯನ್ನು ಮನಸ್ಸಿನಲ್ಲೇ ಇಟ್ಟುಕೊಂಡು, ... ತಕ್ಕ ಸಮಯದಲ್ಲಿ ಮೌಖಿಕವಾಗೇ ಹೇಳುವ ...ರಿತ್ರೆಕಾರರು ಸಾವನ್ನಪ್ಪಿದಾಗ ಅವರನ್ನು ಸಾಮಾನ್ಯರಂತೆ ... ಮಾಡುವುದಿಲ್ಲ, ಇಂತಹ ನೂರಾರು ವರ್ಷಗಳ ...ಬಾಬ್‌ನ ಡೊಳ್ಳು ಶರೀರದೊಳಗೆ ಇರಿಸುತ್ತಾರೆ. ... ನಮ್ಮ ಮೌಖಿಕ ಚರಿತ್ರೆಕಾರರ ತಲೆಗಳಲ್ಲಿ ತುಂಬಿ...ಷ್ಟು ಚರಿತ್ರೆ ಹಾಗೂ ಈ ಪುರಾತನ ಬಾವೊಬಾಬ್ ... ಕಾಲಾತೀತವಾದವು."

...ಗೆ ಆಫ್ರಿಕಾದ ಆ ಹಳ್ಳಿಯ ಸಮಸ್ತ ಕಪ್ಪು ಜನರ ... ಮೂಕಸಾಕ್ಷಿಯಾಗಿ, ಅವರ ಬದುಕಿನ ಅವಿಭಾಜ್ಯ ... ಆಗಿಬಿಡುತ್ತದೆ ಬಾವೊಬಾಬ್.

... ಕಥಾನಕದ ಉತ್ತರಾರ್ಧದಲ್ಲಿ ಕುಂಟಾಕಿಂಟೆ ...ಕೊಸಗಾಗಿ ಅನಿವಾರ್ಯವಾಗಿ ಅಮೆರಿಕಾದಲ್ಲಿ ...ಲೀಕನೊಬ್ಬನ ಗುಲಾಮನಾಗಬೇಕಾಗುತ್ತದೆ. ...ದು ಆಫ್ರಿಕಾ ಅವನಿಗೆ ನಿಲುಕದ ನಕ್ಷತ್ರವಾಗುತ್ತದೆ. ... ಅವನ ಒಡೆಯನ ತಾಯ್ನಾಡಿನಲ್ಲಿ ಹರಿವ ಹಳ್ಳ, ... ದೋಣಿ, ಬಾವೊಬಾಬ್ ಇವೆಲ್ಲದರ ನೆನಪು ...ವಾಗಿದ್ದು ಆ ನೆನಪನ್ನ ತನ್ನ ಮಗಳಿಗೆ ದಾಟಿಸುತ್ತಾನೆ. ... ಸಂತತಿ ಪೀಳಿಗೆಯಿಂದ ಪೀಳಿಗೆಗೆ ಕುಂಟಾನ ..., ಹೇಳುತ್ತ ತಮ್ಮ ಪೂರ್ವಜರ ನೆನಪನ್ನು ...ಕೊಳ್ಳುತ್ತಾರೆ. ಒಂದು ಸಂತತಿಯಿಂದ ಮುಂದಿನ ... ಹರಿದುಬಂದ ಅಗಾಧವಾದ ಈ ನೆನಪುಗಳೇ ... ಕೃತಿಯಾಗುತ್ತದೆ.


● ಸದಾ ಶ್ರೀರಾಮ

ಮುಂದೆ ಕುಮಾರಣ್ಣ, ಈಶ್ವರಣ್ಣಂದೇ ರಾಜ್ಯಭಾರ ಕಂಡ್ರಿ!

ಥೂತ್ತೇರಿ

▸ ಯಾಹೂ

"ಮತ್ತೆ ಬರಲಿದೆ ಸಮಾಜವಾದ" ಎಂದು ಸಮಾಜವಾದಿಗಳಿಗೇ ಆತಂಕ ಹುಟ್ಟಿಸುತ್ತಿದ್ದ ಅಪ್ಪಟ ಸಮಾಜವಾದಿ ಡಿ.ಎಸ್. ನಾಗಭೂಷಣರು ನರೇಂದ್ರ ಮೋದಿಯ ಒಂದು ತಿಂಗಳ ಆಡಳಿತವನ್ನು ಕೊಂಡಾಡಿದರಲ್ಲಾ, ಅವರು ಕೊಂಡಾಡಿದ ಪರಿಗೆ ಬೆಚ್ಚಿಬಿದ್ದ ಚೆಡ್ಡಿಗಳು "ಇನ್ನು ಮುಂದೆ ನಮ್ಮ ಅಜೆಂಡಾಗಳ ಕರಪತ್ರಗಳಾದ 'ವಿಕ್ರಮ', 'ಉತ್ಥಾನ' ಮತ್ತು 'ಆರ್ಗನೈಜರ್' ಪತ್ರಿಕೆ ಬದಲಿಗೆ ಡಿ.ಎಸ್. ನಾಗಭೂಷಣರ 'ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗಬೇಕು" ಎಂಬ ತೀರ್ಮಾನ ತೆಗೆದುಕೊಂಡರಂತಲ್ಲಾ, ಮೋದಿಯ ಆಡಳಿತದ ಆರಂಭವನ್ನು ಕೊಂಡಾಡಿರುವ ನಾಗಭೂಷಣ ಅದೇ ಮೋದಿಯ ಸಂಘ ಪರಿವಾರದ ಅಜೆಂಡಾಗಳ ಅನುಷ್ಠಾನದ ನಿರ್ಧಾರಗಳ ಬಗ್ಗೆ ಸಹಜವಾಗಿಯೇ ಅನುಮಾನ ವ್ಯಕ್ತಪಡಿಸಿದರೂ ಕೂಡ, ಅದನ್ನೇನು ಚೆಡ್ಡಿಗಳು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲವಂತಲ್ಲಾ, "ಮೋದಿಯ ಆರಂಭದ ಆಡಳಿತ ವೈಖರಿಯನ್ನು ನಾವೆಂದೂ ಇಂತಹ ಸಾಹಿತ್ಯದ ಪದಪುಂಜಗಳಿಂದ ಬರೆಯಲಾಗುವುದಿಲ್ಲ, ಆದ್ದರಿಂದ ಮುಂದೆ ರಾಜ್ಯದಲ್ಲಿ ನಮ್ಮ ಸರ್ಕಾರ ಬಂದಾಗ,



ಅವರಿಗೆ ಯಾವುದಾದರೂ ಸ್ಥಾನಮಾನ ಕೊಟ್ಟು ಅತ್ಯಂತ ಗೌರವದಿಂದ ನಡೆಸಿಕೊಳ್ಳಬೇಕು. ಏಕೆಂದರೆ ಲೋಹಿಯಾ ವಾದಿಯಾಗಿದ್ದ ನಾಗಭೂಷಣ ಮೋದಿವಾದಿಯಾಗುವುದು ಸಾಮಾನ್ಯ ಸಂಗತಿಯಲ್ಲ, ಇದೆಲ್ಲಕ್ಕಿಂತ ಮುಖ್ಯವಾಗಿ ನಮ್ಮ ಬಿಜೆಪಿ ಲೇಖಕರಿಗಿಂತಲೂ ಕಾಂಗ್ರೆಸ್ಸನ್ನು ಹಿಗ್ಗಾಮುಗ್ಗಾ ಟೀಕಿಸುತ್ತಿರುವ ಅದ್ಭುತ ವರದಿಗಾರ ಮತ್ತು ಬಿಎಸ್‌ಆರ್ ವಕ್ತಾರನಾದ ರವೀಂದ್ರ ರೇಶ್ಮೆಯನ್ನು ನಮ್ಮ ಸರ್ಕಾರ ಬಂದ ಕಾಲಕ್ಕೆ ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರರನ್ನಾಗಿ ನೇಮಿಸಿಕೊಳ್ಳಬೇಕು" ಎಂದು ಚರ್ಚಿಸಿದರಂತಲ್ಲಾ, ಇದೇನೆ ಆಗಲಿ, ಅಂತೂ ಅಪರೂಪಕ್ಕಾದರೂ ನಾಗಭೂಷಣ ಮತ್ತು ರವೀಂದ್ರ ರೇಶ್ಮೆ ಒಂದಾದರಲ್ಲಾ, ಜೈ ಲೋಹಿಯಾ, ಜೈ ಲಂಕೇಶ್, ಥೂತ್ತೇರಿ!!

****

ಗಾಂಧಿ ನಾಡಿನಿಂದ ಬಂದ ಮೋದಿ ತನ್ನ ಭಾಷಣದಲ್ಲೆಂದೂ ಗಾಂಧೀಜಿಯನ್ನು ಉಲ್ಲೇಖಿಸಿದವನಲ್ಲ, ಆದರೆ ಭಾರತದ ಪ್ರಧಾನಿಯಾದಾಗ ಅನಿವಾರ್ಯವಾಗಿ ರಾಜ್‌ಘಾಟ್‌ಗೆ ತೆರಳುವ ಪ್ರಸಂಗ ಬಂತು. ಹಾಗೆಯೇ ಪ್ರಧಾನಮಂತ್ರಿ ಕಾರ್ಯಾಲಯದಲ್ಲಿದ್ದ ಗಾಂಧೀ ಫೋಟೋಗೆ ನಮಸ್ಕರಿಸಬೇಕಾಯಿತು. ಇಷ್ಟವಿಲ್ಲದಿದ್ದರೂ ಕೂಡ ದೇಶಕ್ಕಾಗಿ ಇಂತಹ ತೋರಿಕೆಗಳು ಅನಿವಾರ್ಯ. ಈ ಬಗ್ಗೆ ಗಾಂಧಿ ಕೊಂದ ಪರಂಪರೆಯವರ ಶಿಷ್ಟಾಚಾರಗಳು ಕೂಡ ಕುತೂಹಲವೆ. ಆದರೆ ಲೋಹಿಯಾವಾದಿಗಳಿಗೆ ಇದೆಲ್ಲಾ ಮೋದಿಯ ದೊಡ್ಡತನದಂತೆ ಕಂಡಿರುವುದು ಸೋಜಿಗ. ಮೋದಿ ಕಾಲಿಗೆ ಬೀಳಲು ಬಂದವರನ್ನು ತಡೆದಿದ್ದು ಕೂಡ ಅದ್ಭುತ ಘಟನೆ. ಹೀಗೆ ಮೋದಿಯ ದೈನಂದಿನ ಚಟುವಟಿಕೆಯನ್ನೆಲ್ಲಾ ಇಂಚಿಂಚೂ ದಾಖಲಿಸಿ ರೋಮಾಂಚನಗೊಂಡಿರುವ ಕನ್ನಡದ ಈ ಕಟು ವಿಮರ್ಶಕರಿಗೆ, ಎಡೂರಪ್ಪನಂತಹ ಮೋದಿ ಭಾರತದ ಸಮಸ್ಯೆಗಳಿಗೆಲ್ಲಾ ಪರಿಹಾರ ಹಿಡಿದು ಬಂದ ಅವದೂತನಂತೆ ಕಂಡಿದ್ದಾನಲ್ಲಾ, ಕಾಣಲಿ ಅದಕ್ಕೇನಂತೆ. ಸದರಿ ಹರಿಕತೆ ದಾಸರಿಗೆ ಮೋದಿ ಬಂದ ದಾರಿಯ ವಿವರ ಕಾಣುವುದು ಬೇಡವೆ. ಅದೂ ಹೋಗಲಿ, ಮೋದಿಯ ಒಂದು ತಿಂಗಳ ಆಡಳಿತವನ್ನು ಸಿದ್ದರಾಮಯ್ಯನ ಒಂದು ವರ್ಷದ ಆಡಳಿತಕ್ಕೆ ಹೋಲಿಸಿ "ಸಿದ್ದೂದು ನಿಜಕ್ಕೂ ಅಸೂಕ್ಷ್ಮತೆಯ, ಜೋಭದ್ರಗೇಡಿ, ಭ್ರಷ್ಟ ಸರ್ಕಾರ" ಎನ್ನುವ ನಾಗಭೂಷಣರಿಗೆ ಅಗ್ರಭಾಗ್ಯದ ಕಾರ್ಯಕ್ರಮ ಅಗ್ಗದ ಜನಪ್ರಿಯ ಮತ್ತು ದುಬಾರಿ ಯೋಜನೆಯಂತೆಯೂ ಮತ್ತು ಸಿದ್ದೂ ವೈಯಕ್ತಿಕ ರಾಜಕಾರಣದ ತೆವಲಿನಂತೆಯೂ ಇದೆಯಂತಲ್ಲಾ, ಥೂತ್ತೇರಿ!!

****

ಇದ್ದಕ್ಕಿದ್ದಂತೆ ನಮ್ಮ ಕುಮಾರಣ್ಣನವರು ಸುನ್ನಿ ಸಾಬರು ಶಿಯಾ ಸಾಬರ ಮಸೀದಿಯ ಮೇಲೆ ಆನಾಮತ್ತು ಬಾಂಬ್ ಎಸೆದಂತೆ ನಮ್ಮ ವಿಧಾನ ಪರಿಷತ್ ಮೇಲೆ ನಲವತ್ತು ಕೆ.ಜಿ. ತೂಕದ ಬಾಂಬ್ ಎಸೆದುಬಿಟ್ಟರಂತಲ್ಲಾ, ಇದರಿಂದ ಜೆಡಿಎಸ್‌ನ ನಲವತ್ತು ಶಾಸಕರು ಚಿಂದಿಯಾಗಿ ಇಲ್ಲೇ ಇರುವುದೋ, ಬಿಜೆಪಿ ಅಥವಾ ಕಾಂಗ್ರೆಸ್ ಕಡೆ ಹೋಗುವುದೋ, ಉಳಿದ ನಾಲ್ಕು ವರ್ಷ ಏನು ಮಾಡುವುದು ಎಂದು ಚಿಂತಿಸುತ್ತಿದ್ದಾರಂತಲ್ಲಾ. "ಎಲ್ಲ ಪಾರ್ಟಿಗಳ ಒಳ ಚರ್ಚೆಯಲ್ಲೂ ಕುಮಾರಣ್ಣ ಸತ್ಯವನ್ನೇ ಹೇಳಿದ್ದಾರೆ. ಆತ ಮುಖ್ಯಮಂತ್ರಿಯಾದದ್ದು ಗಣಿ ಹಣದಿಂದ. ರೆಸಾರ್ಟ್ ಖರ್ಚುಗಳೂ ಕೂಡ ಸರ್ಕಾರಿ ಹಣದಿಂದಲೇ ನಡೆದಿವೆ. ಹೀಗೆ ಜೆಡಿಎಸ್ ಎಂಬ ಪಿತೃಪಕ್ಷಕ್ಕೆ ಸದ್ಯದಲ್ಲಿ ಯಾವ ಮೌಲ್ಯವೂ ಇಲ್ಲದೆ ಅರ್ಥಮೌಲ್ಯವನ್ನೇ ಅವಲಂಬಿಸಿ ಬದುಕಿ ಉಳಿದಿರುವ ಕಾರಣಕ್ಕೆ, ಆತ ಇನ್ನೇನು ಹೇಳಿಯಾನು? ವಾಸ್ತವವಾಗಿ ಸಿದ್ದರಾಮಯ್ಯ ಜೆಡಿಎಸ್‌ನಲ್ಲಿದ್ದಾಗ ಕೂಡ ದೇವೇಗೌಡರು ಸೀಟು ಮಾರಿ ತಂದ ಹಣದಿಂದಲೇ ಚುನಾವಣೆ ನಡೆಸಿದ್ದಕ್ಕೆ ದೇವೇಗೌಡರ ಫೈಲಿನಲ್ಲೇ ಓಚರ್ ಸಿಗುತ್ತವೆ. ಆದರೂ ಕುಮಾರಣ್ಣ ಸೀಟು ಮಾರಿ ರಾಜಕಾರಣ ಮಾಡುವ ಸತ್ಯವನ್ನು ಇಷ್ಟು ಬಹಿರಂಗವಾಗಿ ಹೇಳಬಾರದಿತ್ತು" ಎಂದು ರಾಜಕಾರಣಿಗಳು ಗಟ್ಟಿಯಾಗಿ ಮಾತನಾಡುತ್ತಿದ್ದಾರಂತಲ್ಲಾ, ಅವರ ಮಾತಿಗೆ ಉತ್ತರವನ್ನು ಕಂಡುಕೊಳ್ಳಲು ಕುಮಾರಣ್ಣನವರಿಗೇ ಫೋನ್ ಮಾಡಿದರೆ ಅವರು "ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ" ಎಂಬ ಸಂದೇಶ ಬಂತಲ್ಲಾ, ಕೂಡಲೇ, ಅನಿತಕ್ಕನ ವ್ಯಾಪ್ತಿ ಅಥವಾ ರಾಧಿಕ್ಕನ ವ್ಯಾಪ್ತಿ ಗೆಪ್ತಿಗೆ ಬಂದುಹೋಯ್ತಲ್ಲಾ, ಥೂತ್ತೇರಿ!!

****

ನಮ್ಮ ವಿಧಾನ ಪರಿಷತ್ತು ಯಾಕೋ ಏನೋ ಶೆಟ್ಟರ ಅಂಗಡಿಯ ಲುಕ್ಕಿನಲ್ಲಿ ಡಲ್ಲಾಗಿದ್ದು, ಸ್ವತಃ ಶಂಕರಮೂರ್ತಿಯೇ ಗಲ್ಲಾದ ಮೇಲೆ ಕುಳಿತ ಕೋಮಟಿಗ ಶೆಟ್ಟಿಯಂತೆ ಕಾಣುತ್ತಿದ್ದಾರಂತಲ್ಲಾ, ಹೀಗಿರುವಾಗ ತರಕಾರಿ ಅಂಗಡಿಗೆ ಕೋಡುಮುರುಕ ಬೀದಿ ದನ ನುಗ್ಗಿದಂತೆ ನಮ್ಮ ಈಶ್ವರಪ್ಪ ದಾಳಿಯಿಡಲಾಗಿ ಪರಿಷತ್ತಿಗೇ ಒಂದು ಕಳೆ ಬಂದಿದೆಯಂತಲ್ಲಾ, ಈ ಬಗ್ಗೆ ಈಶ್ವರಪ್ಪನಿಗೆ ಫೋನ್ ಮಾಡಿ ಅಭಿನಂದಿಸದಿದ್ದರೆ ನಮ್ಮ ನಾಲಿಗೆ ಸೇದಿ ಹೋಗುವುದು ಗ್ಯಾರಂಟಿ ಎಂದು ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಗಂಡೂ ಎಂದರೆ ಗಂಡೂ ಭೂಪತಿ ಗಂಡು...."

"ಹಲೋ ಯಾರ್ರಿ?"

"ನಾನು ಸಾರ್ ಯಾಹೂ."

"ಏನೇಳ್ರಿ ಯಾಹು ಚೆನ್ನಾಗಿದ್ದೀರೇನ್ರಿ?"

"ಕಂಗ್ರಾಜುಲೇಷನ್ ಸಾರ್. ಅಂತೂ ವಿಧಾನಪರಿಷತ್ತಿಗೆ ಬಂದು ಶಂಕರಮೂರ್ತಿನ ಉಳಿಸಿಕೊಂಡ್ರಿ."

"ಶಂಕರಮೂರ್ತಿ ನಮಗೆ ತಂದ ಇದ್ದಂಗೆ ಕಂಡ್ರಿ. ತಂದೆ ಋಣ ತೀರಿಸಿದೆ ಅಷ್ಟೆ."

"ಅವುರು ಶೆಟ್ರು. ನೀವು ಕುರುಬ್ರು. ಅದ್ಯಾಗೆ ಸಾರ್ ತಂದೆ?"

"ಅದ್ಕೆ ಕಂಡ್ರಿ, ನಿಮಗೆ ತಲೆಯಿಲ್ಲ ಅನ್ನದು. ಶಂಕರಮೂರ್ತಿ ನನಗೆ ತಂದೆ ಸಮಾನ ಅಂದೆ ಅಷ್ಟೆ. ತಂದೆ ಅಂತ ಹೇಳಿದ್ನ?"

"ಸಾರಿ ಸಾರ್. ನಿಜಕ್ಕೂ ನಿಮ್ಮ ಬಳಗ ಬಹಳ ದೊಡ್ಡದು ಸಾರ್. ಪೇಜಾವರ ನಿಮಗೆ ಕೃಷ್ಣ ಇದ್ದಂಗೆ. ಎಡೂರಪ್ಪ ಅಣ್ಣ ಇದ್ದಂಗೆ. ಆ ಕುಮಾರಸ್ವಾಮಿ ತಮ್ಮ ಇದ್ದಂಗೆ. ಮುಂದೆ ನಿಮ್ಮದು ಮತ್ತು ಕುಮಾರಣ್ಣಂದೆ ರಾಜ್ಯಭಾರ ಅನ್ನಂಗೆ ಕಾಣ್ತದೆ ಸಾರ್."

"ಕಾಣದೇನು? ಬರದಿಟ್ಟಗಳಿ. ಈ ಸಿದ್ದರಾಮಯ್ಯನ ಸರ್ಕಾರ ಇದೆ ಅಂತನೆ ಅನುಸ್ತಾಯಿಲ್ಲ, ನಾನು ಮತ್ತು ಕುಮಾರಣ್ಣ ಪವರ್ರಿಗೆ ಬಂದ್ರೆ ಮುಂದೆ ಇಪ್ಪತ್ತು ವರ್ಷ ನಮ್ಮದೆ ರಾಜ್ಯಭಾರ."

"ಅಂಗರೆ ಇನ್ನು ಮುಂದೆ ಇಪ್ಪತ್ತು ವರ್ಷಕ್ಕೊಂದು ಚುನಾವಣೆನಾ ಸಾರ್?"

"ಅಂಗಲ್ಲ ಕಂಡ್ರಿ. ನಾವೇ ನಾಲ್ಕು ಬಾರಿ ಅಧಿಕಾರಕ್ಕೆ ಬರ್ತಿವಿ."

"ಅಂತ ದಿನ ನೋಡೋ ಅದೃಷ್ಟ ನಮಗಿಲ್ಲ ಸಾರ್. ನಾವೇನಿದ್ರು ಇನ್ನು ಐದಾರು ವರ್ಷ ಇರಬವುದಷ್ಟೆ."

"ಯಾಕ್ರಿ? ಆಗ್ಲೆ ಅಷ್ಟು ವಯಿಸಾಯ್ತೆ?"

"ಶುಗರ್ರು, ಬಿ.ಪಿ. ಸಮಸ್ಯೆ ಸಾರ್. ಅದ್ಕೆ ಅಂಗಂದೆ. ಅಂತೂ ನಿಮ್ಮ ವೈರಿ ಎಡೂರಪ್ಪನ ಎದುರಿಗೆ ಶೆಡ್ಡು ಹೊಡೆದು ವಿಧಾನ ಪರಿಷತ್‌ಗೆ ಬಂದೇ ಬಿಟ್ರಿ."

"ನಾನು ಬರಲಿಲ್ಲ ಕಂಡ್ರಿ. ನಮ್ಮ ಪಾರ್ಟಿ ಅಂತ ಸ್ಥಾನ ಕೊಡ್ತು."

"ಈ ಬಿಜೆಪಿಗಳು ಜನಾಭಿಪ್ರಾಯಕ್ಕೆ ಎಂದೂ ಮನ್ನಣೆ ಕೊಡಲ್ಲ ಅಂತಾರಲ್ಲಾ, ನಿಜವ ಸಾರ್?"

"ಯಾವನ್ರಿ ಅಂಗಂದೋನು?"

"ನೋಡಿ ಸಾರ್, ನೀವು ಕಳೆದ ವಿಧಾನಸಭೆ ಚುನಾವಣೆಲಿ ಮೂರನೆ ಸ್ಥಾನಕ್ಕೆ ಹೋಗಿದ್ರಿ. ಅದೊಂದು ಜನಾಭಿಪ್ರಾಯ. ಆದ್ರೆ ನಿಮ್ಮ ಬಿಜೆಪಿ ಜನರ ತೀರ್ಮಾನ ಧಿಕ್ಕರಿಸಿ ನಿಮ್ಮನ್ನ ವಿರೋಧಿ ನಾಯಕನಾಗಿ ಆರಸುತ್ತೆ ಅಂದ್ರೆ ಏನರ್ಥ?"

"ರೀ, ಶಿವಮೊಗ್ಗದಲ್ಲಿ ನಾನು ಸೋತದ್ದು ಜನಾಭಿಪ್ರಾಯ ಅಲ್ಲ ಕಂಡ್ರಿ. ಜಾತಿ ಅಭಿಪ್ರಾಯ. ಒಂದು ಜಾತಿ ಜನ ಅಂಗೆ ಓಟು ಮಾಡಿದ್ದನ್ನು ಜನಾಭಿಪ್ರಾಯ ಅನ್ನಕ್ಕಾಗದಿಲ್ಲ, ಅದನ್ನ ನಮ್ಮ ಪಾರ್ಟಿ ಸರಿ ಮಾಡಿದೆ. ನಿಜವಾದ ಜನ ನಾಯಕನನ್ನ ಪಾರ್ಟಿ ಗುರುತಿಸಿ ಪವರ್ ಕೊಟ್ಟದೆ, ಗೊತ್ತೆ?"

"ಥ್ಯಾಂಕ್ಸ್ ಸಾರ್. ಆಮೇಲೆ ವಿಧಾನ ಪರಿಷತ್ತಿಗೆ ನೀವು ಬಂದ ಕೂಡ್ಲೆ ಅಕ್ರಮ ಗಣಿಗಾರಿಕೆ ವಿಷಯ ತಗದ್ರಿ ಸಾರ್."

"ಹೌದು ಕಂಡ್ರಿ. ಈ ಸಿದ್ದರಾಮಯ್ಯನ ಸರ್ಕಾರ ಅಕ್ರಮ ಗಣಿಗಾರಿಕೆಗೆ ಅವಕಾಶ ಮಾಡಿಕೊಡ್ತಾಯಿದೆ. ಇದನ್ನ ನೋಡಿಕೊಂಡು ಸುಮ್ಮನಿರಕ್ಕಾಯ್ತದೇನ್ರಿ?"

"ಯಾವ ಕಾರಣಕ್ಕೂ ಸುಮ್ಮನಿರಬಾರ್ದು. ಅದರಲ್ಲೂ ನೀವು ಮಾಜಿ ಬಳ್ಳಾರಿ ಜಿಲ್ಲೆಯವರಾಗಿ ಸುಮ್ಮನಿರಂಗೇ ಇಲ್ಲ, ಆದ್ರು ಸಾರ್ ಒಂದು ಮಾತು...."

"ಅದೇನೇಳ್ರಿ. ಕುಮಾರಸ್ವಾಮಿ ಬರೇಳ್ಳವುರೆ ಹೋಗಬೇಕು."

"ನೋಡಿ ಸಾರ್, ಬಳ್ಳಾರಿ ಗಣಿ ಹಣದಿಂದ್ಲೇ ನಿಮ್ಮ ಸರ್ಕಾರ ನ್ಯಡಿತು. ಅಕ್ರಮ ಗಣಿ ತೋಡಿದ ಗಿರಾಕಿ ಇನ್ನು ಕೂಡ ಜೈಲಲ್ಲೇ ಅವ್ರುನೆ. ಬೇಲೇಕೇರಿ ಅದಿರು ನಾಪತ್ತೆ ಪ್ರಕರಣ ನಿಮ್ಮ ಮಾಜಿ ಮುಖ್ಯಮಂತ್ರಿಗೆ ಮುಂದೆ ಸುತ್ತಿಗಳಂಗದೆ. ಹಿಂದೆ ನಿಮ್ಮ ಉಪಚುನಾವಣೆಗಳೆಲ್ಲಾ ಅಕ್ರಮ ಗಣಿ ಧೂಳಿನಿಂದ್ಲೇ ನಡದವೆ. ನಿಮ್ಮ ಶಿವಮೊಗ್ಗದ ಆಸ್ತಿಲೂ ಅಕ್ರಮ ಗಣಿ ಹಣದ ಪಾಲಿದೆ. ಇಷ್ಟಿದ್ದೂ ಅಕ್ರಮ ಗಣಿ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಕೂಗಾಡಿದ್ರಲ್ಲ, ಗ್ರೇಟ್ ಸಾರ್!"

"ರೀ, ಹಿಂದಿನ ಕತೆ ಹಿಂದಕೋಯ್ತು. ಅದಕಟಗಂಡೇನ್ರಿ? ನಾನೆಷ್ಟೇ ಕೂಗಾಡಿದ್ರೂ ತೋದ ಗಣಿ ಬತ್ತದೇನ್ರಿ? ಈಗೇನಿದ್ರೂ ಉಳಿದಿರೋದನ್ನ ಉಳಿಸಿಕೊಬೇಕು ಅಷ್ಟೆ."


"ಕಾಂಗ್ರೆಸ್‌ನವು ನಿಮ್ಮಿಂದ ಕಲಿಬೇಕು ಸಾರ್."

"ಅಂಗೇ ನುತೆ!"

"ಥೂತ್ತೇರಿ!!!"

●

ಬೇಟೆಯಾಡುವ ಪ್ರಯತ್ನಗಳ ಆರಂಭ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಸುಮಾರು ಜನ ಉತ್ಸಾಹೀ ಬೇಟೆಗಾರರು ಇಲ್ಲಿಗೆ ಬಂದುಹೋದರು. ಹಾಗೆ ಬಂದವರಲ್ಲಿ ಬೊಂಬಾಯಿ ರಾಜ್ಯದವರೂ ಇದ್ದರು. ಅವರೆಲ್ಲಾ ಸಾಕಷ್ಟು ಎಚ್ಚರಿಕೆಯಿಂದ ಪರಿಶ್ರಮಪಟ್ಟರೂ ಅದೃಷ್ಟ ಅವರನ್ನು ಬೆಂಬಲಿಸಲಿಲ್ಲ. ಜೀವಂತ ಬಲಿಯಾಗಿ ಕಟ್ಟಿದ ಎಮ್ಮೆ ಅಥವಾ ಇತರ ಪ್ರಾಣಿಗಳಿಂದ ಹುಲಿ ಬಲೆಗೆ ಬೀಳಲಿಲ್ಲ. ಆದರೆ ಅದು ನರಬಲಿಯನ್ನು ತೆಗೆದುಕೊಳ್ಳುವುದನ್ನು ಮಾತ್ರ ಮುಂದುವರೆಸಿಯೇ ಇತ್ತು.

ಜಾಕ್ ಹೌಟನ್ ಎನ್ನುವ ನನ್ನ ಸ್ನೇಹಿತನೊಬ್ಬ ಈ ಹುಲಿಯನ್ನು ಬೇಟೆಯಾಡಲು ನಿರ್ಧರಿಸಿ ನಾನು ಜೊತೆಗೆ ಬರಬೇಕೆಂದು ಕೇಳಿಕೊಂಡ. ಆರು ಅಡಿ ನಾಲ್ಕು ಇಂಚು ಎತ್ತರ ಮತ್ತು ವಿಶಾಲವಾದ ಭುಜಕಟ್ಟನ್ನು ಹೊಂದಿದ್ದ ಅವನಿಗೆ 'ಲಾಫ್ಟಿ' ಎಂಬ ಅಡ್ಡಹೆಸರಿತ್ತು. ನನಗೆ ನೆನಪಿರುವಂತೆ ಮೊದಲ ನರಬಲಿಯಾದ ಒಂದು ವರ್ಷದ ಮೇಲೆ ಅವನು ಒಂದು ತಿಂಗಳ ಯೋಜನೆಯನ್ನು ಹಾಕಿಕೊಂಡು ಹೊರಟಿದ್ದ. ನನ್ನ ರಜಗಳೆಲ್ಲಾ ಆಗಲೇ ಖಾಲಿಯಾಗಿದ್ದುದರಿಂದ ನಾನು ಕೇವಲ ಒಂದು ವಾರ ಮಾತ್ರ ಇರಲು ಸಾಧ್ಯ ಎಂದು ಹೇಳಿ ಅವನ ಜೊತೆಗೂಡಿದೆ. ನಾವು 1931ಎ ಮಾಡೆಲ್ ಫೋರ್ಡ್ ಕಾರಿನಲ್ಲಿ ಪ್ರಯಾಣ ಬೆಳೆಸಿದೆವು.

ಮಾರ್ಗದಲ್ಲಿ ಸಾಗರದ ಅರಣ್ಯ ಇಲಾಖೆಗೆ ಅರ್ಧ ದಿನ ಭೇಟಿ ನೀಡಿ, ಇಲ್ಲಿಯವರೆಗೆ ಹುಲಿ ತೆಗೆದುಕೊಂಡ ನರಬಲಿಗಳ ಪೂರ್ಣ ವಿವರ ಪಡೆದುಕೊಂಡೆವು. ಇವುಗಳ ಆಧಾರದ ಮೇಲೆ ಹುಲಿ ಯಾವುದಾದರೂ ನಿರ್ದಿಷ್ಟವಾದ ಚಲನೆಯ ಮಾರ್ಗವನ್ನು ಹಾಕಿಕೊಂಡಿದೆಯೇ ಎಂದು ತಿಳಿಯುವುದು ನಮ್ಮ ಉದ್ದೇಶವಾಗಿತ್ತು. ನರಭಕ್ಷಕಗಳಾಗಿ ಪರಿವರ್ತನೆಯಾಗಿರುವ ಹುಲಿಗಳು ಕಾಡಿನಲ್ಲಿ ಓಡಾಡಲು ತಮ್ಮದೇ ಮಾರ್ಗವನ್ನು ಗುರುತಿಸಿಕೊಂಡಿರುತ್ತವೆ. ವರದಿಯಾದ ಹಳೆಯ ಘಟನೆಗಳ ಆಧಾರದ ಮೇಲೆ ಹುಲಿ ಓಡಾಡುವ ದಾರಿಯನ್ನು ಪತ್ತೆಹಚ್ಚಿ ಸದ್ಯಕ್ಕೆ ಅದು ಇರಬಹುದಾದ ಸ್ಥಳದ ಅಂದಾಜು ಮಾಡಬಹುದು. ಈ ದೃಷ್ಟಿಯಿಂದ ನಾವು ಎಲ್ಲಾ ವಿವರಗಳನ್ನು ಅಭ್ಯಾಸ ಮಾಡಿದಾಗ ಹುಲಿ ಸುಮಾರಾಗಿ ಮುಖ್ಯರಸ್ತೆಯ ಅಕ್ಕಪಕ್ಕದಲ್ಲೇ ಚಲಿಸುತ್ತಿದ್ದುದು ಮತ್ತು ಕುಂಸಿಯಿಂದ ಜೋಗ ಜಲಪಾತದವರೆಗೂ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿರುವುದು ತಿಳಿಯಿತು.

ಈ ಇಡೀ ಕ್ಷೇತ್ರ ದಟ್ಟವಾದ ಕಾಡುಗಳಿಂದ ಆವೃತವಾಗಿದ್ದು ಸಾಕಷ್ಟು ಹಳ್ಳಿಗಳನ್ನು ಹೊಂದಿತ್ತು. ಇಲ್ಲಿನ ಜನರ ಮುಖ್ಯ ಉದ್ಯೋಗ ಹಸು ಮತ್ತು ಎಮ್ಮೆಗಳ ಸಾಕಣೆಯಾಗಿದ್ದು, ಹುಲಿ ಮತ್ತು ಚಿರತೆಗಳು ಆಗಾಗ ಈ ಸಾಕುಪ್ರಾಣಿಗಳ ಬಲಿ ತೆಗೆದುಕೊಳ್ಳುತ್ತಿತ್ತು. ಹಾಗಾಗಿ ಉದ್ದ ಕೂದಲಿನ ನರಭಕ್ಷಕ ದನಕರುಗಳನ್ನೂ ಕೂಡ ಬಲಿ ತೆಗೆದುಕೊಳ್ಳುತ್ತಿದೆಯೇ ಇಲ್ಲವೇ ಎಂದು ತಿಳಿಯುವುದು ಸಾಧ್ಯವಿರಲಿಲ್ಲ. ನರಬಲಿಗಳು ಅಪರೂಪಕ್ಕೊಮ್ಮೆ ಕಡಿಮೆ ಸಂಖ್ಯೆಯಲ್ಲಿ ನಡೆಯುತ್ತಿದ್ದುದರಿಂದ ಈ ಹುಲಿ ಇವುಗಳಿಂದ ಮಾತ್ರ ಬದುಕಿರಲು ಸಾಧ್ಯವಿಲ್ಲ ಅನ್ನಿಸಿತು. ಹಾಗಾಗಿ ಅದು ಸಾಕುಪ್ರಾಣಿಗಳನ್ನು ಕೊಲ್ಲುತ್ತಿದ್ದಿರಲೇಬೇಕು. ಆದರೆ ಅಲ್ಲಿನ ಜನ ಇದನ್ನು ಒಪ್ಪದೆ ಹುಲಿ ದನಕರುಗಳನ್ನು ಮುಟ್ಟುವುದಿಲ್ಲ ಎಂದು ವಾದಿಸುತ್ತಿದ್ದರು.


ಲಾಫ್ಟಿ ತುಪ್ಪೂರಿನಿಂದ ಅರ್ಧ ಮೈಲು ದೂರವಿದ್ದ ಚಿಕ್ಕ ವಸತಿಗೃಹದಲ್ಲಿ ತಂಗಲು ನಿರ್ಧರಿಸಿದ. ಈ ಬಂಗಲೆ ರಸ್ತೆಯಿಂದ ಇನ್ನೂರು ಗಜ ದೂರವಿದ್ದು ದಟ್ಟವಾದ ಅರಣ್ಯದ ಮಧ್ಯದಲ್ಲಿತ್ತು. ಇಲ್ಲಿ ವಿವಿಧ ರೀತಿಯ ಜಿಂಕೆಗಳಿದ್ದು ನಾವು ಕೆಲವು ಅದ್ಭುತವಾದ ಮತ್ತು ಅಪರೂಪದ ಜಿಂಕೆಯ ಪ್ರಕಾರಗಳನ್ನು ನೋಡಿದೆವು. ಮಾಮೂಲಿನಂತೆ ಲಾಫ್ಟಿ ಮೂರು ಪ್ರಾಣಿಗಳನ್ನು ಜೀವಂತ ಬಲಿಯಾಗಿ ಉಪಯೋಗಿಸಲು ಖರೀದಿಸಿದ. ಒಂದನ್ನು ಸೈಕಲ್ಲಿನವನು ಹುಲಿಯನ್ನು ನೋಡಿದ ಹೊಳೆಯ ಬಳಿ, ಎರಡನೆಯದನ್ನು ಹೆಂಗಸನ್ನು ಹುಲಿ ಹೊತ್ತೊಯ್ದ ಜಾಗದಲ್ಲಿ ಮತ್ತು ಮೂರನೆಯದನ್ನು ಆನಂದಪುರಂನ ಹತ್ತಿರದ ಹಳ್ಳಿಯ ವ್ಯಕ್ತಿ ಕಾಣೆಯಾದ ಕಾಲುದಾರಿಯ ಬಳಿ ಕಟ್ಟಲಾಯಿತು. ಅಲ್ಲಿಂದ ಜೋಗಕ್ಕೆ ತೆರಳಿ ಅಲ್ಲಿಯೂ ಎರಡು ಎಮ್ಮೆಗಳನ್ನು ಖರೀದಿಸಿದೆವು. ಒಂದನ್ನು ಬಾಂಬೆ ಬಂಗಲೆಯ ಬಳಿ ಮತ್ತು ಇನ್ನೊಂದನ್ನು ಶರಾವತಿ ನದಿಯ ಎದುರಿನ ದಡದಲ್ಲಿ ಕಟ್ಟಿದೆವು. ಒಂದು ರಾತ್ರಿ ತುಪ್ಪೂರಿನ ವಸತಿಗೃಹದಲ್ಲಿ ಕಳೆದರೆ ಮರುದಿನ ಜೋಗದ ವಸತಿ ಗೃಹದಲ್ಲಿ ಕಳೆಯುವ ಯೋಜನೆ ಹಾಕಿಕೊಂಡೆವು.

ಹುಲಿ ಹಿಂದೆ ತೆಗೆದುಕೊಂಡ ನರಬಲಿಗಳ ಆಧಾರದ ಮೇಲೆ ಲೆಕ್ಕಹಾಕಿದರೆ ಅದು ಸದ್ಯಕ್ಕೆ ಸಾಗರ ಮತ್ತು ಆನಂದಪುರಂನ ಮಧ್ಯೆ ಎಲ್ಲೋ ಇರುವ ಸಾಧ್ಯತೆಗಳಿತ್ತು. ಹಾಗಾಗಿ ನಾನೂ ಕೂಡ ಒಂದು ಎಮ್ಮೆಯನ್ನು ಕೊಂಡು ನನ್ನ ಅಂದಾಜಿನ ಸ್ಥಳದಲ್ಲಿ ಮುಖ್ಯರಸ್ತೆಯಿಂದ ಒಂದು ಫರ್ಲಾಂಗ್ ದೂರದಲ್ಲಿ ಕಟ್ಟಿಹಾಕಿದೆ. ಮರುದಿನ ಬೆಳಗ್ಗೆ ನಾವು ಅವತ್ತಿನ ಸರದಿಯ ಪ್ರಕಾರ ಜೋಗದಿಂದ ತುಪ್ಪೂರಿಗೆ ಹೊರಟಾಗ ನಾನು ಕಟ್ಟಿದ್ದ ಬಲಿಯನ್ನು ನೋಡಲು ಹೋದೆವು. ಯಾವುದೋ ಹುಲಿ ಅದನ್ನು ಕೊಂದಿತ್ತು. ಸಹೃದಯನಾದ ಲಾಫ್ಟಿ ನಾನು ದುಡ್ಡು ಕೊಟ್ಟು ಕೊಂಡಿದ್ದ ಎಮ್ಮೆ ಬಲಿಯಾಗಿದ್ದರಿಂದ ಹುಲಿಯನ್ನು ನಾನೇ ಬೇಟೆಯಾಡಬೇಕೆಂದು ಆಗ್ರಹಿಸಿದ. ಆದರೆ ಹುಲಿಬೇಟೆಯ ಅವನ ತೀವ್ರ ಆಸಕ್ತಿಯನ್ನು ಗಮನಿಸಿದ್ದ ನಾನು ಅವನೇ ಈ ಕೆಲಸ ಮಾಡಬೇಕೆಂದು ಹೇಳಿದೆ. ಬಹಳ ವಾದವಿವಾದಗಳು ನಡೆದು ಕೊನೆಗೆ ನಾಣ್ಯವನ್ನು ಚಿಮ್ಮಿ ನಿರ್ಧರಿಸಬೇಕೆಂದು ತೀರ್ಮಾನಿಸಿದೆವು. ಲಾಫ್ಟಿಯೇ ಅದರಲ್ಲಿ ಜಯಶಾಲಿಯಾದ!

ಲಾಫ್ಟಿಯನ್ನು ಅದೇ ಸ್ಥಳದಲ್ಲಿ ಬಿಟ್ಟು ನಾನು ತುಪ್ಪೂರಿಗೆ ಹೋಗಿ ಅವನು ತಂದಿದ್ದ ಮಚಾನನ್ನು ಕಾರಿನಲ್ಲಿ ಹಾಕಿಕೊಂಡು ಬಂದೆ. ಜೊತೆಗೆ ಅದನ್ನು ಕಟ್ಟಲು ಸಹಾಯ ಮಾಡುವುದಕ್ಕಾಗಿ ಮೂರು ಜನರನ್ನು ಕರೆದುಕೊಂಡು ಬಂದಿದ್ದೆ. ನಾವೆಲ್ಲಾ ಮಚಾನನ್ನು ಕಟ್ಟಿ ಅದನ್ನು ರೆಂಬೆಕೊಂಬೆಗಳಿಂದ ಮರೆಮಾಡುವಾಗ ಲಾಫ್ಟಿ ಕಾರಿನ ಹಿಂದಿನ ಸೀಟಿನಲ್ಲಿ ನಿದ್ದೆ ಮಾಡಿದ. ಆ ಸ್ಥಳ ಮುಖ್ಯರಸ್ತೆಯ ಪಕ್ಕದಲ್ಲೇ ಇದ್ದುದರಿಂದ ಹಗಲು ಹೊತ್ತಿನಲ್ಲಿ ಹುಲಿ ಆಕ್ರಮಣ ಮಾಡುವ ಭಯವಿರಲಿಲ್ಲ. ಸಂಜೆ ನಾಲ್ಕು ಗಂಟೆಗೆ ಎಚ್ಚರಗೊಂಡ ಲಾಫ್ಟಿ ತನ್ನ ಸರಂಜಾಮುಗಳೊಂದಿಗೆ ಮಚಾನನ್ನು ಏರಿದ. ಅವನಿಗೆ ಶುಭ ಹಾರೈಸಿ ನಾನು ಹತ್ತಿರದ ಆನಂದಪುರಂನಲ್ಲಿ ಉಳಿಯಲು ನಿರ್ಧರಿಸಿದೆ.

ಮರುದಿನ ಬೆಳಗ್ಗೆ ಸೂರ್ಯೋದಯವಾದ ತಕ್ಷಣ ನಾನು ಮಚಾನಿನ ಎದುರಿನ ರಸ್ತೆಯನ್ನು ತಲುಪಿ ಕಾರಿನ ಹಾರ್ನ್ ಒತ್ತಿದೆ. ಲಾಫ್ಟಿ ತನ್ನ ಕೂಗಿನಿಂದ ಪ್ರತ್ಯುತ್ತರ ನೀಡಿ ಏನೂ ಅಪಾಯವಿಲ್ಲ ಎಂದು ಸೂಚಿಸಿದ. ನಾನು ಮಚಾನಿನ ಕಡೆ ನಡೆಯುವಷ್ಟರಲ್ಲಿ ಲಾಫ್ಟಿಯೇ ಈ ಕಡೆ ಬರುತ್ತಿದ್ದ. ತಾನು ಹುಲಿಯನ್ನು ಕೊಂದಿದ್ದೇನೆಂಬ ಸಂತೋಷದ ಸಮಾಚಾರವನ್ನು ಅವನು ನನಗೆ ತಿಳಿಸಿದ. ಹುಲಿ ಹಿಂದಿನ ರಾತ್ರಿ ಲಾಫ್ಟಿ ಊಹಿಸಿದ್ದಕ್ಕಿಂತ ಮೊದಲೇ ಅಂದರೆ ಕತ್ತಲಾಗುತ್ತಲೇ ಬಂದಿತ್ತು. ಲಾಫ್ಟಿ ಅದನ್ನು ಸುಲಭವಾಗಿ ಬೇಟೆಯಾಡಿದ್ದ. ತನ್ನ ಯಶಸ್ಸಿಗಾಗಿ ಬಹಳ ಖುಷಿಯಲ್ಲಿದ್ದ ಲಾಫ್ಟಿಯ ಸಂತೋಷದಲ್ಲಿ ನಾನೂ ಪಾಲುಗೊಂಡೆ. ನಂತರ ನಾವಿಬ್ಬರೂ ಹುಲಿಯನ್ನು ನೋಡಲು ಹೋದೆವು.

ಅದೊಂದು ಅತ್ಯಂತ ಸುಂದರವಾದ ಸ್ಪಷ್ಟ ಕಪ್ಪು ಪಟ್ಟೆಗಳನ್ನು ಹೊಂದಿದ್ದ ಯೌವ್ವನದಲ್ಲಿದ್ದ ಗಂಡು ಹುಲಿಯಾಗಿತ್ತು. ಆದರೆ ಆ ಹುಲಿ ಕಾಡಿನ



ಮಾಮೂಲಿನ ಹುಲಿಯಾಗಿತ್ತು. ಅಧಿಕೃತ ಸರ್ಕಾರೀ ಪ್ರಕಟಣೆಗಳಲ್ಲಿ ತಿಳಿಸಿದಂತೆ ಉದ್ದ ಕೂದಲಿನ ನರಭಕ್ಷಕನಾಗಿರಲಿಲ್ಲ. ಭಾರೀ ಉತ್ಸಾಹದಲ್ಲಿದ್ದ ಲಾಫ್ಟಿ ಇದನ್ನು ಗಮನಿಸಿರಲಿಲ್ಲ. ಇದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಆದರೂ ಕೂಡ ಇದು ನರಭಕ್ಷಕ ಹುಲಿಯಲ್ಲ ಎಂದು ಅವನಿಗೆ ಹೇಳುವ ಮನಸ್ಸಾಗಲಿಲ್ಲ.

ನಾನು ಅವನಿಗೆ ಮತ್ತೆ ಹೃತ್ಪೂರ್ವಕವಾಗಿ ಅಭಿನಂದಿಸಿ, ಅವನನ್ನು ಅಲ್ಲೇಬಿಟ್ಟು ತುಪ್ಪೂರಿಗೆ ಹೆಣವನ್ನು ಸಾಗಿಸಲು ಜನರನ್ನು ಕರೆತರಲು ಹೊರಟೆ. ಭಾರೀ ಗಾತ್ರ ಮತ್ತು ತೂಕವಿದ್ದ ಹುಲಿಯನ್ನು ನಾವು ಕಷ್ಟಪಟ್ಟು ಆನಂದಪುರಂಗೆ ಸಾಗಿಸಿದೆವು. ಎದುರಿನ ಬಾನೆಟ್ ಮೇಲೆ ಅದನ್ನು ಕಟ್ಟಿದ್ದರಿಂದ ಲಾಫ್ಟಿಗೆ ಮುಂದಿನ ರಸ್ತೆ ಸಾಕಷ್ಟು ದೂರದವರೆಗೆ ಕಾಣುತ್ತಲೇ ಇರಲಿಲ್ಲ. ಆನಂದಪುರಂನ ರಸ್ತೆಗಳಲ್ಲಿ ಲಾಫ್ಟಿ ತನ್ನ ಬೇಟೆಯನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತಿರಬೇಕಾದರೆ, ಕಠೋರವಾದ ಸತ್ಯವನ್ನು ಅವನು ಎದುರಿಸಲೇಬೇಕಾಯಿತು. ಅಲ್ಲಿನ ಜನ ಇದು ಉದ್ದಕೂದಲಿನ ಹುಲಿಯಲ್ಲ ಎಂದು ಅವನಿಗೆ ಹೇಳಿದರು. ಲಾಫ್ಟಿಗೆ ತಕ್ಷಣ ತನ್ನ ತಪ್ಪಿನ ಅರಿವಾಯಿತು. "ನಿನಗೆ ಮೊದಲೇ ಎಲ್ಲಾ ಗೊತ್ತಿತ್ತು, ಆದರೂ ನನಗೆ ಹೇಳಲಿಲ್ಲ" ಎಂದು ಆಪಾದನೆಯ ಧ್ವನಿಯಲ್ಲಿ ಅವನು ನನಗೆ ಹೇಳಿದ.

"ಹೌದು ಲಾಫ್ಟಿ, ಹುಲಿಯ ಶವವನ್ನು ನೋಡಿದ ತಕ್ಷಣ ನಾನು ಅದರ ಕುತ್ತಿಗೆಯಲ್ಲಿನ ಉದ್ದ ಕೂದಲಿಗಾಗಿ ಹುಡುಕಾಡಿದೆ. ಅದು ಕಾಣದಿದ್ದಾಗ ಈ ಹುಲಿ ನರಭಕ್ಷಕನಲ್ಲ ಎಂದು ನನಗೆ ತಿಳಿಯಿತು. ಆದರೆ ನಿನ್ನ ಉತ್ಸಾಹಕ್ಕೆ ತಣ್ಣೀರೆರೆಚಲು ಮನಸ್ಸಾಗಲಿಲ್ಲ" ಎಂದು ಹೇಳಿದೆ. ಜೊತೆಗೆ ಆಗಲೇ ಬೇಸರದಲ್ಲಿದ್ದ ಲಾಫ್ಟಿಯಲ್ಲಿ ಹುರುಪು ತುಂಬಲು ಯತ್ನಿಸಿದೆ. "ಇದರಲ್ಲಿ ನಿನ್ನ ತಪ್ಪೇನಿಲ್ಲ. ರಾತ್ರಿಯಲ್ಲಿ ಟಾರ್ಚ್‌ನ ಬೆಳಕಿನಲ್ಲಿ ನಿನಗೆ ಉದ್ದಕೂದಲು ಕಾಣಿಸುವುದು ಹೇಗೆ ಸಾಧ್ಯವಿತ್ತು? ಅದೇನೆ ಇರಲಿ ಇದೊಂದು ಅದ್ಭುತವಾದ ಹುಲಿ, ನಿನ್ನ ಯಶಸ್ಸಿನ ಕುರುಹಾಗಿ ಇದರ ಚರ್ಮವನ್ನು ರಕ್ಷಿಸಿ ಇಟ್ಟುಕೋ" ಎಂದೆ.

ಆದರೆ ಬಡಪಾಯಿ ಲಾಫ್ಟಿ ಸಮಾಧಾನಗೊಳ್ಳಲಿಲ್ಲ. ತುಪ್ಪೂರಿನಲ್ಲಿ ನಾನು ಸಹಾಯಕರೊಂದಿಗೆ ಆ ಹುಲಿಯ ಚರ್ಮವನ್ನು ಬಿಡಿಸುತ್ತಿರಬೇಕಾದರೆ, ಲಾಫ್ಟಿ ಅನ್ಯಮನಸ್ಕನಾಗಿ ದೂರ ಕುಳಿತಿದ್ದ. ಹುಲಿಯ ಭವ್ಯತೆಯನ್ನು ವಿವರಿಸಿ ಅವನಲ್ಲಿ ಉತ್ಸಾಹ ತುಂಬುವ ನನ್ನ ಪ್ರಯತ್ನಗಳೆಲ್ಲಾ ವಿಫಲವಾದವು.

"ಇದು ನರಭಕ್ಷಕನಲ್ಲ ಎಂದು ನನಗೆ ತಿಳಿದಿದ್ದರೆ ನಾನು ಈ ... ಅಮಾಯಕನನ್ನು ಕೊಲ್ಲುತ್ತಲೇ ಇರಲಿಲ್ಲ" ಎಂದು ಬೇಸರದಿಂದ ಹೇಳಿ ಲಾಫ್ಟಿ ಮಾತು ಮುಗಿಸಿದ. ಇದೇ ಬೇಸರದಲ್ಲಿ ನಾಳೆ ಬೆಳಗ್ಗೆಯವರೆಗೆ ನ... ಕಟ್ಟಿದ ಇತರ ಪ್ರಾಣಿಗಳು ಸುರಕ್ಷಿತವಾಗಿದ್ದಲ್ಲಿ ತಾನು ಬೆಂಗಳೂ... ಹಿಂತಿರುಗುವುದಾಗಿ ಲಾಫ್ಟಿ ಹೇಳಿದ.

ಮರುದಿನ ಬೆಳಗ್ಗೆ ಲಾಫ್ಟಿಯು ಕಟ್ಟಿದ್ದ ಮೂರೂ ಬಲಿಪಶು... ಜೀವಂತವಾಗಿದ್ದವು. ಅವುಗಳನ್ನು ನಾವು ಕೊಂಡ ಕಾಲು ಭಾಗದ ಬೆ... ಮತ್ತೆ ಹಳೆಯ ಮಾಲೀಕರಿಗೆ ಮಾರಿ ನಾವು ಜೋಗದತ್ತ ಹೊರಟೆವು. ... ಕಟ್ಟಿದ್ದ ಎರಡು ಪ್ರಾಣಿಗಳು ಕೂಡ ಜೀವಂತವಾಗಿದ್ದವು. ಅವುಗಳನ್ನು ಕೂ... ಮೇಲಿನಂತೆಯೇ ವಿಲೇವಾರಿ ಮಾಡಿ ನಮ್ಮ ಫೋರ್ಡ್ ಕಾರಿನಲ್ಲಿ ಮನೆ... ದಾರಿ ಹಿಡಿದೆವು.

ಯುದ್ಧವಿರಾಮದ ನಂತರದ ಮಹಾಸಮರ!

ಮುಂದಿನ ಸುಮಾರು ಒಂದು ವರ್ಷ ಈ ಹುಲಿಯ ಯಾವುದೇ ಸುದ್ದಿ... ನಾನು ಕೇಳಲಿಲ್ಲ. ನಂತರ ಒಂದು ದಿನ ಇದ್ದಿಲು ತಯಾರಿಸುವವನೆ... ಕುಂಸಿಯ ಮುಖ್ಯರಸ್ತೆಯ ಬಳಿಯೇ ಬಲಿಯಾದ ಸುದ್ದಿಯನ್ನು ಪತ್ರಿಕೆಗ... ಓದಿದೆ. ಹಾಗಾಗಿ ನಾನು ಜಿಲ್ಲಾ ಅರಣ್ಯಾಧಿಕಾರಿಗೆ ಪತ್ರ ಬರೆದು ... ಮುಂದೆ ಹುಲಿ ನರಬಲಿಯನ್ನು ತೆಗೆದುಕೊಂಡರೆ ತಕ್ಷಣ ನನಗೆ ತಂತಿ ಮೂಲಕ ಸಮಾಚಾರ ತಿಳಿಸಲು ಕೇಳಿಕೊಂಡೆ.

ಮೈಸೂರಿನ ಸುತ್ತಮುತ್ತಲಿನ ಮತ್ತು ಮದ್ರಾಸಿನ ಚಿತ್ತೂರ ಜಿಲ್ಲೆ... ಕಾಡುಗಳಂತಲ್ಲದೆ, ಶಿವಮೊಗ್ಗ ಜಿಲ್ಲೆಯ ಕಾಡುಗಳಲ್ಲಿ ಬಹಳಷ್ಟು ಹಳ್ಳಿ... ಮತ್ತು ಹಾಡಿಗಳಿದ್ದವು. ಜೊತೆಗೆ ಕಾಡಿನ ಮಧ್ಯೆಯೇ ವಿಶಾಲವಾದ ಜಾಗ... ಭತ್ತದ ಬೇಸಾಯ ಮಾಡುವ ಗದ್ದೆಗಳಿದ್ದವು. ರಸ್ತೆಗಳೂ ಕೂಡ ಜನ ವ... ವಾಹನಗಳಿಂದ ಹೆಚ್ಚಾಗಿ ಬಳಕೆಯಾಗುತ್ತಿತ್ತು. ಹಾಗಾಗಿ ಇಂತಹ ಕಾಡುಗ... ಹುಲಿಯನ್ನು ಹುಡುಕುವುದು ಬೇಟೆಗಾರನ ಕೌಶಲ್ಯದ ಪರೀಕ್ಷೆಯಾಗಿತ್ತು. ಭಾ... ಇತರ ಕಾಡುಗಳಲ್ಲಿರುವಂತೆ ಶಿವಮೊಗ್ಗದ ಕಾಡುಗಳಲ್ಲಿ ಯಾವುದೇ ಬುಡಕ... ಜನಾಂಗದವರಿರಲಿಲ್ಲ. ಇಲ್ಲಿ ಕಾಡಿನಲ್ಲಿ ಓಡಾಡುವ ಜನಗಳೆಂದರೆ ಮಲೆಯ... ಕೂಲಿಗಳು ಮತ್ತು ಜಿಪ್ಸಿ ಜನಾಂಗಗಳ ರೀತಿಯ ಲಂಬಾಣಿಗಳು. ಈ ಲಂಬ... ಜನಾಂಗದಲ್ಲಿ ಹೆಂಗಸರು ಭಿನ್ನರೀತಿಯ ಉಡುಗೆತೊಡುಗೆಗಳ... ಗುರುತಿಸಲ್ಪಡುತ್ತಾರೆ. ಗಂಡಸರು ಸ್ವಲ್ಪ ಸೋಮಾರಿಗಳು. ... ಗಂಡುಹೆಣ್ಣುಗಳಿಬ್ಬರೂ ಮದ್ಯಪಾನಪ್ರಿಯರು. ಅವರು ಹಣ... ಹೆಚ್ಚಾಗಿ ಆಹಾರ ಪದಾರ್ಥಗಳು ಮತ್ತು ಮದ್ಯವನ್ನು ಕೊ... ಕೆಲಸ ಮಾಡುತ್ತಿದ್ದರು. ಕೊಟ್ಟ ಹಣವನ್ನೂ ಮದ್ಯದ ಖರೀ... ಉಪಯೋಗಿಸುತ್ತಿದ್ದರು. ಆದರೆ ಈ ಲಂಬಾಣಿಗಳು ಸ... ಸ್ವಭಾವದವರಾಗಿರುತ್ತಾರೆ. ಭಾರತದ ಕುತೂಹಲಕರ ಮತ್ತು ವಿ... ಜನಾಂಗಗಳಲ್ಲಿ ಲಂಬಾಣಿ ಜನಾಂಗ ಕೂಡ ಒಂದು.

ನನಗೆ ಇಲ್ಲಿದ್ದ ಒಂದೇ ತೊಂದರೆಯೆಂದರೆ ಇಲ್ಲಿ ವಾಸಿ... ಜನಗಳು ಕಾಡಿನ ಪ್ರಾಣಿಗಳನ್ನು ಹುಡುಕುವುದರಲ್ಲಿ ... ಉಪಯುಕ್ತರಾಗುತ್ತಿರಲಿಲ್ಲ. ಹಾಗಾಗಿ ಪೂಜಾರಿಗಳು, ಚೆಂಚು... ಸೋಲಿಗರು, ಕುರುಂಬರು ಮುಂತಾದ ಬುಡಕಟ್ಟು ಜನಾಂಗ... ಬೇರೆ ಕಾಡುಗಳಲ್ಲಿ ಈ ಹುಲಿ ಇರಬಾರದಿತ್ತೇ ಎಂದು ನಾ... ಆಶಿಸುತ್ತಿದ್ದೆ.

ಅರಣ್ಯಾಧಿಕಾರಿಗೆ ಪತ್ರ ಬರೆದ ಒಂದು ತಿಂಗಳ ನಂ... ಅವರಿಂದ ಉತ್ತರ ಬಂದಿತು. ಕುಂಸಿ ಮತ್ತು ಚೋರಡಿ... ಮಧ್ಯೆ ರಸ್ತೆಯ ಬದಿಯಲ್ಲಿ ತೇಗದ ಮರದ ಎಲೆಗಳನ್ನು ಆಯ... ಹೆಂಗಸೊಬ್ಬಳನ್ನು ಹುಲಿ ಕೊಂದಿದೆ ಎನ್ನುವ ಸಮಾಚಾರ... ಅದರಲ್ಲಿ ತಿಳಿಸಿದ್ದರು. ತೇಗದ ಮರದ ಎಲೆಗಳನ್ನು ಏಕೆ ಸಂಗ್ರಹಿಸು... ಎಂದು ನಿಮಗೆ ಆಶ್ಚರ್ಯವಾಗಬಹುದು. ದೊಡ್ಡದಾಗಿ ಗಟ್ಟಿಯಾಗಿರುವ ನಾಲ್... ತೇಗದ ಎಲೆಗಳಿಗೆ ಪೊರಕೆ ಕಡ್ಡಿಗಳನ್ನು ಚುಚ್ಚಿ ಜೋಡಿಸಿ ಊಟದ ಎಲೆಗ... ತಯಾರಿಸುತ್ತಾರೆ. ಇವುಗಳಿಗೆ ಬಹಳ ಬೇಡಿಕೆ ಇರುವುದರಿಂದ ಗುತ್ತಿಗೆದಾ... ಕೂಲಿಯಾಳುಗಳನ್ನು ನೇಮಿಸಿ ಎಲೆಗಳನ್ನು ಸಂಗ್ರಹಿಸುತ್ತಾರೆ. ಹೀಗೆ ಹೆಣ್ಣಾಳು... ಗುಂಪೊಂದು ಈ ಕೆಲಸದಲ್ಲಿ ತೊಡಗಿದ್ದಾಗ ಪೊದೆಗಳ ಮರೆಯಿಂದ ಆಕ್ರಮ... ಮಾಡಿದ ಹುಲಿ ಒಬ್ಬ ಹೆಂಗಸನ್ನು ಎಳೆದು ಹೊತ್ತೊಯ್ದಿತ್ತು. ಉಳಿದ ಹೆಂಗ... ಕುಂಸಿಗೆ ಬಂದು ವಿಷಯ ತಿಳಿಸಿದಾಗ ಘಟ್ಟಾದ ಜನ ಆ ಸ್ಥಳಕ್ಕೆ ... ಹೋಗುವಷ್ಟರಲ್ಲಿ ಸಂಜೆಯಾಗಿದ್ದು ಅರ್ಧ ತಿಂದ ಹೆಂಗಸಿನ ಶವ ಮಾ... ದೊರಕಿತ್ತು. ಈ ಎಲ್ಲಾ ವಿಷಯವನ್ನು ತಿಳಿಸಿದ್ದ ಅರಣ್ಯಾಧಿಕಾರಿ ನನ್ನ ಸಹಾಯವನ್ನು ಅಪೇಕ್ಷಿಸಿದ್ದ.

ಹುಲಿಯ ಕಾರ್ಯಕ್ಷೇತ್ರ ಬಹಳ ದೊಡ್ಡದಿದ್ದು ಅದನ್ನು ಹುಡು... ಹಲವಾರು ವಾರಗಳೇ ಬೇಕಾಗಬಹುದಿತ್ತು. ನನಗೆ ಆಗ ಅಷ್ಟೆಲ್ಲಾ ರಜ... ಹೊಂದಿಸಲು ಸಾಧ್ಯವಿರಲಿಲ್ಲ. ಹಾಗಾಗಿ ಅರಣ್ಯಾಧಿಕಾರಿಗೆ ನಯವಾಗಿ ... ಕಷ್ಟಗಳನ್ನು ವಿವರಿಸಿ, ಮತ್ತೆಂದಾದರೂ ನರಬಲಿಯಾದರೆ, ಆ ವ್ಯ... ಸಂಬಂಧಿಕರಿಗೆ ಶವವನ್ನು ಅಲ್ಲೇ ಬಿಡುವಂತೆ ಮನವೊಲಿಸಿ ನನಗೆ ... ಸಂದೇಶ ನೀಡಲು ಸೂಚಿಸಿದೆ. ಕೆಲವು ಕೋಣಗಳನ್ನು ಕಾಡಿನಲ್ಲಿ ದೂರದೂ... ಕಟ್ಟಿ ಅವುಗಳನ್ನು ಹುಲಿ ತಿಂದರೆ ನನಗೆ ಸಮಾಚಾರ ತಲುಪಿಸಲು ತಿಳಿ... ಅಲ್ಲಿಯವರೆಗೆ ಹುಲಿಯ ಬಗೆಗೆ ತೆಗೆದುಕೊಳ್ಳಬೇಕಾದ ಎಚ್ಚರದ ಕ್ರಮಗ... ವಿವರವಾಗಿ ತಿಳಿಸಿದೆ. ಮೂರೇ ದಿನಗಳಲ್ಲಿ ನನಗೆ ಬಂದ ಉತ್ತರದಲ್ಲಿ ಅರಣ್ಯಾಧಿ... ನನ್ನ ಎಲ್ಲ ಸಲಹೆಗಳನ್ನೂ ಬೇರೆಬೇರೆ ಕಾರಣಗಳಿಗಾಗಿ ಪಾಲಿಸಲಾಗುವುದಿಲ್ಲವೆ... ತಿಳಿಸಿದ್ದ! ಇದನ್ನು ನಾನು ನಿರೀಕ್ಷಿಸಿದ್ದರೂ ನನ್ನ ಪರಿಸ್ಥಿತಿಗಳ ಅರಿವು ಅ... ಇರಬೇಕೆಂಬ ಉದ್ದೇಶದಿಂದ ಮಾತ್ರ ಪತ್ರ ಬರೆದಿದ್ದೆ.

ಕೆಲವು ವಾರಗಳ ನಂತರ ನನಗೆ ಅರಣ್ಯಾಧಿಕಾರಿಯಿಂದ ತಂತಿ ಸಂ... ಬಂದಿತು. ಈ ಬಾರಿ ಹುಲಿ ಚೋರಡಿ ಮತ್ತು ತುಪ್ಪೂರಿನ ನಡುವೆ ಜ... ಬಲಿ ತೆಗೆದುಕೊಂಡಿತ್ತು. ಚೋರಡಿಯ ಹತ್ತಿರ ಇದ್ದ ಕರಡಿಬೆಟ್ಟ ಎಂಬ ... ಮೀಸಲು ಅರಣ್ಯದ ಎದುರಿನ ರಸ್ತೆಯಲ್ಲಿ ಮರಕಡಿಯಲು ಹೋ... ವ್ಯಕ್ತಿಯೊಬ್ಬನನ್ನು ಕೊಂದಿದ್ದಲ್ಲದೆ ಅವನ ಮಗನನ್ನು ಹೊತ್ತುಕೊಂಡು ಹೋ...

(ಮುಂದುವರೆಯುವ...

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ದೇವ ಮತ್ತು ದೇವಿಯಾಗಿ ವಿವಿಧ ಸಂಸ್ಕೃತಿಗಳಲ್ಲಿ ಪರಿಕಲ್ಪನೆಗಳ ಮೇಲೆ ಭೌಗೋಳಿಕ ಪ್ರಭಾವಗಳು

ಭೂಮಿ

ಪರಿಕಲ್ಪನೆಗಳು ಮೂಡುವುದರಲ್ಲಿ ಆಯಾ ನೆಲದ, ..ಪ್ರಭಾವಗಳು ಖಂಡಿತ ತಮ್ಮ ಛಾಪನ್ನು ..ಸಿರುತ್ತವೆ. ಯಾವುದೋ ಪ್ರಭಾವಶಾಲಿ ಅಥವಾ ..ಹದಲ್ಲಿ ಮುಖ್ಯವಾದ ಪಾತ್ರವಿರುವ ಅಥವಾ ..ಕಗುಣವಿರುವ ವ್ಯಕ್ತಿಗಳಿಂದ ಹುಟ್ಟುವ ಕಲ್ಪನೆಗಳು ಜನರನ್ನು ನೇರವಾಗಿಯೇ ತಲುಪುತ್ತವೆ ಮತ್ತು ಅವರ ಮನವೊಲಿಸುವುದೋ ಅಥವಾ ಮನದಟ್ಟು ..ವುದೋ ಆಗಿದ್ದು ಅದು ನಂತರ ಅದೇ ನೆಲದ, .. ಅಂದರೆ, ಮೂಲ ಜೀವನ ಶೈಲಿ, ಅದರಿಂದ ..ದ ಅನುಭವಗಳು, ಅನುಭವಗಳಿಂದ ಉಂಟಾದ ..ಗಳು, ಆ ಭಾವಗಳು ಪ್ರೇರೇಪಿಸಿದ ವಿಚಾರಗಳು, ..ಚಾರಗಳು ಕ್ರೋಢೀಕರಣವಾಗುತ್ತಾ ಸಂಸ್ಕೃತಿಯಾಗಿ, ..ಧಪಟ್ಟ ಸಮೂಹಕ್ಕೆ ಮಾನ್ಯವಾಗಿ ಬೆಳೆದಿರುತ್ತದೆ. ..ಬ್ಬ ವ್ಯಕ್ತಿಯು ಗ್ರಹಿಕೆಯಿಂದ, ಅರಿವಿನಿಂದ, ..ವಿಕೆಯಿಂದ ಉಂಟಾಗುವ ಪರಿಕಲ್ಪನೆಗಳಿಗೆ ಅದೇ .. ಹಿನ್ನೆಲೆಯವರು ಅಥವಾ ಆ ಬಗೆಯ ವಿಚಾರಪರರು ವೈಚಾರಿಕ ಮತ್ತು ಭಾವನಾತ್ಮಕ ಕೊಡುಗೆಗಳನ್ನು ..ತ್ತಾ ವಿಸ್ತರಿಸುತ್ತಾರೆ. ಅವರೂ ಮತ್ತು ..ಲಾಗದವರು ಅವನ್ನು ಯಥಾವತ್ತಾಗಿ ಪೀಳಿಗೆಯಿಂದ ..ಗೆ ದಾಟಿಸುತ್ತಾ ಅಂತಹ ಪರಿಕಲ್ಪನೆಗಳನ್ನು ..ಳಿಸುತ್ತಾ ಹೋಗುತ್ತಾರೆ.

..ವುದೇ ಒಂದು ಜೀವನ ಪದ್ಧತಿ, ..ಗೆತೊಡುಗೆ, ಆಹಾರ ಮತ್ತು ಕಲೆಯ ..ಯು ಮೂಡಲು ಮತ್ತು ಬೆಳೆಯಲು ಭೌಗೋಳಿಕ ಪರಿಸರ ಮತ್ತು ಹವಾಮಾನದ ..ೂ ಬಹುಮುಖ್ಯ ಕಾರಣಗಳಾಗುತ್ತವೆ. ..ಡಗಿನ ಜಾನಪದ ನೃತ್ಯಗಳಲ್ಲಿ ಮೃದುವಾದ ..ಹುಲ್ಲಿನ ಮೇಲೆ ಮೆದು ಹೆಜ್ಜೆ ಹಾಕುವ ..ದ ವರಸೆಗಳು ಉತ್ತರ ಕನ್ನಡದ ಗಟ್ಟಿ .. ಮೇಲೆ ಘಟ್ಟಿಸಿ ಹಾಕುವ ಕುಣಿತದ ..ಳಿಗಿಂತ ಭಿನ್ನವಾಗುತ್ತವೆ. ಅದೇ ಹಸಿರು, ..ಇತ್ಯಾದಿ ವನಸಿರಿಯನ್ನು ಕಣ್ತುಂಬಿಕೊಳ್ಳುವ ..ಶದ ಜನರು ಆಯ್ಕೆ ಮಾಡುವ ಬಣ್ಣಗಳು ..ಗಿರುವವು, ಮೆದುವಾಗಿರುವಂತವಾದರೆ, ಅಷ್ಟು .. ಕಾಣದ ಬಿಸಿಲು ಪ್ರದೇಶದ ಜನರು ತಮ್ಮ ..ಗೆ ತೊಡುಗೆಗಳಲ್ಲಿ ಗಾಢವಾದ ಬಣ್ಣಗಳನ್ನು ..ಸುತ್ತಾರೆ. ತಮ್ಮ ಪ್ರದೇಶಗಳಲ್ಲಿ ಕಾಣದಂತಹ ..ರಂಗಾದ ಚಿತ್ತಾರಗಳನ್ನು, ವಿನ್ಯಾಸಗಳನ್ನು ..ಕೊಳ್ಳುತ್ತಾರೆ.

..ಾರ್ಮಿಕತೆ ಮತ್ತು ಆಧ್ಯಾತ್ಮಿಕತೆಯು ..ತಲ್ಲದಿದ್ದರೂ ತೀರಾ ಭಿನ್ನವೇನೂ ಅಲ್ಲ. ಇವುಗಳ ..ಮ ಮತ್ತು ವಿಕಾಸಕ್ಕೆ ಬರಿಯ ಭೌಗೋಳಿಕ ಪರಿಸರ ..ತ್ರ ಕಾರಣವಾಗದೇ, ಸಾಮಾಜಿಕ, ರಾಜಕೀಯ ..ರ್ಷಗಳು, ಪರಿಕಲ್ಪನೆ ಮತ್ತು ಸಂಸ್ಕೃತಿಗಳಲ್ಲಿರುವ ಸಾಮ್ಯತೆ ..ತ್ತು ಭಿನ್ನತೆಗಳು. ಸಂಘರ್ಷಗಳಿಂದ ಸಮೂಹಕ್ಕೆ ..ಾಗುವ ತೊಂದರೆಗಳು, ಅವುಗಳನ್ನು ನಿವಾರಿಸಲು ..ವ ಘನವಾದ ವ್ಯಕ್ತಿತ್ವ ಮತ್ತು ಆಳವಾದ ದೃಷ್ಟಿ ..ದಿರುವಂತಹ ನಾಯಕರು ಪಡೆಯುವಂತಹ ದರ್ಶನ ..ತ್ಮವೆನ್ನಲಾಗುವ ಅಮೂರ್ತ ಕಲ್ಪನೆಗಳು ಮತ್ತು ..ತಿಯ ಹಾಗೂ ಬದುಕಿನ ರಹಸ್ಯಗಳ ಬಗೆಗಿನ ..ಷಣೆಗಳು) ಮತ್ತು ತಮ್ಮ ನಿರ್ದಿಷ್ಟ ಸಮುದಾಯವು ..ಯುವ ಮತ್ತು ಬೆಳೆಯುವ ಬಗ್ಗೆ ತೆಗೆದುಕೊಳ್ಳುವಂತಹ ..ರಗಳ ಹೆಜ್ಜೆಗಳ ಗುರುತುಗಳು ಧರ್ಮಗಳಾಗಿ ಛಾಪು ..ಡಿಸಿವೆ.

..ಲವೊಮ್ಮೆ ಈಗಿನ ಮುಂದುವರಿದ ವೈಚಾರಿಕತೆ ..ತ್ತು ವೈಜ್ಞಾನಿಕತೆಯ ದೃಷ್ಟಿಯಲ್ಲಿ ಅವುಗಳೆಷ್ಟೇ ದಡ್ಡತನ ..ಾ ಅಸಂಬದ್ಧವೆನಿಸುವುದಾದರೂ, ಆ ಕಾಲಘಟ್ಟದಲ್ಲಿ ..ತಹ ಸನ್ನಿವೇಶಗಳಲ್ಲಿ ಹುಟ್ಟಿರುವಂತಹ ಆ ..ಲ್ಪನೆಗಳನ್ನು ಕೇವಲವಾಗಿ ನೋಡುವುದು ..ಜಸವಾಗದು. ಅವುಗಳು ಸಮಾಜ ಮತ್ತು ಸಂಸ್ಕೃತಿಯ ..ಸದ ಕ್ರಮಗಳನ್ನು ಗುರುತಿಸಲು ಅಧ್ಯಯನಕ್ಕೆ ..ಗ್ಯವಾದ ವಸ್ತುಗಳೂ ಆಗುವವು. ನಮ್ಮ ಪ್ರಸ್ತುತ ..ಜ, ಜೀವನಕ್ಕೆ ಮತ್ತು ನಿಲುವಿಗೆ ಹೊಂದದೇ ..ದರೂ ಅವು ಎಂದಿಗೂ ಸಾಂಸ್ಕೃತಿಕವಾಗಿ ಗೌರವಕ್ಕೆ ..ೇ ಆಗಿರುತ್ತವೆ. ಆದರೆ, ಆಗಿನ ಸಮಾಜದ ಅಂತಹ ..ನೆಗಳನ್ನು ಇಂದಿಗೂ ಗುಂಪುಗಾರಿಕೆಯ ಹಿತಾಸಕ್ತಿಗೆ ..ಂಡು, ಇತರ ಸಮೂಹಗಳನ್ನು ಶೋಷಣೆ ಮಾಡುವ ..ನಗಳಾದಾಗಲೇ ಪ್ರತಿಭಟಿಸುವ, ಅಂತವುಗಳನ್ನು ..ಸುವ ಹೋರಾಟಗಳನ್ನು ಮಾಡುವ ಅಗತ್ಯಗಳು ..ಬರುವುದು.

..ಸ್ಟ್ರಿ ಕಂದಾಚಾರಗಳು, ಮಾಟ ಮಂತ್ರಗಳಿತ್ಯಾದಿ ..ಗಳಾದ ಮೌಢ್ಯಗಳು, ದೇವರು, ಸ್ವರ್ಗ, ನರಕಗಳಂತಹ ಪರಿಕಲ್ಪನೆಗಳು, ಶಕುನಗಳು, ಹುಟ್ಟು-ಮದುವೆ-ಸಾವುಗಳ ಸಮಯದಲ್ಲಿ ಪಾಲಿಸುವ ಸಂಪ್ರದಾಯಗಳು; ಆಗಿನದಕ್ಕಿಂತ ಬೇರೆಯೇ ರಚನೆಯಲ್ಲಿ ಕಟ್ಟಿಕೊಂಡಿರುವಂತಹ ಆಧುನಿಕ ಸಮಾಜದಲ್ಲಿ ಹೊಂದಿಕೆಯಾಗದಿದ್ದರೂ, ಒತ್ತಾಯಪೂರ್ವಕವಾಗಿ ಹೊತ್ತುಕೊಳ್ಳುವುದು ಅಥವಾ ಹೇರುವುದು ಅತ್ಯಂತ ಮೂರ್ಖತನದ ಸಂಗತಿ. ಅತ್ಯಂತ ಪವಿತ್ರವೆಂದು ಆಯಾ ಸಮೂಹದವರು ಹೊತ್ತುಕೊಳ್ಳುವ ಆಯಾ ಧರ್ಮಗ್ರಂಥಗಳಲ್ಲಿ ಎಷ್ಟೋ ವಿಷಯಗಳು ವಿಕಸಿತ ಕಾಲಘಟ್ಟದಲ್ಲಿ ಸಪಕಲಾಗಿರುತ್ತವೆ. ಹಾಗೂ ಅಳವಡಿಸಿಕೊಳ್ಳಲಾಗುವುದೂ ಇಲ್ಲ. ಹಾಗೆಯೇ ಕೆಲವು ಸತ್ಯಗಳು ಮತ್ತು ದರ್ಶನಗಳು ಇಂದಿಗೂ ಪ್ರಸ್ತುತವೆಂದು ಎನಿಸುತ್ತವೆ. ಇಲ್ಲಿ ಶ್ರೇಷ್ಠ ಅಥವಾ ಕನಿಷ್ಠ ಉತ್ತಮ ಅಥವಾ ಅಧಮ ಎನ್ನುವಂತಹ ದೃಷ್ಟಿಗಳಿಗಿಂತ ಅಗತ್ಯ ಮತ್ತು ಅನಗತ್ಯಗಳ ಪ್ರಾಯೋಗಿಕ ಚಿಂತನೆಗಳಷ್ಟೇ ರೂಢಿಸಿಕೊಳ್ಳಬೇಕಾಗಿರುವ ಅಗತ್ಯವಿದೆ. ಆದರೆ ಮನುಷ್ಯನ ಇಂದಿನ ಆಲೋಚನಾ ಕ್ರಮಕ್ಕೆ ಕಾರಣಗಳನ್ನು ಹುಡುಕುವಲ್ಲಿ, ಇಂದಿನ ಸಮೂಹಗಳಲ್ಲಿ ಗುರುತಿಸಿಕೊಳ್ಳುವ ಜನರಲ್ಲಿನ ರಾಜಕೀಯ ಮತ್ತು ಸಾಮಾಜಿಕ ಧೋರಣೆಗಳ ಪದ್ಧತಿಗಳನ್ನು ಕಂಡುಹಿಡಿಯುವಲ್ಲಿ, ಸಮಾಜದ ಸ್ಥಿತಿಗತಿಗಳಿಗೆ ಕಾರಣವಾದ ಚಾರಿತ್ರಿಕ ಅಂಶಗಳನ್ನು ಶೋಧಿಸುವಲ್ಲಿ ಇವೆಲ್ಲವೂ ಅತ್ಯಂತ ಮುಖ್ಯವಾಗಿ ಅಧ್ಯಯನಕ್ಕೆ ಬೇಕಾಗುತ್ತವೆ.

ಭೌಗೋಳಿಕ ಲಕ್ಷಣಗಳಿಗೆ ಅನುಗುಣವಾಗಿ ಸಂಸ್ಕೃತಿ, ಜೀವನ ಪದ್ಧತಿಗಳು ಹುಟ್ಟಿಕೊಂಡಿವೆ ಹಾಗೂ ಈ ಭೌಗೋಳಿಕ ಲಕ್ಷಣಗಳು ಭೂಮಿಯಲ್ಲಿ ಏಕ ಪ್ರಕಾರವಾಗಿರದ ಕಾರಣವೇ ಸಂಸ್ಕೃತಿಗಳಲ್ಲಿ ಮತ್ತು ಪರಿಕಲ್ಪನೆಗಳಲ್ಲಿ ಭಿನ್ನತೆಗಳಿರುವುದು ಸ್ಪಷ್ಟ.



ಹಾಗೆಯೇ ಭೂಮಿಯ ಬಗ್ಗೆ ಹಲವು ಬಗೆಗಳಲ್ಲಿ ಪರಿಕಲ್ಪನೆಗಳನ್ನು ವಿವಿಧ ಸಂಸ್ಕೃತಿಗಳು ಕಟ್ಟಿಕೊಂಡಿವೆ. ಭೂಮಿಯು ತಮಗೆ ಹೇಗೆ ಕಾಣಿಸುವುದು ಮತ್ತು ದಕ್ಕುವುದು ಎಂದು ಹಲವಾರು ರೀತಿಯಲ್ಲಿ ವಿಚಾರಗಳನ್ನು ಮಾಡಿದ್ದಾರೆ.

ಈಜಿಪ್ಟಿನ ಗೆಬ್

ಈಜಿಪ್ಟಿನವರು "ಗೆಬ್" ಎಂದು ಭೂಮಿಯ ದೇವರನ್ನು ಕಂಡಿದ್ದರು. ಈ ಗೆಬ್ ಗಡ್ಡವುಳ್ಳಂತಹ ಪುರುಷ ರೂಪವಾಗಿದ್ದು ತಲೆಯ ಮೇಲೆ ಬಾತುಕೋಳಿಯನ್ನು ಹೊತ್ತಿತ್ತು. ಅವರ ನಂಬಿಕೆಯ ಪ್ರಕಾರ ಈ ಗೆಬ್ ಬೆಳೆಯನ್ನು ಕೊಡುವುದಲ್ಲದೇ, ರೋಗರುಜಿನಗಳನ್ನು ವಾಸಿ ಮಾಡುವ ಭೂಮಿಯ ಪರಿಕಲ್ಪನೆಯ, ದೇವರಾಗಿತ್ತು. ಈ ಗೆಬ್ ನಕ್ಕರೆ ಭೂಕಂಪಗಳು ಉಂಟಾಗಿ ಅನಾಹುತಗಳು ಸಂಭವಿಸುವವು ಎಂದು ಪ್ರಾಚೀನ ಈಜಿಪ್ಟಿನವರು ನಂಬಿದ್ದರು. ಹಾಗೆಯೇ ಗೆಬ್ ಮದುವೆಯಾಗಿದ್ದು ನಟ್ (ನುಟ್) ಎಂಬ ಆಕಾಶ ದೇವತೆಯನ್ನು. ಈ ಮದುವೆಗೆ "ರೆ" ಎಂಬ ಸೂರ್ಯ ದೇವತೆಯ ಅನುಮತಿಯನ್ನು ಪಡೆದಿರಲಿಲ್ಲ. ಹಾಗಾಗಿ ರೆಗೆ ಕೋಪ ಬಂದು, ಅವರ ತಂದೆ "ಷು"ಗೆ ಚಾಡಿ ಹೇಳಿ, ಭೂಮಿ ಮತ್ತು ಆಕಾಶವನ್ನು ಬೇರ್ಪಡಿಸಿದ. ಹಾಗೆಯೇ ಆಕಾಶ ದೇವತೆಗೆ ಮಕ್ಕಳಾಗದಂತೆ ತಡೆದ. ಆದರೆ, ಅವಳು ಚಂದ್ರನ ಸಂಪರ್ಕಕ್ಕೆ ಬಂದು, ಅವನ ಗೆಳೆತನದಿಂದ ಬೆಳಕನ್ನು ಬಹುಮಾನವಾಗಿ ಪಡೆದಳು. ಹಾಗಾಗಿ ಕೊನೆಗೆ ನಟ್ ಮತ್ತು ಗೆಬ್ ಇಬ್ಬರಿಗೂ ಚಂದ್ರನ ಬೆಳಕು ಮಗುವಾಗಿ ದೊರಕಿತು ಎಂದು ಹೇಳುತ್ತಿದ್ದರು.

ಮೆಕ್ಸಿಕನ್ನರ ಕೋಟ್ಲಿಕ್ಯು

ನಮಗೆ ಪರಿಚಿತವಾಗಿರುವ ಭೂದೇವಿಯು ಬಹಳ ಮಮತಾಮಯಿಯೂ, ಫಲವತ್ತಾದ ದೊಡ್ಡ ತಾಯಿಯಂತೆಯೂ ಅಥವಾ ಕೋಟಲೆಗೆ ಒಳಗಾಗುವ ಅಸಹಾಯಕ ಹೆಂಗಸಿನಂತೆ ಇದ್ದರೆ, ಇದೇ ಭೂಮಿಯ ಪರಿಕಲ್ಪನೆಯು ಮಧ್ಯ ಮೆಕ್ಸಿಕೋದ ಅಜ್ಟೆಕ್ ಸಂಸ್ಕೃತಿಯಲ್ಲಿ ಕೋಟ್ಲಿಕ್ಯು ಎಂದು ಕರೆಯುತ್ತಿದ್ದರು. ಕೋಟ್ಲಿಕ್ಯು ಅಂದರೆ ಸರ್ಪಭೂಷಣ ಅಥವಾ ಸರ್ಪೆಂಟ್ ಸ್ಕರ್ಟ್ ಎಂದು ಅರ್ಥ. ಅವರ ಪುರಾಣದ ಪ್ರಕಾರ ಭೂಮಿಯು ಕೋಟ್ಲಿಕ್ಯು, ಜೀವ ಮತ್ತು ಸಾವಿನ ದೇವತೆ. ಅವಳ ಸ್ಕರ್ಟ್ ಸರ್ಪಗಳಿಂದಾಗಿದ್ದು, ಅದೇ ಹೆಸರನ್ನು ಆಕೆ ಹೊಂದಿದ್ದಳು. ಅವಳ ಬಲಿಪಶುಗಳ ಹೃದಯಗಳನ್ನು ಕಂಠಾಭರಣವಾಗಿ ಹೊಂದಿದ್ದಳು. ಅವಳು ತನ್ನ ಕೈ ಮತ್ತು ಕಾಲುಗಳಲ್ಲಿ ಬಹಳ ಉದ್ದನೆಯ ಮತ್ತು ಮೊನಚಾದ ಉಗುರುಗಳನ್ನು ಹೊಂದಿದ್ದಳು. ಅವಳು ನರಬಲಿಯಿಂದ ಸಂತೃಪ್ತಳಾಗುತ್ತಿದ್ದಳು. ಅವಳ ಗಂಡನ ಹೆಸರು ಮಿಕ್ಸ್ಕೋಟ್ಲ್ ಎಂದಿದ್ದು, ಅವನು ಸರ್ಪಾಕಾರದ ಮೋಡಗಳ ರೂಪದಲ್ಲಿದ್ದು, ಬೆಂಬತ್ತುವ ಕ್ರಿಯೆಯ ಅಧಿದೇವತೆಯಾಗಿದ್ದ. ಒಮ್ಮೆ ಪುಕ್ಕಗಳ ಚೆಂಡೊಂದು ಅವಳ ದೇವಸ್ಥಾನದಲ್ಲಿ ಬಿದ್ದಾಗ ಅವಳು ಅದನ್ನು ಮುಟ್ಟಿದರಿಂದ ಹ್ಯುಟ್ಜಿಲೊಪ್ಚ್ಟ್ಲಿ ಎಂಬಾತನಿಗೆ ಗರ್ಭ ಧರಿಸಿದಳು. ಈ ಅನಪೇಕ್ಷಿತ ಗರ್ಭಧಾರಣೆಯಿಂದಾಗಿ ಅವಳು ಈ ಮೊದಲು ಹೆತ್ತಿದ್ದ ನಾಲ್ಕು ನೂರು ಮಕ್ಕಳಲ್ಲಿ ಕೋಯೋಲ್ ಕ್ಸಾಹ್ಕಿ ಎಂಬುವಳಿಗೆ ಇಂಥಾ ಕಳಂಕಿತ ತಾಯನ್ನು ಕೊಲ್ಲು ಎಂದು ತಂದೆಯಿಂದ ಆಜ್ಞೆ ಬಂದಿತು. ಆದರೆ ಹ್ಯುಟ್ಜಿಲೊಪ್ಚ್ಟ್ಲಿ ಆಗ ತಾಯಿಯ ಗರ್ಭದಿಂದ ಕವಚಧಾರಿಯಾಗಿ, ಸಶಸ್ತ್ರಧಾರಿಯಾಗಿ ಹುಟ್ಟಿಬಂದು ತನ್ನ ಸಹೋದರಿಯೇ ಆಗ ಬೇಕಾಗಿರುವ ಕೋಯೋಲ್?ಕ್ಸಾಹ್ಕಿಯ ರುಂಡವನ್ನು ಕತ್ತರಿಸಿ ಎಸೆದ. ಅದೇ ಚಂದ್ರ ಆಯಿತು.

ಗ್ರೀಕಿನ ಜಿಯಾ

ಭೂದೇವಿಯ ಕಥೆಯು ಮೆಕ್ಸಿಕೋದಲ್ಲಿ ಇಷ್ಟು ರೌದ್ರದ ಅವತಾರದ್ದಾದರೆ, ಗ್ರೀಕಿನಲ್ಲಿ ಬಹಳ ಸೌಮ್ಯ ಮತ್ತು ಮಧುರವಾದ ರೂಪವನ್ನು ಹೊಂದಿರುವ ಜಿಯಾ ಎಂಬ ಹೆಸರಿನ ಭೂದೇವಿ. ಅವಳು ನಮ್ಮಲ್ಲಿರುವಂತೆ ಅತ್ಯಂತ ಶ್ರೇಷ್ಠ ಮತ್ತು ಉನ್ನತ ಸ್ಥಾನವನ್ನು ಹೊಂದಿದ್ದ ಭೂಮಿತಾಯಿ. ಅವಳು ಜಗತ್ತಿನ ತಾಯಿ ಎಂದು ಆದರಣೆಗೆ ಒಳಗಾಗಿದ್ದಳು. ಗ್ರೀಕರ ಮಿಥಾಲಜಿಯ ಪ್ರಕಾರ ಅವಳೇ ಜಗತ್ತನ್ನು ಸೃಷ್ಟಿಸಿದ್ದು ಹಾಗೂ ಟೈಟಾನ್‌ಗಳೆಂದು ಕರೆಯುವ ದೇವತೆಗಳ ಮೊದಲ ಪೀಳಿಗೆಗೆ ಮತ್ತು ಮೊದಲ ಮನುಷ್ಯರ ಪೀಳಿಗೆಗೂ ಜನ್ಮ ಕೊಟ್ಟದ್ದು.

ಆದಿಯಲ್ಲಿ ಬರಿಯ ಕತ್ತಲು ತುಂಬಿರುವಂತಹ ನಿರ್ವಾತ ಸ್ಥಿತಿಯು ಉಂಟಾಗಿದ್ದು, ಜಿಯಾ ಎಂಬ ದೇವತೆಯು ಸ್ವಯಂಭೂವಾಗಿ ಅಸ್ತಿತ್ವಕ್ಕೆ ಬಂದಳು. ಈ ಭೂತಾಯಿಯಿಂದಲೇ ನಕ್ಷತ್ರಗಳಿಂದ ಕೂಡಿರುವ ಸ್ವರ್ಗವು ರೂಪುಗೊಂಡು ಯುರೇನಸ್ ಎಂಬ ಆಕಾಶ ದೇವತೆಯೂ ಹುಟ್ಟಿ ಬಂದಿತು. ಇದೇ ಭೂತಾಯಿಯಿಂದ ಪರ್ವತಗಳು, ಮೈದಾನಗಳು, ನದಿ ಮತ್ತು ಸಾಗರಗಳು ಹುಟ್ಟಿಬಂದವು.

ಭೂತಾಯಿಯೇ ಪ್ರಾಚೀನ ಗ್ರೀಕರ ಪುರಾತನ ದೇವತೆ. ಅವಳೇ ಮೊದಲಿಗಳು. ಅವಳೇ ದೇವತೆಗಳಿಗೂ ಮತ್ತು ಮನುಷ್ಯರಿಬ್ಬರಿಗೂ ಶ್ರೇಷ್ಠ ದೇವತೆ. ಅವಳೇ ಮದುವೆಗಳನ್ನು, ನೀಡುವ ವಚನಗಳನ್ನು ಮತ್ತು ಪ್ರವಾದಿಸುವಂತಹ ವಾಕ್ಯಗಳನ್ನು ನೋಡಿಕೊಳ್ಳುವವಳು.

ಇಂದು ಭೂಧರ್ಮ ಎಂದು ಜಗತ್ತಿನಲ್ಲಿ ಯಾವುದನ್ನು ಕಾಣಲು ಯತ್ನಿಸುತ್ತಿದೆಯೋ ಅದು ಇದೇ ದೇವತೆಯ ಪರಿಕಲ್ಪನೆಯಿಂದಾಗಿಯೇ. ಈ ಕಥೆಯ ಪ್ರೇರಣೆಯಿಂದಲೇ ಅವತಾರ್ ಸಿನಿಮಾದಲ್ಲಿಯೂ ಭೂತಾಯಿಯನ್ನು ಚಿತ್ರಿಸಿರುವುದು.

ಚೀನಾದ ಹೌ ಜಿ

ಚೀನಾದಲ್ಲಿ ಭೂಮಿಗೆ ಹೌ ಜಿ ಎನ್ನುವರು. ಅವರಲ್ಲಿ ಭೂಮಿಯು ಗಂಡು. ಹ್ಯುಂಗ್ ಡಿ ಎನ್ನುವವನ ವಂಶಸ್ಥನು. ಶಾಂಗ್ ಸಾಮ್ರಾಜ್ಯದ ಸಂಸ್ಥಾಪಕನಾದ ತಾಂಗ್ (ಕ್ರಿಸ್ತಪೂರ್ವ 1600-1066) ಹೌ ಜಿಯನ್ನು ವಿಲ್ಲೆಟ್‌ನ ರಾಜಕುಮಾರನಾಗಿ ಪಟ್ಟಾಭಿಷೇಕ ಮಾಡಿದನು. ಮುಂದೆ ಜ್ಹೋವ್ ಸಾಮ್ರಾಜ್ಯ (ಕ್ರಿಸ್ತ ಪೂರ್ವ 1066-221) ಅಸ್ತಿತ್ವಕ್ಕೆ ಬಂದಾಗ ಅದಕ್ಕೆ ಸೇರಿದವರು ಇದೇ ಹೌ ಜಿಯನ್ನು ತಮ್ಮ ಪುರಾತನ ಎಂದು ಗುರುತಿಸಿಕೊಳ್ಳುತ್ತಿದ್ದರು. ಚೀನಾ ದೇಶಕ್ಕೆ ಕೃಷಿಯು ಪರಿಚಿತವಾದ ಮೇಲೆ ಹೌ ಜಿಯನ್ನು ಧಾನ್ಯಗಳ ಭೂದೇವತೆ ಎಂದು ಪೂಜಿಸುತ್ತಿದ್ದರು.

ಪೆರುವಿನ ಪಚಮಾಮ

ಈಗ ಪೆರು ಎಂದು ಕರೆಯಲಾಗುವ ದೇಶದಲ್ಲಿ ಇಂಕಾ ಎಂಬ ಸಂಸ್ಕೃತಿ ಅಸ್ತಿತ್ವದಲ್ಲಿತ್ತು. ಅವರು ಭೂಮಿಯನ್ನು ಪಚಮಾಮ ಎಂದು ಕರೆಯುತ್ತಿದ್ದರು. ಇಂಕಾ ಸಂಸ್ಕೃತಿಯವರು ಕ್ರಿಸ್ತ ಪೂರ್ವ 1532 ರಿಂದ 1450ರವರೆಗೂ ಪೆರು ದೇಶವನ್ನು ಆಳಿದವರು. ನಂತರ ಸ್ಪಾನಿಯಾರ್ಡ್ ಅವರ ಭೂಭಾಗಗಳನ್ನು ಗೆದ್ದುಕೊಂಡರು. ಭೂದೇವತೆಯಾಗಿದ್ದ ಪಚಮಾಮ ಮತ್ತು ಅವಳ ಗಂಡ ಇಂಟಿಗೆ ಸೂರ್ಯನು ಮಗನಾಗಿ ಹುಟ್ಟಿದ್ದ. ಇವರಲ್ಲಿ ಪಚಮಾಮ ಬಹಳ ಔದಾರ್ಯದ ದೇವತೆ. ಆಗ ಪಚಮಾಮಗೆ ಒಂಟೆ ಜಾತಿಯಂತೆ ಕಾಣುವ ಲಾಮ ಮತ್ತು ಇತರ ಪ್ರಾಣಿಗಳನ್ನು ಬಲಿಕೊಡುತ್ತಿದ್ದರು. ಪೆರುವಿನಲ್ಲಿ ಇಂದಿಗೂ ಪಚಮಾಮಳನ್ನು ದೇವತೆ ಎಂದು ಪೂಜಿಸುತ್ತಾರೆ.

ಮಾಯನ್ನರ ಬಕಾಬ್ಸ್

ಮಾಯನ್ನರು ಬಕಾಬ್ಸ್ ಎಂದು ಭೂಮಿಯನ್ನು ಕರೆಯುತ್ತಿದ್ದರು. ಅವರ ಪ್ರಕಾರ ಭೂಮಿಯು ನಾಲ್ಕು ಮೂಲೆಗಳನ್ನು ಒಳಗೊಂಡಿದ್ದು ಚಪ್ಪಟೆಯಾಗಿತ್ತು, ನಾಲ್ಕೂ ಮೂಲೆಗಳು ನಾಲ್ಕು ದಿಕ್ಕುಗಳಾಗಿದ್ದು ನಾಲ್ಕು ಬಣ್ಣಗಳಲ್ಲಿದ್ದವು. ಪೂರ್ವವು ಕೆಂಪು, ದಕ್ಷಿಣ ಬಿಳಿ, ಪಶ್ಚಿಮ ಕಪ್ಪು, ಉತ್ತರ ಹಳದಿ ಮತ್ತು ಮಧ್ಯ ಭಾಗವು ಹಸಿರು ಎಂದಾಗಿತ್ತು. ಪೂರ್ವ ಕೆಂಪೇಕೆ ಮತ್ತು ಪಶ್ಚಿಮ ಕಪ್ಪೇಕೆ ಎಂದು ವಿಶೇಷವಾಗಿ ಹೇಳುವಷ್ಟಿಲ್ಲ. ಸೂರ್ಯನ ಉದಯ ಮತ್ತು ಅಸ್ತಮಗಳನ್ನು ಅವು ಸೂಚಿಸುತ್ತಿದ್ದು, ಮಧ್ಯವು ಬೆಳೆಯುವ ಕಾರಣದಿಂದ ಹಸಿರು ಎನ್ನುತ್ತಿದ್ದಿರಬಹುದು. ಇನ್ನು ದಕ್ಷಿಣ ಮತ್ತು ಉತ್ತರಗಳೇಕೆ ಬಿಳಿ ಮತ್ತು ಹಳದಿ ಎಂದು ತಿಳಿಯದು. ಈ ಭೂಮಿಯ ಪ್ರತಿ ಮೂಲೆಯಲ್ಲಿ ಬಕಾಬ್ ಎಂದು ಕರೆಯಲ್ಪಡುವ ವಿವಿಧ ಬಣ್ಣಗಳ ಚಿರತೆಗಳು ಆಕಾಶವನ್ನು ಎತ್ತಿ ಹಿಡಿದಿದ್ದವು. ಈ ಮಾಯನ್ನರ ಪ್ರಕಾರ ಜಗತ್ತು ಹದಿಮೂರು ಪದರಗಳಲ್ಲಿ ವಿಭಾಗಗಳನ್ನು ಹೊಂದಿದ್ದು ಪ್ರತಿಯೊಂದಕ್ಕೂ ಅದರದೇ ಆದ ದೇವರಿದೆ.

ನ್ಯೂಜಿಲ್ಯಾಂಡಿನ ಪಾಪ

ನ್ಯೂಜಿಲ್ಯಾಂಡ್‌ನ ಮಾವೋರಿ ಸಂಸ್ಕೃತಿಯಲ್ಲಿ ರಂಗಿ ಎಂಬ ಆಕಾಶದ ದೇವರಿಗೆ ಪಾಪ ಎಂಬ ಹೆಂಡತಿಯಿದ್ದು, ಅವಳೇ ಭೂದೇವಿ. ಟಾನ್ಗೋರ ಎಂಬ ಸಮುದ್ರ ದೇವರು ಇವರ ಮಗ. ಟಾನೆ ಎಂಬುವನು ಅರಣ್ಯ ದೇವ. ಆದಿಯಲ್ಲಿ ಜಗತ್ತು ಸೃಷ್ಟಿಯಾಗಲು ಇಷ್ಟ ಪಡದ ಆಕಾಶ ದೇವ ತನ್ನ ಹೆಂಡತಿಯನ್ನು ಬಿಗಿಯಾಗಿ ಅಪ್ಪಿಕೊಂಡೇ ಇದ್ದ. ಬಿಟ್ಟರೆ ಜಗತ್ತು ಸೃಷ್ಟಿಯಾಗಿ ಬಿಡುವುದು ಎಂದು. ಆದರೆ ಸಮುದ್ರ ದೇವ ಸೋರಿ ಹುಟ್ಟಿದ. ಅದರಂತೆಯೇ ಟಾನೆ, ಅರಣ್ಯ ದೇವ ತನ್ನ ತಂದೆಯಾದ ಆಕಾಶವನ್ನು ಮೀಟಿ ಎತ್ತಿದ, ಹಾಗೆಯೇ ತಾಯಿಯನ್ನು ಪಾದದಿಂದ ಕೆಳಕ್ಕೆ ಅದುಮಿ ತನ್ನ ತಂದೆಯಿಂದ ಪ್ರತ್ಯೇಕಿಸಿದ. ಅವನೇ ಸೂರ್ಯ, ಚಂದ್ರರನ್ನೂ, ನಕ್ಷತ್ರಗಳನ್ನೂ ಅಲಂಕಾರಿಕವಾಗಿ ಇಟ್ಟ. ಅವನು ಹಿಂದೂ ಪುರಾಣದ ಬ್ರಹ್ಮನಂತೆ ತಾನೇ ಒಂದು ಹೆಣ್ಣನ್ನು ಸೃಷ್ಟಿ ಮಾಡಿ ಅವಳನ್ನು ಮದುವೆಯಾದ. ಅವಳ ಹೆಸರು ಹೈನ್. ಅವಳೇ ನ್ಯೂಜಿಲಾಂಡಿನವರ ಪ್ರಕಾರ ಮೊದಲ ಹೆಣ್ಣು.

ನಾರ್ವೆಯ ಮಿಡ್ಗಾರ್ಡ್

ನಾರ್ವೆಯ ನಾರ್ಸ್ ಅಥವಾ ಸ್ಕ್ಯಾಂಡಿನೇವಿಯನ್ ಸಂಸ್ಕೃತಿಯಲ್ಲಿ ಭೂಮಿಯನ್ನು ಮಿಡ್ಗಾರ್ಡ್ ಎಂದು ಕರೆಯುತ್ತಾರೆ. ನಾರ್ಸ್ ಸಂಸ್ಕೃತಿಯ ಪ್ರಕಾರ ಜಗತ್ತು ಬೃಹತ್ತಾಗಿ ಬೆಳೆದ ಮರದಂತಿತ್ತು, ಅದಕ್ಕೆ ವಿಶ್ವವೃಕ್ಷ ಅಥವಾ ಯಗ್ಡ್ರಸಿಲ್ ಎಂದು ಕರೆಯುತ್ತಿದ್ದರು. ಅದರ ಬೇರುಗಳು ಪಾತಾಳಕ್ಕೆ ಇಳಿದಿದ್ದವು. ಮೇಲೆ ಬೆಳೆದಿರುವುದು ಭೂಮಿಗೆ ನೆರಳು ಕೊಡುತ್ತಿತ್ತು, ಆ ಮರದ ಮೇಲೆಯೇ ಮಿಡ್ಗಾರ್ಡ್ ಎಂಬ ಭೂದೇವತೆಯಿದ್ದು, ಅವಳನ್ನು ಸರ್ಪವು ಸುತ್ತುವರೆದಿತ್ತು.

ಮೆಸಪಟೋಮಿಯಾದ ಎನ್ಲಿಲ್

ಮೆಸಪಟೋಮಿಯಾದ ಸುಮೇರಿಯನ್ ಸಂಸ್ಕೃತಿಯಲ್ಲಿ ಭೂದೇವನ ಹೆಸರು ಎನ್ಲಿಲ್. ಸುಮೇರಿಯನ್ನರು ಮೂರು ಸಾವಿರ ವರ್ಷಗಳ ಹಿಂದೆ ಮೆಸಪಟೋಮಿಯಾದಲ್ಲಿ ಬದುಕಿದ್ದವರು. ಈಗ ಇರಾಕ್ ಮತ್ತು ಕುವೈತ್ ಎಂದು ಗುರುತಿಸಲಾಗುವ ಇಲ್ಲಿ ನಿಪ್ಪುರ್ ಎಂಬ ಪ್ರದೇಶವಿದ್ದು ಭೂಮಿಯನ್ನು ಆರಾಧಿಸುತ್ತಾರೆ. ಈ ಭೂದೇವನಾದ ಎನ್ಲಿಲ್ ದೇವತೆಗಳ ತಂದೆ. ಆದರೂ ಅವನೊಮ್ಮೆ ತಪ್ಪು ಮಾಡಿದ್ದನೆಂದು ದೇವಸಭೆಯಿಂದ ಅವನನ್ನು ಉಚ್ಚಾಟಿಸಿದ್ದರು.

ಭೂಮಿ ಹಲವು ಸಂಸ್ಕೃತಿಗಳಲ್ಲಿ ಹಲವು ರೀತಿಗಳಿಂದ ನೋಡಲ್ಪಟ್ಟಿದೆ. ನಮ್ಮ ದೇಶದ ಭೂಮಿಯ ಪುರಾತನ ಕಲ್ಪನೆಯೂ ಅತಿ ಕುತೂಹಲಕರವಾಗಿರುವಂತಹುದು. ಮುಂದೆ ಅದನ್ನು ನೋಡೋಣ.

ಅದೇನಾಯ್ತದೊ ನೋಡ್ತೀನಿ, ನಿಮ್ಮಪ್ಪ ಮಾಡ್ದಂಗೇ ಮಾಡ್ತೀನಿ



ಈ ಹಾಳಾದ ಬೆಲೆಗಳಿಗೆ ಆಕಾಶ ಕಂಡ್ರೆ ಅದೇನು ಪ್ರೀತಿಯೋ ಕಾಣೆ. ಅದಕ್ಕೆ ಮುತ್ತಿಡಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತವೆ. ಆಕಾಶ ಕೆಳಕ್ಕೆ ಇಳಿಯಲ್ಲವಲ್ಲಾ ಅದ್ಕೆ ಬೆಲೆಗಳೇ ಮೇಲಕ್ಕೆ ಹೋಗಕ್ಕೆ ಪ್ರಯತ್ನಪಡ್ತಾನೆ ಇರ್ತವೆ. ಯಾವ ಸರ್ಕಾರ ಬಂದ್ರೂ ಅವ ಹದ್ದುಬಸ್ತಿಗೆ ತರಲು ಸಾಧ್ಯವೇ ಇಲ್ಲವೇನೋ. ಯುಪಿಎ ಸರ್ಕಾರ ಇತ್ತು. ಅದು ಹೇಳಿಕೇಳಿ ಕೆಟ್ಟ ಸರ್ಕಾರ. ಕೆಡುಕಿನ ದಿನಗಳು ಬಂದೇ ಬರ್ತವೆ ಅನ್ನೊ ಖಾತರಿ ಜನಗಳಿಗೆ ಇರುತ್ತಿತ್ತು. ಬೆಲೆ ಏರಿದಾಗ ಸದ್ಯ ಅಷ್ಟಕ್ಕೇರಲಿಲ್ಲವಲ್ಲ, ಇಷ್ಟಕ್ಕೇ ನಿಂತದಲ್ಲ ಅಂತ ಮನಸ್ಸಿಗೆ ಒಂದು ರೀತಿಯ ಭ್ರಮೆ. ನೆಮ್ಮದಿಯಾದರೂ ಸಿಗುತ್ತಿತ್ತು. ಬೆಲೆ ಏರಕ್ಕೆ ಬುದ್ತೀನಾ ನಾನು ಬುಡದಲ್ಲೇ ಬಿಗಿ ಮಾಡ್ತೀನಿ ಅಂತ ಹಾರಾಡ್ತಾ ಮೋದಿ ಸರ್ಕಾರ ಬಂತು. ಬೆಲೆಗಳು ತಾವು ಕಲಿತ ಚಾಳಿ ಬಿಡಲೇ ಇಲ್ಲ, ಇದರಿಂದಾಗಿ ಗಿಂಬಳ ಸಿಗದಿರೋ ಸಂಬಳದಲ್ಲಿ ಸಂಸಾರ ಸಾಗಿಸೋದು ಹೆಂಗಪ್ಪ ಅನ್ನೋ ಚಿಂತೇಲಿ ಕುಂತಿದ್ದೆ.

'ಇದೀರ್ರಾ' ಎನ್ನುತ್ತಾ ಕ್ಯಾತ ಗೂಳಿ ನುಗ್ಗಿದಂಗೆ ನುಗ್ಗಿದ.

'ಹೂಂ ಬಾರಪ್ಪ ಕುಂತ್ಕೊ' ಅಂತ ಕುರ್ಚಿ ತೋರಿಸಿದೆ.

ಕುರ್ಚಿ ತೋರಿಸುವ ಅವಶ್ಯಕತೆ ಇರಲಿಲ್ಲ, ಅವನು ನಮ್ಮೂರಿನ ಅರಳುತ್ತಿರುವ ರಾಜಕಾರಣಿ. ಖಾಲಿ ಕುರ್ಚಿ ಕಂಡ ತಕ್ಷಣ ಅದನ್ನು ಅಲಂಕರಿಸೋದು ರಾಜಕಾರಣಿಗಳ ಹಕ್ಕು ಎಂಬ ಖಚಿತವಾದ ತಿಳಿವಳಿಕೆ ಅವನದ್ದು. ಕುರ್ಚಿಯಲ್ಲಿ ಕುಂತ.

'ಏನ್ಸಾ ಹೊತ್ತಾರೆ ಹೊತ್ತಾರೇನೇ ಆಕಾಸವೇ ತಲೆ ಮೇಲೆ ಬಿದ್ದಂಗೆ ಕುಂತಿದ್ದೀರಿ' ಅಂದ.

'ಮೋದಿ ಬೇನೆ ಕಣಪ್ಪ' ಅಂದೆ.

'ಏನಂದ್ರಿ ಸಾ' ಘರ್ಜಿಸಿದ ಕ್ಯಾತ.

ಕ್ಯಾತ ಮೋದಿ ಬ್ರಿಗೇಡ್‌ನ ಸಕ್ರಿಯ ಸದಸ್ಯ. ಮೋದಿಯ ಬಗ್ಗೆ ಅಚಲ ವಿಶ್ವಾಸ. ಕೋಪ ಬಂದದ್ದು ಸಹಜವೇ ಆಗಿತ್ತು, ಹುಷಾರಾದೆ.

'ಅಲ್ಲ ಬೆಲೆಗಳೆಲ್ಲ ರಾಕೆಟ್ ವೇಗದಲ್ಲಿ ಏರ್ತ ಅವಲ್ಲ ಅಂದೆ' ಅಂದೆ.

'ಅಷ್ಟೇಯ, ನಾನೇನೋ ಆಗಬಾರದ್ದು ಆಗ್ಬುಟ್ಟದೆ ಅಂತಿದ್ದೆ.'

'ಇನ್ನು ಏನು ಆಗಬೇಕಿತ್ತು? ಈಗ ಆಗಿರೋದು ಸಾಲದಾ?'

'ಅದ ಬುಡಿ ಸಾ ಜುಜುಬಿ ಅದು. ಮೋದಿ ಎಲ್ಲಾನೂ ಸರಿ ಮಾಡ್ತಾರೆ ಬುಡಿ.'

'ಏನು ಮಾಡ್ತಾರೊ ಅಪ್ಪ, ಅದ್ಯಾವಳೋ ಸಾಯ್ತೀನಿ ಸಾಯ್ತೀನಿ ಅಂತ ಸಾವಿರ ಕೋಳಿ ತಿಂದ್ಲಂತೆ. ಅಂಗಾಯ್ತು. ಇಳುಸ್ತೀನಿ ಇಳುಸ್ತೀನಿ ಅಂತಾವ ಬೆಲೆ ಏರುಸ್ತಾನೆ ಅವ್ನೆ.'

'ಏಸಿ ದಿಸ ತಡ್ಕಳಿ ಸಾ. ಗುಜರಾತಿನಲ್ಲಿ ಮಾಡ್ದಂಗೆ ಇಲ್ಲೂ ಮಾಡ್ತಾರೆ' ಅನ್ನೋ ಆಶ್ವಾಸನೆ ನೀಡಿದ.

ಮೋದಿ ಗುಜರಾತಿನಲ್ಲಿ ಏನು ಮಾಡಿದರು? ಗೊತ್ತಿಲ್ಲ, ಆದರೆ ಅಲ್ಲಿ ಮಾಡ್ದಂಗೆ ಇಲ್ಲೂ ಮಾಡ್ತಾರೆ ಅದು ಸತ್ಯ!

'ಕ್ಯಾತ' ಅಂದೆ.

'ಏನೇಳಿ ಸಾ' ಅಂದ.

'ನಮ್ಮಲ್ಲಿಕಡೆ ಒಂದು ಕತೆ ಹೇಳ್ತಾರೆ ಗೊತ್ತ?'

'ಅದ್ಯಾವುದು ಹೇಳಿ ಸಾ. ಆಮೇಲೆ ಗೊತ್ತಾ ಇಲ್ವಾ ಹೇಳ್ತೀನಿ' ಅಂದ.

ಕತೆ ಹೇಳುವುದಕ್ಕೆ ಪ್ರಾರಂಭಿಸಿದೆ.

ನಿಮ್ಮೂರಿನಂತ ಒಂದೂರು. ಅಲ್ಲಿ ಒಬ್ಬ ಶಾನುಭೋಗರು. ಅಂದ್ರೆ ಬಾಮ್ರು. ಅವರ ಹತ್ತಿರ ಒಂದು ಸೊಗಸಾದ ಕುದುರೆ ಇತ್ತು. ಅದ ಕಂಡ್ರೆ ಅವರಿಗೆ ಪಂಚಪ್ರಾಣ. ಒಂದಿಸ ಕುದುರೆ ರೆಡಿ ಮಾಡ್ಕಂಡು ಸನಿವಾರದ ಸಂತೆಗೋದ್ರು. ಸಂತೇನೆಲ್ಲ ರವುಂಡಾಕಿದ್ರು. ಬೇಕುಬೇಕಾದ ಕೊಂಡುಕೊಂಡ್ರು. ಕಾಜಗ ಕಳುಸ ಬೇಕಾದವರಿಗೆ ಕಾಜಗ ಕಳ್ಸಿದ್ರು. ಗುರುತು ಪರಿಚಯದವರ ಜೊತೆ ಕಷ್ಟ ಸುಕ ಮಾತಾಡ್ಕಂಡ್ರು. ಉರೀತಿದ್ದ ಸ್ವಾಮಿ ರೆಸ್ಟ್ ತಗೋಳೋಕೆ ಹೊಂಟ. ಇವ್ರು ಊರಿನ ಕಡೆ ಹೊಂಟ್ರು. ಇದ್ದಕ್ಕಿದ್ದಂತೆ ಕಾಗೆ ಕಣ್ಣಂಗೆ ಮೋಡ ಕಟ್ಕಂತು. ಊರು ಇನ್ನೂ ಐದಾರು ಮೈಲಿ ಇತ್ತು, ಕಣ್ಣು ಕಿಸಿದರೂ ಏನೂ ಕಾಣವಲ್ದು. ಮೋಡ ನೋಡಿದ್ರೆ ದೆಯ್ಯಾರಿ ಮಳೆ ಬರಂಗದೆ. ಊರಿಗೆಂಗಪ್ಪ ಸೇರೋದು ಅಂತ ಯೋಚನೆ ಮಾಡೋಕೂ ತಳ್ಳೂರಿನ ಪಟೇಲರು ಬಂದದ್ದೂ ಒಂದೇ ಆಯಿತು. 'ಅಯ್ನೋರೆ ಈ ಕತ್ಲೇಲಿ ಯಾಕೋದೀರಿ ನಡೀರಿ ಮನ್ಗೆ, ತಂಗಿದ್ದು ಹೊತ್ತಾರೆ ಕೋಳಿ ಕೂಗೋಕೆ ಹೊತ್ಗೆ ಹೋಗೀರಂತೆ' ಅಂದ್ರು ಪಟೇಲರು. ಇವರ್ರೂ ಅದೇ ಸರಿ ಅನ್ನುಸ್ತು, ಪಟೇಲರ ಮನೆಗೆ ಹೋದ್ರು. ಕೊಟ್ಟಗೇಲಿ ದನಕರ ಇದ್ದೊ. ಕುದುರೆಯ ಜೇನವ ಬಿಚ್ಚಿದ್ರು. ಅಲ್ಲೇ ಒಂದು ಕಡೆ ಇಟ್ರು. 'ಕುದುರೆ ಉಸಾರು' ಅಂತ ಆಳುಮಕ್ಕಳಿಗೆ ಎಚ್ಚರಿಕೆ ಮಾತೇಳಿದ್ರು. 'ಸಾವಿಲ್ಲೇ ಮನಕತ್ತೀವಿ. ಅದರ ಕೂದ್ಲೂ ಕೊಂಕದಂತೆ ನೋಡ್ಕತೀವಿ ಬುಡಿ ಅಯ್ನೋರೆ' ಅನ್ನೋ ಆಸ್ವಾಸನೆ ಬಂತು. ಇವ್ರು ಪಡಸಾಲೆಗೆ ಬಂದ್ರು. 'ಅಯ್ನೋರ ಹೊಟ್ಗೇನಾರ ನೋಡುರ್ರ' ಅಂದ್ರು ಪಟೇಲ್ರು. ಸೂದ್ರರಮಲ್ಲಿ ಅಯ್ನೋರು ಬೇಯಿಸಿದ್ದ ಏನೂ ತಿನ್ನಬಾರದು ಅಂತ ಸಾಸ್ತ್ರ ಹೇಳ್ತದೆ. ಅದ ಕಾಣ್ತ ಪಟೇಲರ ಮನೆಯೋರು. ಹಣ್ಣುಹಂಪಲು ತಂದ್ರು. ತಂಬಿಗೇಲಿ ಹಾಲೂ ಬಂತು. ಅಯ್ನೋರು ಅವನ್ನೆಲ್ಲ ಮುಗಿಸಿ ಹಂಗೇ ಒರಗಿಕೊಂಡರು.

ಕೋಳಿ ಕೂಗೋ ಹೊತ್ತಿಗೆ ಅಯ್ನೋರಿಗೆ ಎಚ್ಚರ ಆಯ್ತು. ಗಡಿಬಡಿಸಿಕೊಂಡು ಎದ್ದರು. ಸೀದ ಕೊಟ್ಟಗೆಗೆ ಹೋದರು. ದನಗಳು ಇದ್ದೊ. ಜೇನವೂ ಇತ್ತು, ಆಳುಕಾಳುಗಳೂ ಇದ್ದರು. ಅಯ್ನೋರ ಕುದುರೆ ಇರಲಿಲ್ಲ!

ಅಯ್ನೋರ ಜೀವ ದಸಕ್ಕಂತು. 'ನನ್ ಚಿನ್ನದಂತ ಕುದುರೆ ಎಲ್ರೋ' ಅಂತ ಆಳುಕಾಳ ಕೇಳಿದ್ರು. 'ಈಗೊಸಿ ಹೊತ್ನಲಿ ಇಲ್ಲೇ ಇತ್ತು, ಇಲ್ಲೇ ಎಲ್ಲೋ ಇರ್ಬೇಕು ಅಯ್ನೋರೆ' ಅಂದ್ರು ಆಳುಕಾಳು. 'ಎಲ್ರೋ ಎಲ್ಲೂ ಕಾಣ್ತಿಲ್ಲವಲ್ರೋ' ಅಂತ ಅಯ್ನೋರು. 'ಇಲ್ಲೇ ಇತ್ತು' ಅಂತ ಅವ್ರು. ಈ ಕೂಗಾಟ ಕಿರುಚಾಟಕ್ಕೆ ಪಟೇಲರಿಗೆ ಎಚ್ಚರ ಆಯಿತು. ಅವರೂ ಅಲ್ಲಿಗೆ ಬಂದ್ರು. ಅವರು ಸಮಾಚಾರ ಏನು ಎತ್ತ ಅಂತ ತಿಳ್ಕತ್ತಿದ್ರು. ಅಷ್ಟರಲ್ಲಿ ಅಯ್ನೋರು 'ಏನಯ್ಯ ಗೌಡ ನಾನು ನಿನ್ನ ನಂಬಿ ಕುದುರೆ ಬುಟ್ರೆ, ಅದ್ನೇ ಅಬೇಸ್ ಮಾಡ್ಸೀದಿಯಲ್ಲಾ' ಅಂತ ಅವರ ಮೇಲೇ ಗೂಬೆ ಕುಂಡಿರಿಸಿದ್ರು. ಪಟೇಲರಿಗೆ ಅವಮಾನ ಆಗಿತ್ತು. 'ಲೌಕಿಮಕ್ಳ ಎಲ್ರೋ ಅಯ್ನೋರ ಕುದ್ರೆ' ಅಂದು ಆಳುಮಕ್ಕಳ ಮೇಲೆ ಎಗರಿಬಿದ್ರು. 'ಇಲ್ಲೇ ಇತ್ತು ಗೌಡ್ರೆ' ಅಂದೋ ಅವ್ರು. 'ಇಲ್ಲೇ ಇದ್ರೆ ಎಲ್ಲಿಗೋಯ್ತದೆ. ನನ್ ಚಿನ್ನದಂತ ಕ[illegible] ಸಿಕ್ಕಿದರೆ ಸರಿ. ಇಲ್ದಿದ್ರೆ ಅದೇನಾಯ್ತದೊ ನೋಡ್ತಿ[illegible] ನಮ್ಮಪ್ಪ ಮಾಡ್ದಂಗೇ ಮಾಡ್ತೀನಿ' ಅಂತ ಕೂಗಾಡಿ[illegible] ಅಯ್ನೋರು. ಇವರ ಹಾರಾಟ ನೋಡಿ ಪಟೇಲರಿಗೆ ಗಾ[illegible] ಆಯಿತು. ಹಿಂಗೆ ಅವರಪ್ಪ ಕುದುರೆ ಕಳ್ಕಂಡಾಗ ಅದೇನ[illegible] ಕೇಡು ಮಾಡಿದ್ನೋ ಕಾಣೆನಲ್ಲಪ್ಪ. ಇಪ್ನ ಹೀಗೆಮ[illegible] ಬಿಟ್ಟಾನ್ ಅಂತಾವ 'ಹೋಗುರ್ಲ ಹುಡ್ಕಿ, ಕುದುರೇ[illegible] ಅಂತ ಆಳುಗಳಿಗೆ ಆಡ್ರು ಮಾಡ್ದ.

ಇತ್ಲಾಗಿ 'ಏನಾಯ್ತುದೊ ನೋಡ್ತೀನಿ, ನಮ್ಮಪ್ಪ ಮಾಡ್[illegible] ಮಾಡ್ತೀನಿ' ಅನ್ನೊ ಜಪಾವ ಅಯ್ನೋರು ಮಾಡುತ್[illegible] ಅತ್ಲಾಗಿ ಆಳುಕಾಳು ಸಂದಿಗೊಂದಿ ಓಣಿಗೀಣೀಲೆಲ್ಲ ಕುದ[illegible] ತಡುಕ್ತಾ ಇದ್ರು. ಆಳು ಬಸ್ತಿ ಕುದ್ರೆ ಅವ್ರ ಕಣ್ಗೆ ಎ[illegible] ಬೀಳ್ಲಿಲ್ಲ, 'ಎಲ್ಲಿ ಹಾಳಾಯ್ತೊ ಈ ನನ್ ಹಳೆ ಸವತಿ ಕು[illegible] ಆ ಹಾರುವಯ್ಯ ಬೇರೆ ಸಿಗದಿದ್ರೆ ನಮ್ಮಪ್ಪ ಮಾಡ್[illegible] ಮಾಡ್ತೀನಿ ಅಂತ ಕುಂತವ್ನೆ. ಹಿಟ್ಟು ಹಾಕಿದ ಗೌ[illegible] ಮನೆಗೆ ಅದೇನು ಕೇಡುಗಾಲ ಕಾದದೊ ಕಾಣೆವ[illegible] ಸಿವನೆ' ಎನ್ನುತ್ತಾ ಕಾಲ ಬೀಸಿಬೀಸಿ ಹಾಕಿದರು. ಸುಮಾ[illegible] ಹೊತ್ತು ಹಿಂಗೆ ತಡಕಿದ ಮೇಲೆ ಕೆರೆ ಹಿಂದಿನ ಜೊಂಡಿ[illegible] ಕುದ್ರೆ ಇರೋದು ಕಾಣ್ತು, ಉಸಾರಾಗಿ ಅದ ಹಿಡಿ[illegible] ಮನೆಗೆ ಹೊಡ್ಕಂಡು ಬಂದ್ರು. ಕುದ್ರೆ ಕಣ್ಗೆ ಬಿದ್ದ ಮೆ[illegible] ಪಟೇಲರಿಗೆ ಏಳರ ಶನಿ ಕಾಟ ತಪ್ಪಿಸಿಕೊಂಡಂತಾಯ[illegible] ಹೋಗಿದ್ದ ಜೀವ ಬಂದಂಗಾಯ್ತು, 'ಇನ್ನೇನು ಅಯ್ನೋ[illegible] ನಿಮ್ ಕುದ್ರೆ ಸಿಕ್ತಲ್ಲ ಒಪ್ಪಸ್ಕಳಿ' ಅಂದ್ರು. ಇದ್ದಕ್ಕಿದ್[illegible] ಈವಯ್ಯ 'ನಮ್ಮಪ್ಪ ಮಾಡಿದಂಗೇ ಮಾಡ್ತೀನಿ' ಅನ[illegible] ಜಪ ಮಾಡ್ತಿದ್ನಲ್ಲ, ಏನು ಮಾಡಿದ್ರು ದೊಡ್ಡ ಅಯ್ನೋ[illegible] ಅನ್ನೊ ಕುತೂಹಲ ಪಟೇಲರ ಕೆರಳಿತು. 'ಅಯ್ನೋ[illegible] ನಮ್ಮಪ್ಪ ಮಾಡ್ದಂಗೆ ಮಾಡ್ತೀನಿ ಅಂತಿದ್ರಲ್ಲ ಅದೇ[illegible] ಮಾಡಿದ್ರು ನಿಮ್ಮಪ್ಪಾರು' ಅಂತ ಅಯ್ನೋರನ್ನ ಪಟೇಲ[illegible] ಕೇಳಿದ್ರು.

'ನಮ್ಮಪ್ಪಾರ?'

'ಹೂಂ ಅಯ್ನೋರೆ...'

'ಕುದ್ರೆ ಕಳ್ದೋದಾಗ ಏನು ಮಾಡಿದ್ರು ಅಂದ್ರೆ...'

ಪಟೇಲರು ಮೈಯೆಲ್ಲ ಕಿವಿಯಾಗಿ ಕೇಳುತ್ತಿದ್ದರು.

'ಏನು ಮಾಡಿದ್ರು ಅವ್ರು?'

'ಊರಿಗೆ ನಡ್ಕೊಂಡು ಹೋದ್ರು!'

ಕತೆ ಹೇಳಿ ಮುಗಿಸಿದೆ. 'ಮೋದಿ ಗುಜರಾತಿ[illegible] ಮಾಡಿದಂಗೇ ಇಲ್ಲೂ ಮಾಡ್ತಾರೆ ಅಂದ್ರೆ ಹಿಂಗೇ ಅದ[illegible] ಅಂದೆ.

ನನ್ನನ್ನು ಕುರಿತು 'ಕಾಮಾಲೆ ಕಣ್ಣು', ಮೋದಿ ಬೈಟ[illegible] ಅಂತ ಏನೇನೋ ಅಂದ.

ಕಾಮಾಲೆ ಕಣ್ಣು ಯಾರದ್ದು? ನನ್ನದೊ? ಕ್ಯಾತನದ[illegible]

● ಎಚ್ಚೆ[illegible]

ಮೋದಿಯೆಂಬ ರಾಮಾವತಾರ ಭಾಗ-2


ಬಹುಪತ್ನಿತ್ವಕ್ಕೆ ಮಾನ್ಯತೆಯಿದ್ದ ಮೂವರು ಹೆಂಡಂದಿರ ದಶರಥ ರಾಜನ ಆ ಕಾಲದಲ್ಲಿ ಕೇವಲ ಪ್ರೇಮಭಿಕ್ಷೆ ಕೇಳಿದ್ದಕ್ಕಾಗಿ ತಂಗಿಯ ಕಿವಿಮೂಗು ಸ್ತನಗಳನ್ನು ಕೊಯ್ದು ಕ್ರೂರತೆಯನ್ನು ತೋರಿದಾತನ ಹೆಂಡತಿಯನ್ನು ರಾವಣ ಸೇಡಿಗಾಗಿ ಹೊತ್ತುತಂದನೇ ಹೊರತು ತನ್ನ ಸುಪರ್ದಿಯಲ್ಲೇ ಆಕೆಯಿದ್ದರೂ ಅವಳನ್ನು ಯಾವತ್ತೂ ಬಲಾತ್ಕರಿಸಲಿಲ್ಲ. ರಾಮನಿಗೆ ಹೋಲಿಸಿದರೆ ರಾವಣ ಸದ್ಗುಣಿಯೆನ್ನುವಂತಹ ಹಲವು ಉದಾಹರಣೆಗಳು ರಾಮಾಯಣದಲ್ಲೇ



ದೊರೆಯುತ್ತವೆ. ಅದಕ್ಕಿಂತಲೂ ಹೆಚ್ಚಾಗಿ ರಾಮ ಅಬ್ರಾಹ್ಮಣ ಕ್ಷತ್ರಿಯನಾದರೆ ರಾವಣ ಪುಲಸ್ತ್ಯನೆಂಬ ಮಹಾತಪಸ್ವಿ ಬ್ರಾಹ್ಮಣನೊಬ್ಬನ ಕುಡಿ. ಆದರೂ ಬ್ರಾಹ್ಮಣರ ಪೂಜೆ ಸಲ್ಲುವುದು ಮಾತ್ರ ರಾಮನಿಗೇನೆ. ಇಲ್ಲಿ ಜಾತಿಯನ್ನೂ ಮೀರಿ ರಾಮ ವೈದಿಕರಿಗೆ ಆಪ್ಯಾಯಮಾನವಾಗಿ ತೋರುವ ಏಕೈಕ ಕಾರಣವೆಂದರೆ ಆತನೊಬ್ಬ ಅಪ್ಪಟ ಮನುಧರ್ಮಶಾಸ್ತ್ರದ ಕಟ್ಟಾ ಫಾಲೋವರ್ ಎಂಬುದೇ ವಿನಹ ಬೇರೇನಲ್ಲ, ಹೆಂಡತಿಗಾಗಿ ಇನ್ನಿಲ್ಲದ ಪಾಡುಪಟ್ಟು ಗೆದ್ದರೂ ಆ ಹೆಂಡತಿಯೆದುರು ನಡಕೊಂಡ ರೀತಿ, ರಾಮರಾಜ್ಯ ಸುಖೀರಾಜ್ಯ ಎಂದಿದ್ದರೂ ಅಲ್ಲಿ ಶಂಭೂಕನಂತಹ ಅಮಾಯಕರ ಕೊಲೆಯಾಗಲೇ ಬೇಕಾದ ಅನಿವಾರ್ಯತೆ, ಕಾರ್ಯಸಾಧನೆಗಾಗಿ ತಪ್ಪುಒಪ್ಪುಗಳನ್ನು ಪರಿಗಣಿಸದಿರು (ಮೋದಿಯ ಕಾರು-ನಾಯಿ ಹೇಳಿಕೆಯನ್ನು ನೆನಪಿಸುವ) ಎನ್ನುವ ವಾಲಿ ವಧೆಯೇ ಮೊದಲಾದ ಸಂಗತಿಗಳು ಇದನ್ನೇ ತೋರುತ್ತವೆ ತಾನೆ?

ಮೋದಿ ಅಬ್ರಾಹ್ಮಣ ಕೆಳಜಾತಿಯವನಾದರೇನು? ಆತನ ಗುಜರಾತಿನ ಗ್ರೇಟ್ ರಾಜ್ಯಭಾರದ ಹಿನ್ನೆಲೆಯನ್ನು ನೋಡಿಯೇ ಆರೆಸ್ಸೆಸ್ ಪಡೆ ದಂಗಾಗಿ ಹಿರಿಹಿರಿ ಹಿಗ್ಗಿತ್ತು, ಮನುಧರ್ಮ ಕಾಯುವ ಸಾಮರ್ಥ್ಯದ ಈತನೇ ನಮ್ಮ ಎರಡನೇ ರಾಮರಾಯನಾಗಲು ತಕ್ಕವನು ಎಂದು ನಿರ್ಧರಿಸಿ ಇನ್ನಿತರ ಹಿರಿಯ ನಾಯಕರನ್ನೆಲ್ಲ ಹಿಂದಿಕ್ಕಿ ಭೇಜಾನಾಗಿ ಆತನನ್ನು ಬೆಂಬಲಿಸಿ ಗೆಲ್ಲಿಸಿ ಕೊಟ್ಟಿತು. ಮಾತಿಗೆ ತಪ್ಪದ ಮೋದಿ ಜನ ಹೊಟ್ಟೆಗೆ ಬಟ್ಟೆಗೆ ಗತಿಯಿಲ್ಲದಿದ್ದರೂ ಅದಕ್ಕಾಗಿ ಕಾರ್ಯಯೋಜನೆ ಕೈಗೊಳ್ಳುವ ಬದಲು ಮೊಟ್ಟಮೊದಲು ಕೈಹಾಕಿದ್ದೇ ಗಂಗಾಶುದ್ಧಿಯಂತಹ ಯೋಜನೆಗೆ. ಕೇವಲ ನದಿ ಹೆಸರಿನ ಗಂಗಾ ಯೋಜನೆ ಆಗುವುದಾದರೆ ಇದನ್ನು ಒಪ್ಪಬಹುದಿತ್ತು, ಆದರದು ಪಕ್ಕಾ ಹಿಂದುತ್ವದ ಉದ್ಧಾರದ ಹಿನ್ನೆಲೆಯಿರುವಂತಹ ಯೋಜನೆ ಎಂಬುದರಲ್ಲಿ ಎರಡು ಮಾತಿಲ್ಲ. ಅದರ ಮುಂದುವರೆದ ಭಾಗವಾಗಿ ನಂತರ ಸಾವಿರಗಟ್ಟಲೆ ಕೋಟಿ ರೂ. ವೆಚ್ಚದ ವೈಷ್ಣೋದೇವಿ ರೈಲು ಯೋಜನೆ ಬಂತು. ಜನ ಹೊಟ್ಟೆಬಟ್ಟೆಗಿಲ್ಲದಿದ್ದರೂ ಪರ್ವಾಗಿಲ್ಲ ದೇಗುಲಯಾತ್ರೆ, ಪಾಪ ಕಳೆಯಲು ನದಿಮುಳುಗು ಆ ಮೂಲಕ ಪರಾವಲಂಬಿ ವಿಪ್ರರ ಕಮಾಯಿ ಹೆಚ್ಚಿದರಷ್ಟೇ ಸಾಕೆಂದು ಬರೀ ದೇಗುಲ-ಪುಣ್ಯತೀರ್ಥಗಳ ಅಭಿವೃದ್ಧಿಗೆಂದೇ ಈ ಮೋದಿ ಬ್ರಾಹ್ಮಣ ಸೇವೆಯೇ ತನ್ನ ಪರಮಗುರಿ ಎಂದೀಗ ಹೊರಟಂತಿದೆ. ಮೋದಿಯ ಕೃಪಾಛತ್ರದಡಿಯಲ್ಲಿ ಇದೀಗಲೇ ಆರೆಸ್ಸೆಸ್ ಪಡೆ ಕಾರ್ಯಪ್ರವೃತ್ತವಾಗಿಯೂ ಆಗಿದೆ.

ಈತನೇನೋ ಮುಂದೆ ನೂರು ವರ್ಷಗಳ ಬಳಿಕ



ಹೊಗಳಿಕೆ ತೆಗಳಿಕೆ

ರಾಮಾ ಪಾರ್ಟ್ 2 ಎಂದು ಬ್ರಾಹ್ಮಣರಿ[illegible] ಹೊಗಳಿಸಿ ಕೊಂಡು ಪೂಜೆಗೊಳ್ಳಬಹು[illegible] ಆದರೆ ಈ ದೇಶದ ಪ್ರಜೆಗಳಾದ ವಾ[illegible] ಶಂಭೂಕ, ಸೀತಾದೇವಿ ಯಂತವರ ಗ[illegible] ಅಯ್ಯೋ ರಾಮ..!! ರಾಮ?.!!!

-ಅವಿನಾಶ್ ಎಂ.ಎಸ್, ನೆಲ್ಲಿಕಾ[illegible]


ಕಾರವಾರ ನೌಕಾ ನೆಲೆಯಲ್ಲಿ ಸ್ಥಳೀಯರಿಗೆ ಉದ್ಯೋಗ? ಕೋಟೆ ಲೂಟಿಯಾದ ಮೇಲೆ ಬೀಗ[illegible]

ತಮಿಳುನಾಡಿನಲ್ಲಿ ಒಂದು ಹೊಸ ಯೋಜನೆ[illegible] ಪ್ರಸ್ತಾಪವಾದಾಗ, ಮೊದಲು ಕೇಳುವ ಪ್ರಶ್ನೆ: ಎಷ್ಟು ಜನ[illegible] ಉದ್ಯೋಗ? ತಮಿಳರಿಗೆ ಎಷ್ಟು? ಸ್ಥಳೀಯರಿಗೆ ಎಷ[illegible] ಇದು ಇತ್ಯರ್ಥವಾದ ಮೇಲೆಯೇ ಬಾಕಿ ವಿಚಾರ. ಅಲ್ಲಿ[illegible] ಜನರು ತಮಿಳುನಾಡಿನ ಸರ್ಕಾರದ ಸಂಗಡ ಮತ್ತು ಕೇ[illegible] ಸರ್ಕಾರದ ಜೊತೆ ನಿರಂತರ ಹೋರಾಟ ಮಾ[illegible] ಯೋಜನೆಗಳನ್ನು ಪಡೆದುಕೊಳ್ಳುತ್ತಾರೆ. ಈ ಯೋಜನೆ[illegible] ಅನುಷ್ಠಾನದ ಪ್ರತಿಹಂತದಲ್ಲಿಯೂ ತಮಿಳರಿಗೆ ಸಿಗ[illegible] ಉದ್ಯೋಗದ ಮೇಲೆ ನಿಗಾ ಇಟ್ಟಿರುತ್ತಾರೆ. ಇದ[illegible] ಕಿಂಚಿತ್ತೂ ನ್ಯೂನತೆಯಾದರೂ ಅಂತಾರಾಷ್ಟ್ರೀಯಮ[illegible] ದವರೆಗೂ ಹೋರಾಡಲು ಅವರು ಸಿದ್ಧ, ಅವರ ನಿಲುವಿಗೆ ಅಲ್ಲಿಯ ಪ್ರಾದೇಶಿಕ ದ್ರಾಮುಕ ಪಕ್ಷಗಳು ಮ[illegible] ಅಲ್ಲಿಯ ಸರ್ಕಾರ ಸದಾ ಅವರ ಬೆನ್ನಿಗೆ ಇರುತ್ತದೆ.

ಆದರೆ ನಮ್ಮಲ್ಲಿ ಹೋರಾಡಿ ಯೋಜನೆಗಳ[illegible] ಪಡೆಯುವ ಮಾತು ವಿರಳ. ತಾನಾಗಿಯೇ ಬ[illegible] ಯೋಜನೆಗಳನ್ನು, ಅವುಗಳ ವಿಸ್ತೃತ ವರದಿ ಬರುವ ಮೊದ[illegible] ಅವುಗಳ ವಿರುದ್ಧ ಹೋರಾಟ ಆರಂಭವಾಗುತ್[illegible] ತಡೆಆಜ್ಞೆಗಾಗಿ ತಡಕಾಡುತ್ತಾರೆ. ಈ ಜಿಲ್ಲೆಯಲ್ಲಿ ಕಾರ[illegible] ನೌಕಾ ನೆಲೆ, ಕೈಗಾ ಅಥವಾ ಕೊಂಕಣ ರೈಲುಮಾರ್ಗ[illegible] ನಮ್ಮವರ ಹೋರಾಟದ ದಾಖಲೆ ಹೆಚ್ಚಾಗಿ ಕಾಣುತ್[illegible]

ಮಹಾನ್ ನಟ ಜಾಕ್ ನಿಕೋಲ್ಸನ್

ಈತ ನಿಜಕ್ಕೂ ದೊಡ್ಡ ನಟ. ಕಲೆಯನ್ನೇ ಉಸಿರಾಡುವವರ ಪೈಕಿ ಈತನೂ ಒಬ್ಬ ಎನಿಸಿದ. 1937ರಲ್ಲಿ ಜನಿಸಿದ ಈತ ಬರಹಗಾರ, ನಿರ್ದೇಶಕ, ನಿರ್ಮಾಪಕ ಕೂಡ. 'ಒನ್ ಹು ಫ್ಲ್ಯೂ ಓವರ್ ದಿ ಕುಕ್ಕೂಸ್ ನೆಸ್ಟ್', 'ಆಸ್ ಗುಡ್ ಆಸ್ ಇಟ್ ಗೇಟ್ಸ್', 'ಟರ್ಮ್ಸ್ ಆಫ್ ಎಂಡಿಯರ್ಮೆಂಟ್', 'ದಿ ಶೈನಿಂಗ್', 'ಚೈನಾ ಟೌನ್', 'ಎ ಫ್ಯೂ ಗುಡ್ ಮೆನ್', 'ದಿ ಡಿಪಾರ್ಟೆಡ್', 'ಫೈವ್ ಈಸಿ ಫೀಸಸ್', 'ಈಸಿ ರೈಡರ್', 'ದಿ ಲಾಸ್ಟ್ ಡೀಟೇಲ್' ಥರದ ಚಿತ್ರಗಳಲ್ಲಿ ನಟಿಸಿ ಜಗತ್ತನ್ನು ಚಕಿತಗೊಳಿಸಿದ. ಇವತ್ತಿಗೂ ನಿಕೋಲ್ಸನ್ನನ ಚಿತ್ರಗಳು ಪ್ರಪಂಚದ ಅತ್ಯುತ್ತಮ ಚಿತ್ರಗಳ ಪಟ್ಟಿಯಲ್ಲಿ ಇರುತ್ತವೆ. ಆದರೂ ನಿಕೋಲ್ಸನ್ ಇವೆಲ್ಲವನ್ನೂ ಮೀರಿದ ವಿಶಿಷ್ಟ ಮನುಷ್ಯ. ಮೂರು ಬಾರಿ ಆಸ್ಕರ್ ಪಡೆದ ನಿಕೋಲ್ಸನ್ ಅರವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾನೆ. ಈತನನ್ನು ಪತ್ರಕರ್ತರೊಬ್ಬರು ಸಂದರ್ಶನ ಮಾಡಿದಾಗ ಈತನ ಕುರಿತು ಒಂದಿಷ್ಟು ಕುತೂಹಲಕಾರಿ ಸಂಗತಿಗಳು ತೆರೆದುಕೊಳ್ಳುವುದರಿಂದ ಒಂದಿಷ್ಟು ಮಾತುಕತೆಯನ್ನು ಇಲ್ಲಿ ಕೊಡಲಾಗಿದೆ.



ಪ್ರಶ್ನೆ: ಮಿ.ನಿಕೋಲ್ಸನ್, ನೀವು ಸದಾ ಸಾವಿನ ಬಗ್ಗೆ ಯೋಚಿಸ್ತೀರಾ?

ನಿಕೋಲ್ಸನ್: ಹೌದು. ಈ ವಿಚಾರಗಳು ಸಾಮಾನ್ಯವಾಗಿ ಎಲ್ಲರೂ ಚಿಂತಿಸುವಂಥದ್ದೇ. ಆದರೆ ಯಾರೂ ಬಹಿರಂಗವಾಗಿ ಚರ್ಚಿಸುವುದಿಲ್ಲ ಅಷ್ಟೇ... ಎಲ್ಲರೂ ಒಂದಲ್ಲ ಒಂದು ಸಮಯದಲ್ಲಿ ತಾವು ಹೇಗೆ ಸಾಯುತ್ತೀವಿ? ಹೂಳಲ್ಪಡುತ್ತೀವಾ? ಸುಡಲ್ಪಡುತ್ತೀವಾ? ಎಂಬುದರ ಬಗ್ಗೆಯೆಲ್ಲಾ ಚಿಂತಿಸಿಯೇ ಇರುತ್ತಾರೆ.

ಪ್ರಶ್ನೆ: ನಿಮ್ಮ ಆಯ್ಕೆ ಏನು?

ನಿಕೋಲ್ಸನ್: ನನಗೆ ನನ್ನ ಗೋರಿಯ ಮೇಲೆ ಇಪ್ಪತ್ತೈದು ಅಡಿ ಎತ್ತರದ ಒಂದು ರೋಜಾ ಬಣ್ಣದ ಪ್ರತಿಮೆ ಸ್ಥಾಪಿಸಲ್ಪಡಬೇಕು. ಅಥವಾ ಕೆಲವು ಪೂರ್ವದೇಶಗಳಲ್ಲಿ ಮಾಡುವ ಥರ ನನ್ನ ಮೃತದೇಹವನ್ನು ಯಾವುದಾದರು ಮರದ ಮೇಲೆ ನೇತುಹಾಕಬೇಕು. ಪಕ್ಷಿಗಳಿಗೆ ಆಹಾರವಾಗಬಹುದು. ಅಥವಾ ಭಾರತೀಯರಲ್ಲಿ ಕೆಲವರು ಮಾಡುವಂತೆ ನನ್ನ ದೇಹವನ್ನು ಸುಟ್ಟುಬಿಡಬೇಕು.

ಪ್ರಶ್ನೆ: ವಯಸ್ಸಾಗುವುದರಿಂದ ಏನಾದರು ಧನಾತ್ಮಕ ಪರಿಣಾಮಗಳಿವೆಯೇ?

ನಿಕೋಲ್ಸನ್: ತುಂಬಾನೇ ಇವೆ. ಬೇಗ ಬೇಗ ಕಾರ್ಯಪ್ರವೃತ್ತರಾಗಲು ಸಾಧ್ಯವಾಗುವುದಿಲ್ಲವಾದ್ದರಿಂದ ಹೆಚ್ಚು ಯೋಚಿಸಿ ಮುನ್ನಡೆಯುತ್ತೇವೆ. ನಿಜ ಹೇಳಬೇಕೆಂದರೆ ನನಗೆ ಎಪ್ಪತ್ತು ತುಂಬಿದ ಮೇಲೆಯೇ ನನಗೆ ಮೊಟ್ಟಮೊದಲಬಾರಿಗೆ ಯೌವನದ ಅನುಭವವಾಗಿದ್ದು. ಐವತ್ತು ತುಂಬಿದಾಗ ಏನೋ ಭಯ... ಏನೋ ಹೊರೆ ಎನಿಸುತ್ತೆ. ಆದರೆ ಎಪ್ಪತ್ತು ತುಂಬಿದ ಮೇಲೆ ಏನೋ ನಿರಾಳ.

ಪ್ರಶ್ನೆ: ನಿಮಗೆ ಈ ವಯಸ್ಸಿನಲ್ಲೂ ಯುವಕ ಎನ್ನಿಸಲು ಕಾರಣಗಳೇನು?

ನಿಕೋಲ್ಸನ್: ಗೊತ್ತಿಲ್ಲ. ಇಷ್ಟಕ್ಕೂ ವಯಸ್ಸಿಗೂ ಆ ಅನುಭವಕ್ಕೂ ಏಕೆ ತಾಳೆಹಾಕಬೇಕು ಅಲ್ಲವೇ? ನನ್ನಲ್ಲಿ ಈಗಲೂ ಜೀವನೋತ್ಸಾಹ ಕಿಂಚಿತ್ತೂ ಕಡಿಮೆಯಾಗಿಲ್ಲ. ಉತ್ಸಾಹ ನಿರಂತರವಾಗಿದ್ದಲ್ಲಿ ಯೌವನವೂ ನಿರಂತರವೇ ಅಲ್ಲವೇ?

ಪ್ರಶ್ನೆ: ನಿಮ್ಮ ಜೀವನದಲ್ಲಿ ನಡೆದ ಪ್ರಮುಖ ಘಟನೆಗಳು ಯಾವುವು?

ನಿಕೋಲ್ಸನ್: ನನ್ನ 'ಈಸಿ ರೈಡರ್' ಚಿತ್ರದ ಪ್ರದರ್ಶನ ಕ್ಯಾನ್ಸ್ ಚಿತ್ರೋತ್ಸವದಲ್ಲಿ ನಡೆದಿದ್ದು. ಯಾಕೆಂದರೆ ಅದು ನನ್ನ ಕನಸಿನ ತಾಣ. ನಾನು ಆ ಮುಂಚೆಯೂ ಅಲ್ಲಿ ಸುಳಿದಾಡಿದ್ದೆ. ಆದರೆ ನನ್ನ ಚಿತ್ರ ಅಲ್ಲಿ ಪ್ರದರ್ಶನಗೊಂಡಾಗಲಷ್ಟೇ ನಾನು ನಿಜವಾದ ಜನಪ್ರಿಯ ಚಿತ್ರತಾರೆ ಎಂದು ನನಗೆ ಅರಿವಾಗಿದ್ದು. ನಾನು ಅಲ್ಲಿ ಇದ್ದಾಗಲೇ ನನಗೆ ಚಿತ್ರ ನಿರ್ದೇಶನ ಮಾಡುವ ಯೋಚನೆ ತಲೆಗೆ ಬಂದಿದ್ದು. ಯಾಕೆಂದರೆ ಅದಾಗಲೇ ನಾನು ಚಿತ್ರರಂಗಕ್ಕೆ ಬಂದು ಹನ್ನೆರಡು ವರ್ಷಗಳಾಗಿದ್ದವು. ಎಲ್ಲರೂ ನನ್ನನ್ನು ಹೊಗಳುತ್ತಿದ್ದರು ನಿಜ. ಆದರೆ ಜನಪ್ರಿಯತೆ ಬೇರೆ ಯಶಸ್ಸು ಬೇರೆ ಅಲ್ವಾ? ಎಷ್ಟೇ ಜನಪ್ರಿಯನಾದರೂ ಯಶಸ್ಸು ಸಿಗದಿದ್ದಲ್ಲಿ ಸಾಧಿಸಿದ್ದು ಸೊನ್ನೆ ಎಂಬ ಭಾವ ನನ್ನನ್ನು ಗಾಢವಾಗಿ ಆವರಿಸಿತ್ತು. ಆದ್ದರಿಂದ ಆ ಪ್ರದರ್ಶನ ನನ್ನ ಮಟ್ಟಿಗೆ ಅತ್ಯಮೂಲ್ಯ

ಪ್ರಶ್ನೆ: ನಿಮ್ಮನ್ನು ಈಗಲೂ ಜನಪ್ರಿಯತೆಯ ಜಂಬದ ಕುದುರೆ ಕರೆಯುತ್ತದೆಯೇ?

ನಿಕೋಲ್ಸನ್: ಹೌದು. ಹಾಗೆ ಕರೆದಾಗಲೆಲ್ಲ ನಾನು ಕಣ್ಣು ಕಿವಿಗಳನ್ನು ಮುಚ್ಚಿಕೊಳ್ಳುತ್ತೇನೆ. ಹಾಗೆ ಮಾಡಿದರಷ್ಟೇ ಒಬ್ಬ ನಟ ಪರಿಪೂರ್ಣನಾಗಲು ಸಾಧ್ಯ ಎಂಬುದು ನನ್ನ ಅನಿಸಿಕೆ.

ಪ್ರಶ್ನೆ: ನಿಮ್ಮಲ್ಲಿ ಸಾಕಷ್ಟು ಆತ್ಮವಿಶ್ವಾಸ ಕಾಣುತ್ತದೆ...

ನಿಕೋಲ್ಸನ್: ಹೌದು. ಬೆಳೆಯುವ ಚಿಗುರಿಗೆ ಆತ್ಮವಿಶ್ವಾಸವೇ ಬೇರುಗಳು.

ಪ್ರಶ್ನೆ: ನೀವು ಇತರರ ಪಾಲಿಗೆ ಒರಟು ಸ್ವಭಾವದವರು ಎನಿಸುತ್ತದೆಯೇ ನಿಮಗೆ?

ನಿಕೋಲ್ಸನ್: ವ್ಯವಹಾರದ ವಿಷಯದಲ್ಲಿ ಹೌದು, ನಾನೊಬ್ಬ ಕಠಿಣ ಮನುಷ್ಯ. ಆದರೆ ಈವರೆಗೆ ಯಾರೂ ನನ್ನನ್ನು ವಂಚಕ, ಲೋಭಿ ಎಂದಂತೂ ಪರಿಗಣಿಸಿಲ್ಲ ಎನ್ನುವುದೂ ಅಷ್ಟೇ ನಿಜ.

ಪ್ರಶ್ನೆ: ಹುಡುಗಿಯರ ಬಗ್ಗೆಗೂ ಸಹ?

ನಿಕೋಲ್ಸನ್: ಅದು ಅವರ ಸಮಸ್ಯೆ... ಯಾಕೆಂದರೆ ನನ್ನನ್ನು ಅವಶ್ಯಕತೆಗಿಂತ ಹೆಚ್ಚಾಗಿ ಅವರು ಹಚ್ಚಿಕೊಂಡಿದ್ದರೆ ಅದಕ್ಕೆ ನಾನು ಹೇಗೆ ತಾನೇ ಜವಾಬ್ದಾರನಾಗಲು ಸಾಧ್ಯ?

ಪ್ರಶ್ನೆ: ನಿಮಗೆ ಹೆಂಗಸರ ಮೋಹವಿದೆಯೇ?

ನಿಕೋಲ್ಸನ್: ಖಂಡಿತ.

ಪ್ರಶ್ನೆ: ನೀವು ನಿಮ್ಮ ನಟನಾ ಕೌಶಲ್ಯಗಳನ್ನು ಹೆಂಗಸರ ಮೇಲೆ ಪ್ರಯೋಗಿಸುತ್ತೀರಾ?

ನಿಕೋಲ್ಸನ್: ತೆರೆಯ ಮೇಲೆ ಮತ್ತು ತೆರೆಯ ಹಿಂದೆ ನಟನೆಯಲ್ಲಿ ನಾನು ಯಾವ ಭೇದವನ್ನೂ ಮಾಡುವುದಿಲ್ಲ.

ಪ್ರಶ್ನೆ: ನಿಮಗೆ ಹೆಂಗಸರಲ್ಲಿ ಅತ್ಯಂತ ಮೆಚ್ಚುಗೆಯಾಗುವ ಗುಣ ಯಾವುದು?

ನಿಕೋಲ್ಸನ್: ಅವರು ಹೆಣ್ಣು ಗಂಡು ಎನ್ನುವುದಕ್ಕಿಂತ ಹೆಚ್ಚಾಗಿ ಒಬ್ಬ ವ್ಯಕ್ತಿಯಾಗಿರಬೇಕೆನ್ನುವುದು ನನ್ನಾಸೆ. ನಾನು ಈಚೆಗಷ್ಟೇ ಬರೆದ ಪುಸ್ತಕದಲ್ಲಿ ಹೇಗೆ ಒಂದು ಸಂಭಾಷಣೆ ಬೇರೆ ಬೇರೆ ಭೇದ ಹೊಂದುತ್ತದೆ ಎನ್ನುವುದರ ಬಗ್ಗೆ ಬರೆದಿದ್ದೇನೆ. ಅದೇಕೋ ನನ್ನ ವಿರುದ್ಧವಾಗಿದೆ ಅದು ಎನ್ನುವುದು ಸೋಜಿಗ. ನನ್ನ ಪುಸ್ತಕದಲ್ಲಿ ಬರುವ ಗಂಡು ನನ್ನ ತಲೆಮಾರಿನವನು. ಅವನ ಯೋಚನೆಗೂ ಅವನ ಸಂಗದಲ್ಲಿರುವ ಹೆಣ್ಣಿನ ಯೋಚನೆಗೂ ಇರುವ ವೈರುಧ್ಯಗಳ ಸುತ್ತ ಆ ಪುಸ್ತಕ ಗಿರಾಕಿ ಹೊಡೆಯುತ್ತೆ. ನಾವೆಲ್ಲರೂ ಹೇಗೆ ಭಿನ್ನವಾದ ಭಾವಾಭಿವ್ಯಕ್ತಿಯಲ್ಲಿ ಬದುಕುತ್ತಿದ್ದೇವೆ ಎಂಬುದೇ ಆ ಪುಸ್ತಕದ ಆಶಯ.

ಪ್ರಶ್ನೆ: ಹೆಂಗಸರೇ ನಿರ್ಧಾರದ ಮೊದಲ ಹೆಜ್ಜೆ ತೆಗೆದುಕೊಳ್ಳುವುದು ನಿಮಗೆ ಸಮ್ಮತವೇ?

ನಿಕೋಲ್ಸನ್: ಹಾಗಾಗಲಿ ಎಂಬುದೇ ನನ್ನಾಸೆ. ಆದರೆ ಅದೇಕೋ ನನ್ನ ಬಳಿ ಹೆಂಗಸರು ಅತೀವ ಸಂಕೋಚ ವ್ಯಕ್ತಪಡಿಸುತ್ತಾರೆ. ಅದೇನೋ ಗೊತ್ತಿಲ್ಲ.

ಪ್ರಶ್ನೆ: ಇದರ ಹಿಂದಿನ ರಹಸ್ಯ?

ನಿಕೋಲ್ಸನ್: ನಾನು ಲಭ್ಯನಿದ್ದೇನೆ.

ಪ್ರಶ್ನೆ: ನೀವು ತಾತ್ಕಾಲಿಕ ಸಂಬಂಧಗಳನ್ನು ಬಯಸುತ್ತೀರೋ ಅಥವಾ ದೀರ್ಘಕಾಲಿಕ ಸಂಬಂಧಗಳನ್ನೋ?

ನಿಕೋಲ್ಸನ್: ತಾತ್ಕಾಲಿಕ ಸಂಬಂಧ ನಿಭಾಯಿಸುವ ಎಲ್ಲ ಚಾಕಚಕ್ಯತೆ ನನಗಿದ್ದರೂ ನಾನು ಆ ಧೋರಣೆಯಲ್ಲಿ ಸಂಬಂಧಗಳನ್ನು ಬೆಳೆಸಿಕೊಳ್ಳುವುದಿಲ್ಲ.

ಪ್ರಶ್ನೆ: ನಿಮ್ಮ ಜೀವನದಲ್ಲಿ 'ಆ ಒಂದು ಪ್ರೇಮ' ಎನ್ನುವುದು ಇದೆಯೇ?

ನಿಕೋಲ್ಸನ್: ದುರದೃಷ್ಟವಶಾತ್ ಒಂದಕ್ಕಿಂತ ಹೆಚ್ಚೇ ಇದೆ! ನನಗೆ ಐವತ್ತೈದರ ಪ್ರಾಯದಲ್ಲಿ ಇನ್ನಾಗದು ಇಷ್ಟೇ ಸಾಕು ಎನಿಸಿದ್ದಂತೂ ಹೌದು. ಅದೇನೋ ಆ ವಯಸ್ಸಿನಲ್ಲಿ ಅಷ್ಟು ಉತ್ಸಾಹ ಉಳಿದಿರುವುದಿಲ್ಲವೆಂದು ನಂಬಿದ್ದೆ. ನಮಗೆ ಜೀವನದಲ್ಲಿ ಅದೂ ಆ ಹಂತದಲ್ಲಿ ಆದ್ಯತೆಗಳು ಬೇರೆಯಾಗುತ್ತಾ ಹೋಗುತ್ತವೆ ಮತ್ತು ನನ್ನ ಸ್ವಭಾವಕ್ಕೆ ಸಹಜವಾದ ನನ್ನ ತಿಕ್ಕಲುತನಗಳ ನಡುವೆ ಮತ್ತೊಂದು ಸಂಬಂಧಕ್ಕೆ ಕೈ ಚಾಚುವುದು ತ್ರಾಸದಾಯಕವೇ. ಒಟ್ಟಿನಲ್ಲಿ ಬೇಕೋ ಬೇಡವೋ ಎಂದು ದೃಢ ನಿರ್ಧಾರಕ್ಕೆ ಬರುವುದೂ ಸಹ ಒಂದು ಕಲೆ... ಅಲ್ಲಲ್ಲ... ವಿಜ್ಞಾನವೇ ಸರಿ!

ಪ್ರಶ್ನೆ: ಸುಮಾರು ಒಂದು ಸಂಬಂಧದ ಆಯಸ್ಸು ಎಷ್ಟು ತಿಂಗಳುಗಳು?


ನಿಕೋಲ್ಸನ್: ಸಾಧಾರಣವಾಗಿ ಮೊದಲ ಒಂದೂವರೆ ವರ್ಷದಲ್ಲಿ ಎಲ್ಲವೂ ಸರಿಯಾಗಿರುತ್ತದೆ. ಆ ಹುಡುಗಿಯ ಎಲ್ಲ ಆಯಾಮಗಳೂ ನಮಗೆ ಸರಿಯಾಗಿಯೇ ತೋರುತ್ತಿರುತ್ತವೆ. ಆದರೆ ಆ ನಂತರ ಹಾಗಲ್ಲ! ಎಲ್ಲೋ ಎಡವಟ್ಟಾಗಿದೆ ಎಣಿಸತೊಡಗುತ್ತದೆ.

ಪ್ರಶ್ನೆ: ಅದೇನೋ ತಿಕ್ಕಲುತನ ಅಂದ್ರಲ್ಲ... ಹಾಗಂದ್ರೆ?

ನಿಕೋಲ್ಸನ್: ಈ ವಿಚಾರದಲ್ಲಿ ನಮಗೆ ಸ್ವಲ್ಪ ಅಹಂಕಾರ ಜಾಸ್ತಿ ಅಂತಾನೆ ಹೇಳಬಹುದು. ನನಗೆ ಯಾರಾದರೂ ಇಷ್ಟವಾದಲ್ಲಿ ಅಷ್ಟಕ್ಕೇ ನನ್ನನ್ನು ಸೀಮಿತಗೊಳಿಸಿಕೊಳ್ಳುತ್ತೇನೆ. ನನಗೆ ಒಂದು ಬಾರಿ ಮದುವೆಯೂ ಆಗಿದೆ. ನನ್ನ ಮೊದಲನೇ ಮಗುವಿನ ತಾಯಿ... ಬುಧವಾರ ಮದುವೆ ಆಗೋಣ ಅಂದಳು... ಶುಕ್ರವಾರ ಮದುವೆಯನ್ನೂ ಆದ್ವಿ... ಇಲ್ಲೇ ಗೊಂದಲ ಶುರುವಾಗೋದು... ಒಬ್ಬ ವ್ಯಕ್ತಿಯಾಗಿ ನಮ್ಮನ್ನು ನಾವು ಅರ್ಥಮಾಡಿಕೊಳ್ಳುವುದೇ ಕಷ್ಟ... ಇನ್ನು ಮತ್ತೊಬ್ಬರೊಡನೆ ಕೂಡಿ ಬಾಳೋದು ಸಾಹಸವೇ ಸರಿ... ಇವತ್ತು ಸರಿ ಎನ್ನಿಸುವುದು ನಾಳೆ ತಪ್ಪು ಎನ್ನಿಸಬಹುದು... ಒಟ್ಟಿನಲ್ಲಿ ಒಬ್ಬ ವ್ಯಕ್ತಿ ನನಗೆ ಈ ಕಾರಣಕ್ಕೆ ಇಷ್ಟ ಎಂದೆಲ್ಲಾ ಯೋಚಿಸಿದೀರಾ ಎಂದಾದರೆ ನಾವು ಆ ಒಬ್ಬ ಪ್ರೀತಿಯ ವ್ಯಕ್ತಿಯನ್ನು ಹೊಂದುವುದು ದುಸ್ಸಾಹಸವೇ ಸರಿ!

ಪ್ರಶ್ನೆ: ನಿಮಗೆ ಜೀವನದಲ್ಲಿ ನೀವು ಮಾಡಿದ ಯಾವುದಾದರೂ ವಿಚಾರದ ಬಗ್ಗೆ ಪಶ್ಚಾತ್ತಾಪವಿದೆಯೇ?

ನಿಕೋಲ್ಸನ್: ಇರಬಹುದು. ಆದರೆ ನಾನದರ ಬಗ್ಗೆ ಯೋಚಿಸಲು ಹೋಗುವುದಿಲ್ಲ. ತಾರ್ಕಿಕವಾಗಿ ನೋಡಿದರೆ ಜೀವನದಲ್ಲಿ ನಾವು ಮಾಡಿದ ಯಾವುದರ ಬಗೆಯೂ ಪಶ್ಚಾತ್ತಾಪ ಉಂಟಾಗುವುದಿಲ್ಲ. ನಿಜ ಹೇಳಬೇಕೆಂದರೆ ನಾವು ಮಾಡದಿದ್ದ ವಿಚಾರಗಳ ಬಗ್ಗೆ ಅಯ್ಯೋ ಮಾಡಲಿಲ್ಲವಲ್ಲ ಎಂದು ಪಶ್ಚಾತ್ತಾಪ ಉಂಟಾಗಬಹುದಷ್ಟೇ.



ಕೊಂಕಣ ರೈಲಿನ ಹಿಂದೆ ಕೇರಳಿಗರ ಒತ್ತಾಯ ಕಂಡುಬಂದರೆ, ಕೈಗಾ ಮತ್ತು ನೌಕಾನೆಲೆಗಳು ರಾಷ್ಟ್ರೀಯ ಅಗತ್ಯ ಮತ್ತು ಸುರಕ್ಷಿತತೆಯ ಯೋಜನೆಗಳಾಗಿದ್ದು, ಸ್ಥಳದ ಅರ್ಹತೆಯ ಆಧಾರದ ಮೇಲೆ ಬಂದಿವೆ. ಕೊಂಕಣ ರೈಲು ಆರಂಭವಾದೊಡನೆ ತಮ್ಮ ಊರಿಗೂ ರೈಲುನಿಲುಗಡೆಯಾಗಬೇಕೆಂದು ಹೋರಾಟವಾಗಿದೆ. ಆದರೆ, ಕೊಂಕಣ ರೈಲಿಗೆ ಒಳನಾಡ ಸಂಪರ್ಕ ಕಲ್ಪಿಸುವ ಹುಬ್ಬಳ್ಳಿ-ಅಂಕೋಲ ಮತ್ತು ಹೊನ್ನಾವರ ರೈಲು ಮಾರ್ಗವಾಗಬೇಕೆಂದು ಅಂತಹ ಹೋರಾಟ ಕಂಡುಬರಲಿಲ್ಲ. ನೌಕಾನೆಲೆ ನಿರಾಶ್ರಿತರ ಬವಣೆ ಹೃದಯ ಕಲಕುವಂಥದ್ದು. ಅವರಿಗೆ ಸಿಗಬೇಕಾದ ನ್ಯಾಯವಾದ ಪರಿಹಾರಕ್ಕೆ ಅವರು ಇನ್ನೂ ನ್ಯಾಯಾಲಯಕ್ಕೆ ಅಲೆಯುತ್ತಿದ್ದಾರೆ. ಕೆಲವರು ಶಬರಿಯಂತೆ ಕಾಯ್ದು ಇಹಲೋಕ ತ್ಯಜಿಸಿದ್ದಾರೆ ಕೂಡಾ. ಒಬ್ಬೊಬ್ಬ ನಿರಾಶ್ರಿತನ ಹಿಂದೆ ಎದೆ ಒಡೆಯುವಂಥ ಕಥೆ ಇದೆ.

ಇದ್ದುದನ್ನು ಕಳೆದುಕೊಂಡು, ಸರಿಯಾಗಿ ಪರಿಹಾರ ಸಿಗದೇ, ಉದ್ಯೋಗವೂ ಸಿಗದೆ ಸಾವು-ಬದುಕಿನ ಮಧ್ಯೆ ಹೋರಾಡುತ್ತಿದ್ದಾರೆ. ಈ ಯೋಜನೆಯ ಆರಂಭದ ಹಂತದಲ್ಲಿ ಅದನ್ನು ಪೂರ್ಣವಾಗಿ ತಡೆಯುವ ಯತ್ನ ಮಾಡಲಾಯಿತು. ರಾಷ್ಟ್ರೀಯ ಯೋಜನೆಗಳಿಗೆ, ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಯ ಸುರಕ್ಷಾ ಯೋಜನೆಗಳಿಗೆ ತಡೆ ತರುವುದು [illegible] ಗೆದ್ದೇ ಬಿಡುತ್ತೇವೆ ಎನ್ನುವ ಹುಮ್ಮಸ್ಸಿನಲ್ಲಿ ಹೋರಾಟದ ಧಾವಂತದಲ್ಲಿ ವಾಸ್ತವಿಕತೆಯನ್ನು ನಿರ್ಲಕ್ಷಿಸಿ, ಬದಲಿ ಏನೆಂದು ಯೋಚಿಸಲಿಲ್ಲ. ಈ ಯೋಜನೆಯಿಂದ ಸಿಗಬಹುದಾದ ಅನುಕೂಲ ಮತ್ತು ಲಾಭದ ಬಗೆಗೆ ಹೆಚ್ಚು ಯೋಚಿಸಲಿಲ್ಲ.

ಹೋರಾಟದೊಂದಿಗೆ ಸ್ಥಳೀಯರಿಗೆ ಉದ್ಯೋಗ ಮತ್ತು ಸಮರ್ಪಕ ಮತ್ತು ಸಮಯಪರಿಮಿತಿ ಯೊಳಗೆ ಪರಿಹಾರದ ಬಗೆಗೆ ಹೆಚ್ಚು ಒತ್ತಡ ಇರಬೇಕಿತ್ತು. ನಿರಾಶ್ರಿತರು ಹೋರಾಟ ನಡೆಸಿದಂತೆ ನೌಕಾನೆಲೆಯವರು ತಮಗೆ ಏನೂ ಸಂಬಂಧವಿಲ್ಲದಂತೆ ತಮ್ಮ ಕಾರ್ಯನಡೆಸಿಕೊಂಡು ಹೋದರು. ಹೊರ ರಾಜ್ಯದಿಂದ ಜನರು ಬಂದು ಸ್ಥಳೀಯರಿಗೆ ನ್ಯಾಯವಾಗಿ ಸಿಗಬೇಕಾದ ತುತ್ತಿಗೆ ಎರವಾದರು. ನಿರಾಶ್ರಿತರು ಎಚ್ಚೆತ್ತುಕೊಳ್ಳುವ ಹೊತ್ತಿಗೆ ಕಾಲ ಮೀರಿತ್ತು. ಈಗ ಅಂತಹ ಉದ್ಯೋಗದ ಪ್ರಮಾಣ ಕಾಣುತ್ತಿಲ್ಲ. ಈಗಾಗಲೇ ಉದ್ಯೋಗದಲ್ಲಿದ್ದವರನ್ನು ಹೊರಗೋಡಿಸಿ ಸ್ಥಳೀಯರಿಗೆ ಉದ್ಯೋಗ ಕೊಡಲು ಸಾಧ್ಯವಿಲ್ಲ. ಹೋರಾಟಕ್ಕೆ ಆರಂಭದಲ್ಲಿ ಇದ್ದ ಬೆಂಬಲ ದಿನಕಳೆದಂತೆ ಕಡಿಮೆಯಾಯಿತು? ರಾಜಕಾರಣಿಗಳಿಂದ ನಿರೀಕ್ಷಿಸಿದ ಬೆಂಬಲ ಸಿಗಲಿಲ್ಲವೆನ್ನುವ ಆರೋಪವೂ ಇದೆ. ನಿರಾಶ್ರಿತರು ಕೊಟ್ಟ ನೂರಾರು ಮನವಿಗಳು ಕಡತ ಸೇರಿದವೇ ವಿನಃ ದೊರೆಯ ಕಣ್ಣಿಗೆ ಕಾಣಲಿಲ್ಲ ಮತ್ತು ಕಿವಿಗೆ ಕೇಳಿಸಲಿಲ್ಲ. ಚತುಷ್ಪಥ ರಸ್ತೆಯ ಮಾರ್ಗವನ್ನು ಈ ಹೋರಾಟ ಹಿಡಿದರೆ ಆಶ್ಚರ್ಯವಿಲ್ಲ.

ಸ್ಥಳೀಯರಿಗೆ ಉದ್ಯೋಗಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರುವ ಮಾತುಗಳೂ ಕೇಳಿಬರುತ್ತಿದೆ. ಇಂತಹ ಪ್ರಕರಣದಲ್ಲಿ ನ್ಯಾಯಾಲಯವು ರಾಷ್ಟ್ರೀಯ ದೃಷ್ಟಿಕೋನದಲ್ಲಿ ನೋಡುವುದರಿಂದ, ನಿರೀಕ್ಷಿತ ನ್ಯಾಯ ದೊರಕುವುದು ಕಷ್ಟ. ಕನ್ನಡಿಗರು ಚಲನಚಿತ್ರಮಂದಿರಗಳಲ್ಲಿ ಕಡ್ಡಾಯ ಕನ್ನಡ ಚಿತ್ರ ಪ್ರದರ್ಶನ, ಡಬ್ಬಿಂಗ್ ವಿರೋಧ, ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ನಾಮಫಲಕದಲ್ಲಿ ಕಡ್ಡಾಯ ಕನ್ನಡ ಬಳಸುವಿಕೆ ಮುಂತಾದ ವಿಷಯಗಳಲ್ಲಿ ಈಗಾಗಲೇ ಹಿನ್ನಡೆ ಅನುಭವಿಸಿದ್ದಾರೆ. ಈ ಪ್ರಕರಣವೂ ಇದೇ ಹಾದಿ ಹಿಡಿದರೆ?

ಆಡಳಿತಾತ್ಮಕ ಮತ್ತು ಜನಪ್ರತಿನಿಧಿಗಳ ಸಹಕಾರದಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಹೋರಾಟಗಾರರು ಸರಿಯಾಗಿ ಅಧ್ಯಯನ ಮಾಡಿ ಮುಂದುವರಿಯುವುದು ಒಳಿತು. ಆವೇಶದಿಂದ ಕಾರ್ಯಸಾಧ್ಯ ಕಷ್ಟ. ಈಗಿನ ಹೋರಾಟದ ಕಾವು 25 ವರ್ಷಗಳ ಹಿಂದೆ ಇದ್ದಿದ್ದರೆ? ಬಹುಶಃ ಈ ಪ್ರಶ್ನೆ ಇರುತ್ತಿರಲಿಲ್ಲವೇನೋ?

ಮುಂದಿನ ದಿನಗಳಲ್ಲಿ ಈ ಜಿಲ್ಲೆಯಲ್ಲಿ ಹುಬ್ಬಳ್ಳಿ-ಅಂಕೋಲಾ ರೈಲು, ಹೊನ್ನಾವರ- ಭಟಕಲ್ ರೈಲು, ಹಲವು ಬಂದರುಗಳ ಮತ್ತು ಚತುಷ್ಪಥ ರಸ್ತೆಯ ನಿರ್ಮಾಣಕ್ಕೆ ಚಾಲನೆ ದೊರಕುವ ಸಾಧ್ಯತೆಗಳಿದ್ದು ಮತ್ತು ಅಂಕೋಲಾದಲ್ಲಿ ಒಂದು ಉಕ್ಕು ಕಾರ್ಖಾನೆ ಸ್ಥಾಪಿಸುವ ಸೂಚನೆ ಇದ್ದು, ಸ್ಥಳೀಯರಿಗೆ ಉದ್ಯೋಗದ ನಿಟ್ಟಿನಲ್ಲಿ ಈಗಲೇ ಕಾರ್ಯತಂತ್ರ ರಚಿಸಬೇಕು. ಇಲ್ಲದಿದ್ದರೆ ನೌಕಾ ನೆಲೆ ಮತ್ತು ಕೈಗಾದಲ್ಲಿ ಆದ ಗತಿಯೇ ಇಲ್ಲಿಯೂ ಪುನರಾವರ್ತನೆಯಾದರೆ ಸಂದೇಹವಿಲ್ಲ.

- ರಮಾನಂದ ಶರ್ಮಾ, ಬೆಂಗಳೂರು

ಮೋದಿ ಭಾರತವನ್ನು ದುಬಾರಿಯ ದಿನಗಳಿಗೆ ಒಯ್ಯಲಿದ್ದಾನೆ. ವಿಪರೀತ ವಿರೋಧ ಬಂದರೆ ಒಂದು ಯುದ್ಧ ಮಾಡಿ ಜನರನ್ನು ಮರಳು ಮಾಡಲಿದ್ದಾನೆ. ಪಾಪ, ಅದನಿ, ಅಂಬಾಣಿ, ಟಾಟಾ, ಬಿರ್ಲಾ, ಸಿಂಘಾನಿಯಾ, ಬಜಾಜ್, ಐಟಿಬಿಟಿಗಳು ಇತ್ಯಾದಿ 'ಕಡು ಬಡವರು' ಮಾತ್ರ ಇವನ ಕೃಪೆಯಿಂದ ಏಳಿಗೆಯಾಗುತ್ತಾರೆ. ಇವನನ್ನು ಪಡೆದ (ಆರೆಸ್ಸೆಸ್‌ನ) ಭಾರತ ಮಾತೆ ಧನ್ಯ.

- ರವಿಕುಮಾರ್, ಹಾಸನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಪುನೀತ್-ರಮ್ಯ ಮತ್ತೆ ಮತ್ತೆ

'ಅಭಿ', 'ಆಕಾಶ್', 'ಅರಸು' ನಂತರ ಪುನೀತ್-ರಮ್ಯ ಮತ್ತೆ ಒಟ್ಟಿಗೆ ನಟಿಸುತ್ತಿದ್ದಾರೆ. ಈ ಯಶಸ್ವೀ ಜೋಡಿ ಮತ್ತೆ ಒಂದಾಗುತ್ತಿರುವ ಚಿತ್ರದ ಹೆಸರು 'ದೊಡ್ಮನೆ ಹುಡುಗ'. ಸೂರಿ ಈ ಚಿತ್ರದ ನಿರ್ದೇಶಕ. ಈ ಮೊದಲು ಈ ಚಿತ್ರದಲ್ಲಿ ಪುನೀತ್-ರಮ್ಯ ಒಟ್ಟಿಗೆ ನಟಿಸುತ್ತಿದ್ದಾರೆ ಎಂಬ ಸುದ್ದಿ ಅಲ್ಲಲ್ಲಿ ಕೇಳಿಬರುತ್ತಿದ್ದು 'ಹೌದು' ಎಂಬುದಾಗಿ ಇದೀಗ ಸ್ವತಃ ಸೂರಿಯೇ ಕನ್ಫರ್ಮ್ ಮಾಡಿದ್ದಾರೆ. ಸದ್ಯಕ್ಕೆ 'ರಣವಿಕ್ರಮ' ಎಂಬ ಚಿತ್ರದಲ್ಲಿ ಪುನೀತ್ ಬ್ಯುಸಿಯಿದ್ದು ಆ ಚಿತ್ರದ ನಂತರವಷ್ಟೇ 'ದೊಡ್ಮನೆ ಹುಡುಗ'ದಲ್ಲಿ ನಟಿಸಲಿದ್ದಾರೆ.

ಅಂದಹಾಗೆ ಚುನಾವಣೆಯಲ್ಲಿ ಪರಾಭವಗೊಂಡ ನಂತರ ರಮ್ಯ ಮತ್ತೆ ಚಿತ್ರರಂಗದತ್ತ ಮುಖ ಮಾಡುತ್ತಿದ್ದಾರೆ ಎಂಬ ಮಾತುಗಳು ಅಲ್ಲಲ್ಲಿ ಕೇಳಿಬರುತ್ತಿದ್ದು ಈಗ ಸೀರಿಯಸ್ಸಾಗಿ ಸಿನಿಮಾಯೆಡೆಗೆ ಆಸಕ್ತರಾಗುತ್ತಿರುವುದು ನಿಜಕ್ಕೂ ಒಳ್ಳೆಯ ಬೆಳವಣಿಗೆ.

ಬ್ಯಾಕ್ ಟು ಪೆವಿಲಿಯನ್

ನಮಸ್ಕಾರ ನಮಸ್ಕಾರ ನಮಸ್ಕಾರ... ಅಂತ ಸಂಜೆ ಹೊತ್ತಿನಲ್ಲಿ ಉದಯ ಟಿವಿಯ 'ಕಾಮಿಡಿ ಟೈಂ' ಕಾರ್ಯಕ್ರಮದಲ್ಲಿ ಕಾಣಿಸಿಕೊಂಡು ಜನಪ್ರಿಯತೆ ಗಳಿಸಿದ ಗಣೇಶ್ 'ಕಾಮಿಡಿ ಟೈಂ ಗಣೇಶ್' ಅಂತಲೇ ಫೇಮಸ್ಸಾಗಿ, ಅಲ್ಲಲ್ಲಿ ಸಣ್ಣ ಪುಟ್ಟ ಕಾಮಿಡಿ ರೋಲ್‌ಗಳನ್ನೂ ಮಾಡಿಕೊಂಡು ಕಡೆಗೆ 'ಚೆಲ್ಲಾಟ' ಚಿತ್ರದ ಮೂಲಕ ಹೀರೋ ಆಗಿದ್ದು ನಿಮಗೆಲ್ಲ ಗೊತ್ತು. ಇಂಥ ಕಾಮಿಡಿ ಟೈಂ ಗಣೇಶ್ 'ಮುಂಗಾರುಮಳೆ' ಚಿತ್ರ ಹಿಟ್ ಆದನಂತರ ಗೋಲ್ಡನ್ ಸ್ಟಾರ್ ಗಣೇಶ್ ಕೂಡ ಆದರು. ಅಲ್ಲಿಂದಾಚೆಗೆ ಮುಟ್ಟಿದ್ದೆಲ್ಲ ಚಿನ್ನ ಎನ್ನುವ ಇಮೇಜು ಗಿಟ್ಟಿಸಿಕೊಂಡು, ಕೋಟಿ ರೂಪಾಯಿ ಸಂಭಾವನೆ ಪಡೆವ ನಟ ಎನ್ನಿಸಿಕೊಂಡು ಸಾಕ್ಷಾತ್ ಪುನೀತ್ ರಾಜಕುಮಾರ್‌ರನ್ನೇ ಹಿಂದಿಕ್ಕಿ ಒಂದಿಷ್ಟು ಕಾಲ ಮೆರೆದರು. ಆದರೆ ಆನಂತರ ಅದೇಕೋ ಸೋಲುಗಳ ಮೇಲೆ ಸೋಲು ಅನುಭವಿಸತೊಡಗಿದರು. ತಮ್ಮದೇ ಬ್ಯಾನರಿನಡಿ ಸಿನಿಮಾ ಮಾಡಿದರೂ ವ್ಯಾಪಾರವಾಯಿತೆ ಹೊರತು, ಸಿನಿಮಾ ಓಡಲಿಲ್ಲ, ಕಡೆಗೆ ಏನೇನೋ ಸರ್ಕಸ್ ಮಾಡಿದರೂ, ನಿರ್ದೇಶನ ಮಾಡಿದರೂ ಉಹುಂ... ಗಣೇಶ್ ಮತ್ತೆ ಮೇಲೆ ಏಳಲೇ ಇಲ್ಲ, ಯಾವೊಬ್ಬ ನಿರ್ಮಾಪಕನೂ ಮೂಸಿನೋಡದಷ್ಟು ಹೀನಾಯ ಸ್ಥಿತಿ ಎದುರಿಸಬೇಕಾಯಿತು.

ಇಂತಹ ಅಮೋಘ ಇತಿಹಾಸವಿರುವ ಗಣೇಶ್ ಮತ್ತೆ ಕಿರುತೆರೆಯತ್ತ ಮುಖ ಮಾಡಿದ್ದಾರೆ. ಈ ಬಾರಿ 'ಈ-ಟಿವಿ' ಮೂಲಕ ಇಂಥದೊಂದು ಕೆಲಸಕ್ಕೆ ಕೈ ಹಾಕುತ್ತಿದ್ದಾರೆ. 'ಬಿಗ್ ಬಾಸ್', 'ಇಂಡಿಯನ್', 'ತಕಧಿಮಿತ ಡಾನ್ಸಿಂಗ್ ಸ್ಟಾರ್' ತರಹದ ಕಾರ್ಯಕ್ರಮಗಳು ಕ್ಲಿಕ್ಕಾದ ನಂತರ ಈ-ಟಿವಿ 'ಸೂಪರ್ ಸೆಕೆಂಡ್' ಎಂಬುದೊಂದು ಕಾರ್ಯಕ್ರಮ ರೂಪಿಸುವತ್ತ ಯೋಚಿಸಿದೆ. ಅದನ್ನು ಗಣೇಶ್ ನಡೆಸಿಕೊಡುತ್ತಾರಂತೆ. ಬ್ಯಾಕ್ ಟು ಪೆವಿಲಿಯನ್ ಅಂದರೆ ಇದೇನಾ?







ಮುಮ್ತಾಜ್ ಮಾಯೆ ಶುರು

ನವಗ್ರಹ ಚಿತ್ರದ 'ಕಣ್ ಕಣ್ಣ ಸಲಿಗೆ' ಎಂಬ ಹಾ... ನಿಮಗೆಲ್ಲ ನೆನಪಿರಬಹುದು. ಆ ಹಾಡಿನಲ್ಲಿ ಒ... ಕಾಣಿಸಿಕೊಂಡಿದ್ದ ಧರ್ಮ ಕೀರ್ತಿರಾಜ್ ಮತ್ತು ಶರ್ಮಿ... ಮಾಂಡ್ರೆ ಮತ್ತೆ ಒಟ್ಟಿಗೆ ನಟಿಸುತ್ತಿದ್ದಾರೆ. ಆ ಚಿ... ಹೆಸರು 'ಮುಮ್ತಾಜ್' ಅಂತ. ತಾಜ್ ಮಹ... ನಿರ್ಮಿಸಿದ ಷಾಜಹಾನ್‌ನ ಪ್ರೇಯಸಿ ಈ ಮುಮ್ತಾ... ಆಕೆಯ ಹೆಸರನ್ನು ಹೊಂದಿರುವ ಈ 'ಮುಮ್ತಾ... ಸಿನಿಮಾ ಒಂದು ಪ್ರೇಮಕತೆ ಎಂದು ತಾ... ಅರ್ಥಮಾಡಿಸಬಲ್ಲದು. ಇತ್ತೀಚೆಗಷ್ಟೇ ಮುಹೂ... ಆಚರಿಸಿಕೊಂಡ ಈ ಚಿತ್ರಕ್ಕೆ ಸುದೀಪ್, ದರ್ಶ... ಕೀರ್ತಿರಾಜ್ ಒಳಗೊಂಡಂತೆ ಚಿತ್ರರಂಗದ ಅ... ಹಿರಿಯರು ಬಂದು ಆಶೀರ್ವದಿಸಿ ಹೋಗಿದ್ದ... ರಾಘವ ಮುರಳಿ ಎಂಬುವವರು ನಿರ್ದೇಶಿಸುತ್ತಿ... ಈ ಸಿನಿಮಾ ಆಗ್ರಾ, ಬಿಜಾಪುರ, ಕೆ.ಜಿ.ಎ... ಮೈಸೂರುಗಳಲ್ಲಿ ಒಟ್ಟು ನಲವತ್ತೈದು ದಿನಗಳ ಶೂಟಿ... ಮಾಡಿಕೊಳ್ಳಲಿದೆ. ಹತ್ತೊಂಭತ್ತು ವರ್ಷ ವಯಸ್ಸಿನ ಪ್ರವಿ... ಎಂಬ ಹುಡುಗ ಈ ಚಿತ್ರಕ್ಕೆ ಸಂಗೀತ ನೀಡಿದರೆ, ಹರಿ... ನಾಯಕ್ ಎಂಬುವವರು ಛಾಯಾಗ್ರಾಹಕ. ಉಳಿದಂತೆ ರಿಯಲ್ ಎಸ್ಟೇ... ಉದ್ಯಮಿ ನರಸಿಂಹ ಮೂರ್ತಿ ಕಾಸು ಹಾಕುತ್ತಾರೆ.

'ಮೇಡಂ'ಗೊಂದು ರೋಚಕ ಹಾಡು

ತೆಲುಗಿನ 'ಮಿಸ್ಸಮ್ಮ' ಕನ್ನಡದಲ್ಲಿ 'ನಮಸ್ತೇ ಮೇಡಂ' ಆಗುತ್ತಿದ್ದಾಳೆ. ಶ್ರೀನಗರ ಕಿಟ್ಟಿ-ರಾಗಿಣಿ ದ್ವಿವೇದಿ ಅಭಿನಯದ ಈ ಚಿತ್ರದ ಚಿತ್ರೀಕರಣ ಈಗಾಗಲೇ ಮುಗಿದಿದ್ದು ಸದ್ಯದಲ್ಲೇ ಹಾಡುಗಳು ಹೊರಬರಲಿವೆ. ಈ ಚಿತ್ರದಲ್ಲಿ 'ಕಣ್ಣು ಕೇಳುತ್ತಿದೆ' ಎಂಬುದೊಂದು ಹಾಡಿದ್ದು 'ಕಾಮಸೂತ್ರ' ಶೈಲಿಯ ಹಾಡಂತೆ. ಈ ಗೀತೆಯು ವಿಶಿಷ್ಟವಾಗಿದ್ದು ಕಿಟ್ಟಿ-ರಾಗಿಣಿ ಜೋಡಿ ರೋಚಕವಾಗಿ ಕಾಣಿಸಿಕೊಂಡಿದೆಯಂತೆ. ಈ ಮೊದಲು ದರ್ಶನ್ ಅಭಿನಯದ 'ಬಾಸ್' ಚಿತ್ರವನ್ನು ನಿರ್ದೇಶಿಸಿದ್ದ ರಘುರಾಜ್ ಈ ಚಿತ್ರದ ನಿರ್ದೇಶಕರಾಗಿದ್ದು ಈ ಚಿತ್ರದ ಬಗ್ಗೆ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದಾರಂತೆ. ತೆಲುಗಿನಲ್ಲಿ ಹಿಟ್ ಆಗಿ... 'ಮಿಸ್ಸಮ್ಮ' ಚಿತ್ರವನ್ನು ಕನ್ನಡಕ್ಕೆ ತರುವ ಸಂದರ್ಭದಲ್ಲಿ ವಿನಾಯಕರಾ... ಕಲಗಾರು, ಸುಧೀಂದ್ರ ಭಾರದ್ವಾಜ್ ಒಳ್ಳೆಯ ಸಂಭಾಷಣೆ ಬರೆದಿರುವ... ಈ ಚಿತ್ರದ ಪ್ಲಸ್ ಪಾಯಿಂಟ್‌ಗಳಲ್ಲಿ ಒಂದಂತೆ.



ಆರ್ಯನ್ ಹದಿನೆಂಟಕ್ಕೆ

ಶಿವರಾಜಕುಮಾರ್ ಅಭಿನಯದ 'ಆರ್ಯನ್' ಇದೇ ಜುಲೈ ಹದಿನೆಂಟಕ್ಕೆ ಬಿಡುಗಡೆಯಾಗುವ ಸೂಚನೆಗಳು ಕಂಡುಬರುತ್ತಿದೆ. ಈಗಾಗಲೇ ಈ ಚಿತ್ರದ ಹಾಡುಗಳು ಬಿಡುಗಡೆಯಾಗಿದ್ದು ಒಳ್ಳೆಯ ರೆಸ್ಪಾನ್ಸ್ ಕಂಡುಬರುತ್ತಿದೆ ಎಂಬುದು ಚಿತ್ರತಂಡದ ಮಾತು. ಈ ಮೊದಲು ರಾಜೇಂದ್ರ ಬಾಬು ಅವರು ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು ಅವರು ತೀರಿಕೊಂಡಿದ್ದರಿಂದ ಆ ಜ... ಮಹೇಂದರ್ ಬಂದು ಚಿತ್ರ ಪೂರ್ತಿ ಮಾಡಿದ್ದಾರೆ. ಶಿವರಾಜಕುಮಾರ್ ತು... ನಿರೀಕ್ಷೆ ಇಟ್ಟುಕೊಂಡಿರುವ ಈ ಚಿತ್ರದಲ್ಲಿ ಶಿವಣ್ಣನ ಎದುರಿಗೆ ರ... ನಟಿಸಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com